ಗುರುವಾರ, ಆಗಸ್ಟ್ 17, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 228 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 1,402 ಸ್ಪೆಷಲ್ ಆಫೀಸರ್ಸ್ ಹುದ್ದೆಗಳು



ಆಳ-ಅಗಲ
ನಿಲ್ಲದ ಹಣ ವಸೂಲಿ ನೀಡದ ಮೂಲಸೌಲಭ್ಯ

ಪ್ರತಿ ಪಂಚಾಯಿತಿಗೂ 3 ಹೊಸ ಶಾಲೆ: ಡಿ.ಕೆ.ಶಿವಕುಮಾರ್ 5

ನೆಹರೂ ಸ್ಮಾರಕ ಮ್ಯೂಸಿಯಂ ಹೆಸರು ಬದಲಾವಣೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
65,539 ▲	19,465 ▲	₹60,700 (ಬೆಂಗಳೂರು)	₹72,300 (ಬೆಂಗಳೂರು)

ರಾಜ್ಯದ ಎರಡು ಟೋಲ್ ಘಟಕಗಳಲ್ಲಿ ನಿಯಮ ಉಲ್ಲಂಘಿಸಿ ಸಂಗ್ರಹ: ಸಿಎಜಿ ವರದಿ

₹76 ಕೋಟಿ ಅಕ್ರಮ 'ಟೋಲ್'

• ಜಯಸಿಂಹ ಆರ್.

ಬೆಂಗಳೂರು: ರಾಜ್ಯವನ್ನು ಹಾದು ಹೋಗುವ ಬೆಂಗಳೂರು–ಮುಂಬೈ ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಇರುವ ಎರಡು ಟೋಲ್ ಘಟಕಗಳಲ್ಲಿ ನಿಯಮ ಮೀರಿ ₹75.95 ಕೋಟಿ ಶುಲ್ಕವನ್ನು ಸಂಗ್ರಹಿಸಲಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿಯು ಹೇಳಿದೆ.

ಸಿಎಜಿ ಸಿದ್ಧಪಡಿಸಿರುವ 'ದಕ್ಷಿಣ ಭಾರತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಘಟಕಗಳ ನಿರ್ವಹಣೆ' ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿನ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಒಟ್ಟು 151 ಟೋಲ್ ಘಟಕಗಳು ಇದ್ದು, ಅವುಗಳಲ್ಲಿ 41 ಘಟಕಗಳನ್ನು ಪರಿಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. 2017–18ನೇ ಸಾಲಿನಿಂದ 2022ರ ಜನವರಿವರೆಗೆ ಪರಿಶೋಧನೆ ನಡೆಸಲಾಗಿದೆ. ಪರಿಶೋಧನೆಗೆ ಆಯ್ಕೆ ಮಾಡಿಕೊಂಡ 41 ಘಟಕಗಳಲ್ಲಿ, ಕರ್ನಾಟಕದ ಹೆಬ್ಬಾಳು ಮತ್ತು ಚಳಗೇರಿ, ಆಂಧ್ರಪ್ರದೇಶದ ನಾಥವಲಸ ಟೋಲ್ ಘಟಕಗಳಲ್ಲಿ ನಿಯಮ ಉಲ್ಲಂಘಿಸಿ ಒಟ್ಟು ₹124.18 ಕೋಟಿ ಶುಲ್ಕ ಸಂಗ್ರಹಿಸಲಾಗಿದೆ.


ರಾಷ್ಟ್ರೀಯ ಹೆದ್ದಾರಿಯನ್ನು ನಾಲ್ಕು ಪಥಗಳಿಂದ ಆರು ಪಥಗಳಿಗೆ ಮೇಲ್ದರ್ಜೆಗೆ ಏರಿಸುವಾಗ ಶುಲ್ಕ ಕಡಿತ ಮಾಡಬೇಕು. ಜತೆಗೆ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣವಾಗದೇ ಇದ್ದರೆ, ಕಾಮಗಾರಿ ಮುಗಿಯಬೇಕಿದ್ದ ದಿನಾಂಕ ಮತ್ತು ಕಾಮಗಾರಿ ಮುಗಿದ ದಿನಾಂಕದ ನಡುವಣ ಅವಧಿಯಲ್ಲಿ ಶುಲ್ಕ ವಿಧಿಸಬಾರದು ನಿಯಮ ಹೇಳುತ್ತದೆ. ಹೆದ್ದಾರಿ ಪ್ರಾಧಿಕಾರವು ಈ ನಿಯಮವನ್ನು ಉಲ್ಲಂಘಿಸಿದೆ ಎಂದು ಸಿಎಜಿ ಹೇಳಿದೆ.

ಎಲ್ಲಿ ಸಂಗ್ರಹಿಸಲಾಗಿತ್ತು

ಬೆಂಗಳೂರು–ಮುಂಬೈ ರಾಷ್ಟ್ರೀಯ ಹೆದ್ದಾರಿ–48 ಕರ್ನಾಟಕದ ಹಲವು ಜಿಲ್ಲೆಗಳನ್ನು ಹಾದು ಹೋಗುತ್ತದೆ. ಇವುಗಳಲ್ಲಿ ಚಿತ್ರದುರ್ಗ–ದಾವಣಗೆರೆ–ಹಾವೇರಿ ಜಿಲ್ಲೆಗಳ ನಡುವಣ ಒಟ್ಟು 132 ಕಿ.ಮೀ. ಉದ್ದದ ಹೆದ್ದಾರಿಗೆ ಅನ್ವಯವಾಗುವ 'ಹೆಬ್ಬಾಳು ಟೋಲ್ ಘಟಕ' ಮತ್ತು 'ಚಳಗೇರಿ ಟೋಲ್ ಘಟಕ'ಗಳಲ್ಲಿ ಅಕ್ರಮವಾಗಿ ಶುಲ್ಕ ಸಂಗ್ರಹಿಸಲಾಗಿದೆ.

ಈ ಎರಡೂ ಟೋಲ್ ಘಟಕಗಳ ವ್ಯಾಪ್ತಿಗೆ ಬರುವ ಹೆದ್ದಾರಿಯನ್ನು ನಾಲ್ಕು ಪಥಗಳಿಂದ ಆರು ಪಥಗಳಿಗೆ ಮೇಲ್ದರ್ಜೆಗೆ ಏರಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು. ಗುತ್ತಿಗೆ ಒಪ್ಪಂದದ ಪ್ರಕಾರ 2020ರ ಜುಲೈ 24ರಂದು ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಕಾಮಗಾರಿ ಪೂರ್ಣಗೊಳ್ಳದೇ ಇದ್ದರೂ 2020ರ ಜುಲೈನಿಂದ ಶುಲ್ಕ ಸಂಗ್ರಹ ಆರಂಭಿಸಲಾಗಿದೆ. ಕಾಮಗಾರಿ ಪೂರ್ಣಗೊಂಡಿದ್ದು 2021ರ ಮಾರ್ಚ್‌ನಲ್ಲಿ. ನಿಯಮಗಳ ಪ್ರಕಾರ ಶುಲ್ಕ ಸಂಗ್ರಹಿಸಬಾರದು. ಆದರೂ ಈ ಅವಧಿಯಲ್ಲಿ ಶುಲ್ಕ ಸಂಗ್ರಹಿಸಲಾಗಿದೆ.

ನಿಯಮ ಹೇಳುವುದೇನು...
'ನಿಗದಿತ ದಿನದಂದು ಕಾಮಗಾರಿ ಪೂರ್ಣಗೊಳ್ಳದೇ ಇದ್ದರೆ, ಕಾಮಗಾರಿ ಪೂರ್ಣಗೊಳ್ಳುವವರೆಗೆ ಶುಲ್ಕ ಸಂಗ್ರಹಿಸುವಂತಿಲ್ಲ' ಎಂದು ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು–2008ರ 4(9)ನೇ ಸೆಕ್ಷನ್ ಹೇಳುತ್ತದೆ.



ಚಳಗೇರಿ ಟೋಲ್ ಘಟಕ
ಈ ಟೋಲ್ ಘಟಕದ ವ್ಯಾಪ್ತಿಗೆ ಬರುವ ಹೆದ್ದಾರಿ
60.98 ಕಿ.ಮೀ.
ಈ ಘಟಕದ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿಯ ಉದ್ದ
ಜುಲೈ 2020–ಮಾರ್ಚ್ 2021
ಅಕ್ರಮವಾಗಿ ಶುಲ್ಕ ಸಂಗ್ರಹಿಸಿದ ಅವಧಿ
₹40.26 ಕೋಟಿ
ಈ ಅವಧಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಶುಲ್ಕದ ಒಟ್ಟು ಮೊತ್ತ

ಹೆಬ್ಬಾಳು ಟೋಲ್ ಘಟಕ
ಈ ಟೋಲ್ ಘಟಕದ ವ್ಯಾಪ್ತಿಯ ಹೆದ್ದಾರಿ
71 ಕಿ.ಮೀ.
ಈ ಘಟಕದ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿಯ ಉದ್ದ
ಜುಲೈ 2020–ಮಾರ್ಚ್ 2021
ಅಕ್ರಮವಾಗಿ ಶುಲ್ಕ ಸಂಗ್ರಹಿಸಿದ ಅವಧಿ
₹35.69 ಕೋಟಿ
ಈ ಅವಧಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಶುಲ್ಕದ ಒಟ್ಟು ಮೊತ್ತ

₹75.95 ಕೋಟಿ
ಈ ಎರಡೂ ಟೋಲ್ ಘಟಕಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಶುಲ್ಕದ ಒಟ್ಟು ಮೊತ್ತ

₹124.18 ಕೋಟಿ
ಆಂಧ್ರಪ್ರದೇಶದ ಟೋಲ್ ಘಟಕವೂ ಸೇರಿ, ಮೂರು ಕಡೆ ಅಕ್ರಮವಾಗಿ ಸಂಗ್ರಹಿಸಿದ ಶುಲ್ಕದ ಒಟ್ಟು ಮೊತ್ತ



ಭೂಕುಸಿತ ಶಿಮ್ಲಾದ ಕೃಷ್ಣನ್ ನಗರ ವಾರ್ಡ್‌ನಲ್ಲಿ ಭೂಕುಸಿತದಿಂದಾಗಿ ಬುಧವಾರ ಹಲವು ಮನೆಗಳು ಹಾನಿಗೊಳಗಾದವು –ಪಿಟಿಐ ಚಿತ್ರ

ಚಂದ್ರಯಾನ-3: ಲ್ಯಾಂಡರ್ ಬೇರ್ಪಡಿಸುವ ಪ್ರಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಂದ್ರಯಾನ–3'ರ ಬಾಹ್ಯಾಕಾಶ ನೌಕೆಯ ಅಂತಿಮ ಹಂತದ ಕಕ್ಷೆ ಬದಲಾವಣೆ ಬುಧವಾರ ಯಶಸ್ವಿಯಾಗಿ ನೆರವೇರಿತು. ಮುಂದಿನ ಬುಧವಾರ (ಆ.23) ಚಂದ್ರನ ದಕ್ಷಿಣ ಧ್ರುವದ ಅಂಗಳಕ್ಕೆ ಚಂದ್ರಯಾನದ ಲ್ಯಾಂಡರ್ ಅನ್ನು ಇಳಿಸಲಾಗುವುದು.

'ಚಂದ್ರ ಸ್ಪರ್ಶ'ಕ್ಕೆ ಪೂರಕವಾಗಿ ಐದನೇ ಮತ್ತು ಕೊನೆಯ ಹಂತದ ಕಕ್ಷೆ ಬದಲಾಯಿಸುವ ಮೂಲಕ ಬಾಹ್ಯಾಕಾಶ ನೌಕೆಯನ್ನು ಚಂದ್ರನ ಮೇಲ್ಮೈಗೆ ಇನ್ನಷ್ಟು ಸನಿಹಕ್ಕೆ ತರಲಾಯಿತು. ಇದರಿಂದಾಗಿ ಬಾಹ್ಯಾಕಾಶ ನೌಕೆಯ ಕಕ್ಷೆ ಬದಲಾವಣೆಯ ಎಲ್ಲ ಹಂತಗಳೂ ಸುಸೂತ್ರವಾಗಿ ಪೂರ್ಣಗೊಂಡಿವೆ.

ಮುಂದಿನ ಹಂತ ಅತ್ಯಂತ ಮಹತ್ವದ್ದಾಗಿದ್ದು, ನೋದನ (ಪ್ರೊಪಲ್ಷನ್ ಮಾಡ್ಯೂಲ್) ಘಟಕದಿಂದ ಲ್ಯಾಂಡರ್ ಘಟಕವನ್ನು ಬೇರ್ಪಡಿಸಲಾಗುವುದು. ಈ ಪ್ರಕ್ರಿಯೆ ಗುರುವಾರ (ಆ.17) ನಡೆಸಲು ಉದ್ದೇಶಿಸಲಾಗಿದೆ. ಲ್ಯಾಂಡರ್ ಘಟಕವು ರೋವರ್ ಅನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಸುರಕ್ಷಿತವಾಗಿ ಇಳಿಯಬೇಕು. ನೋದನ ಘಟಕದಿಂದ ಲ್ಯಾಂಡರ್ ಪ್ರತ್ಯೇಕಿಸುವ ಮತ್ತು ಲ್ಯಾಂಡಿಂಗ್‌ಗೆ ಅಗತ್ಯ ತಯಾರಿಗಳನ್ನು ನಡೆಸಲಾಗುತ್ತಿದೆ ಎಂದು ಇಸ್ರೊ ಮೂಲಗಳು ತಿಳಿಸಿವೆ.

ಇವತ್ತಿನ (ಬುಧವಾರ) ಕಕ್ಷೆ ಬದಲಾವಣೆಯನ್ನು ಎಂಜಿನ್ ದಹನ ಕ್ರಿಯೆಯ ಮೂಲಕ ಅತ್ಯಂತ ಅಲ್ಪ ಅವಧಿಯಲ್ಲೇ ನೆರವೇರಿಸಲಾಯಿತು. ಚಂದ್ರನ ಸಮೀಪದ ಕಕ್ಷೆ 154 ಕಿ.ಮಿ x 163 ಕ್ಕೆ ನೌಕೆಯನ್ನು ನೆಲೆಗೊಳಿಸಲಾಯಿತು.

ನೋದನ ಘಟಕದಿಂದ ಲ್ಯಾಂಡರ್ ಪ್ರತ್ಯೇಕಗೊಂಡ ಬಳಿಕ ಕಕ್ಷೆಯಲ್ಲಿ ಅದರ ವೇಗವನ್ನು ತಗ್ಗಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ. ಇದಕ್ಕೆ 'ಡೀಬೂಸ್ಟ್' ಎಂದು ಕರೆಯಲಾಗುತ್ತದೆ ಎಂದು ಇಸ್ರೊ ಹೇಳಿದೆ.

ಸಾಲದ ಬಡ್ಡಿ ಮನೆ ಖರೀದಿಗೆ ಅಡ್ಡಿ 08

ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ: ಮುನಿರತ್ನ 08

ಚಿನಕುರಳಿ

ಪ್ರಕಾಶ್ ಶೆಟ್ಟಿ



₹57 ಸಾವಿರ ಕೋಟಿ ಯೋಜನೆ • ಕೇಂದ್ರದ ಪಾಲು ₹ 20 ಸಾವಿರ ಕೋಟಿ

'ಪಿಎಂ–ಇ ಬಸ್ ಸೇವಾ'ಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಆಯ್ದ ನಗರಗಳಲ್ಲಿ ಪರಿಸರಸ್ನೇಹಿ ಬಸ್‌ಗಳ ಸಂಚಾರ ಪ್ರೋತ್ಸಾಹಿಸುವ 'ಪಿಎಂ–ಇ ಬಸ್ ಸೇವಾ' ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಈ ಯೋಜನೆಯಡಿ, ದೇಶದ 169 ನಗರಗಳಲ್ಲಿನ ಸಾರ್ವಜನಿಕ ಸಾರಿಗೆ ಮೂಲಕ 10 ಸಾವಿರ ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಗೆ ಉತ್ತೇಜನ ನೀಡಲಾಗುತ್ತದೆ.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಡಿದ ಭಾಷಣ ವೇಳೆ, ಮುಂಬರುವ ಲೋಕಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಹಲವು ಯೋಜನೆಗಳನ್ನು ಘೋಷಿಸಿದ್ದರು. ಇದರ ಬೆನ್ನಲ್ಲೇ, 'ಪಿಎಂ–ಇ ಬಸ್ ಸೇವಾ' ಸೇರಿದಂತೆ ಕೆಲ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಈ ಕುರಿತು ಮಾಹಿತಿ ನೀಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್, 'ಸಂಘಟಿತ ಬಸ್ ಸೇವೆ ಹೊಂದಿರದ ನಗರಗಳಿಗೆ ಈ ಯೋಜನೆಯಡಿ ಆದ್ಯತೆ ನೀಡಲಾಗುತ್ತದೆ' ಎಂದರು.

'ಈ ಯೋಜನೆಯನ್ನು ₹ 57,613 ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಪೈಕಿ ಕೇಂದ್ರ ಸರ್ಕಾರದ ಪಾಲು ₹ 20 ಸಾವಿರ ಕೋಟಿ ಇರಲಿದೆ. ಇ–ಬಸ್‌ಗಳ ಕಾರ್ಯಾಚರಣೆಗೆ 10 ವರ್ಷಗಳ ಕಾಲ ನೆರವು ನೀಡಲಾಗುತ್ತದೆ' ಎಂದು ಹೇಳಿದರು.

'ಗ್ರೀನ್ ಅರ್ಬನ್ ಮೊಬಿಲಿಟಿ ಇನಿಷಿಯೇಟಿವ್ಸ್' ಮತ್ತು ನಗರ ಸಾರಿಗೆ ಬಸ್ ಸೇವೆಗಳನ್ನು ಮೇಲ್ದರ್ಜೆಗೇರಿಸುವುದು ಎಂಬ ಎರಡು ವಿಭಾಗಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯಿಂದ 45 ಸಾವಿರದಿಂದ 55 ಸಾವಿರದಷ್ಟು ನೇರ ಉದ್ಯೋಗಗಳ ಸೃಷ್ಟಿ ಸಾಧ್ಯವಾಗಲಿದೆ' ಎಂದರು.

'ಪಿಎಂ ವಿಶ್ವಕರ್ಮ'ಕ್ಕೆ ಅನುಮೋದನೆ: ₹ 13 ಸಾವಿರ ಕೋಟಿ ವೆಚ್ಚದ 'ಪಿಎಂ ವಿಶ್ವಕರ್ಮ' ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಸಭೆ ಬಳಿಕ ಸುದ್ದಿಗಾರರಿಗೆ ಈ ಕುರಿತು ಮಾಹಿತಿ ನೀಡಿದರು.

ವಿಶ್ವಕರ್ಮ ಜಯಂತಿ ದಿನವಾದ ಸೆಪ್ಟೆಂಬರ್ 17ರಂದು ಈ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಪ್ರಧಾನಿ ಮೋದಿ ಮಂಗಳವಾರ ಘೋಷಿಸಿದ್ದರು.

ಯೋಜನೆ ಪ್ರಮುಖಾಂಶಗಳು

- 2011ರ ಜನಗಣತಿ ಪ್ರಕಾರ 3 ಲಕ್ಷ ಹಾಗೂ ಅದಕ್ಕೂ ಅಧಿಕ ಜನಸಂಖ್ಯೆ ಇರುವ ಆಯ್ದ ನಗರಗಳಲ್ಲಿ ಯೋಜನೆ ಅನುಷ್ಠಾನ
- ಎಲ್ಲ ಕೇಂದ್ರಾಡಳಿತ ಪ್ರದೇಶಗಳು, ಈಶಾನ್ಯ ರಾಜ್ಯಗಳ ರಾಜಧಾನಿಗಳಲ್ಲಿ ಜಾರಿ
- ಬಸ್‌ಗಳ ಸೇವೆ ಒದಗಿಸುವುದು, ಬಸ್ ಸೇವೆ ಒದಗಿಸುವ ಸಂಸ್ಥೆಗಳಿಗೆ ಹಣ ಪಾವತಿ ಜವಾಬ್ದಾರಿ ಆಯಾ ರಾಜ್ಯಗಳು/ನಗರಗಳದ್ದು
- ಉದ್ದೇಶಿತ ಯೋಜನೆಯಡಿ ನಿಗದಿಪಡಿಸಿದ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ನೀಡಲಿದೆ

'ಕಲ್ಯಾಣ'ಕ್ಕೆ ಬರಲು ಶಿಕ್ಷಕರ ಹಿಂದೇಟು

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಪ್ರಾಥಮಿಕ ಮತ್ತು ಪ್ರೌಢ ಶಾಲೆ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಮುಕ್ತಾಯವಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಿಗೆ ಹೊರ ವಿಭಾಗಗಳಿಂದ ಬರಲು ಶಿಕ್ಷಕರು ಹಿಂದೇಟು ಹಾಕಿದ್ದಾರೆ. ಕಲಬುರಗಿ ವಿಭಾಗದಿಂದ 2,504 ಶಿಕ್ಷಕರು ಬೇರೆ ವಿಭಾಗಗಳಿಗೆ ಹೋಗಿದ್ದರೆ, ಈ ವಿಭಾಗಕ್ಕೆ ಕೇವಲ 74 ಶಿಕ್ಷಕರು ಬಂದಿದ್ದಾರೆ.

ಈ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಹೊರಗೆ ವರ್ಗಾವಣೆಗಾಗಿ ಇತರೆ ಅರ್ಹತೆಗಳ ಜತೆಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆ ವೃಂದದಲ್ಲಿ ಕನಿಷ್ಠ 10 ವರ್ಷ ನಿರಂತರವಾಗಿ ಸೇವೆ ಸಲ್ಲಿಸಿರಬೇಕು ಎಂಬ ನಿಯಮದಡಿ ಸಾವಿರಾರು ಶಿಕ್ಷಕರು ಅರ್ಹರಾಗಿದ್ದಾರೆ. ಶೇ 25ಕ್ಕಿಂತ ಹೆಚ್ಚು ಖಾಲಿ ಹುದ್ದೆಗಳಿರುವ ಶೈಕ್ಷಣಿಕ ಘಟಕಗಳಲ್ಲಿ ಶಿಕ್ಷಕರ ವರ್ಗಾವಣೆಗೂ ಅನುಮತಿಸಲಾಗಿದೆ.

ಹೀಗಾಗಿ, ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕಲಬುರಗಿ ವಿಭಾಗದ ಏಳು ಜಿಲ್ಲೆಗಳಿಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅರ್ಹ ಶಿಕ್ಷಕರು ಬೇರೆ ಬೇರೆ ವಿಭಾಗಗಳಿಗೆ ವರ್ಗಾವಣೆಗೊಂಡಿದ್ದಾರೆ. ಬೇರೆ ವಿಭಾಗಗಳಿಂದ ಕಲಬುರಗಿ ವಿಭಾಗಕ್ಕೆ ಬರಲು ಆ ಪ್ರಮಾಣದ ಉತ್ಸಾಹ ವ್ಯಕ್ತವಾಗಿಲ್ಲ.

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮೂಲಸೌಲಭ್ಯಗಳಿಂದ ಕೊರತೆಯಿಂದ ಬಳಲುತ್ತಿವೆ. ಇದರ ಜತೆಗೆ ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ 45,440 ಹುದ್ದೆಗಳ ಪೈಕಿ 18,050 ಹುದ್ದೆಗಳು ಖಾಲಿ ಇವೆ.

ಕಲಬುರಗಿ ವಿಭಾಗದ ಶಿಕ್ಷಕರ ವರ್ಗಾವಣೆ ವಿವರ (ಪ್ರಾಥಮಿಕ–ಪ್ರೌಢಶಾಲೆ)

ಜಿಲ್ಲೆ	ವರ್ಗಾವಣೆ	ಬಂದವರು	ಅಂತರ
ಬಳ್ಳಾರಿ	172	4	168
ಬೀದರ್	21	8	13
ಕಲಬುರಗಿ	330	9	321
ಕೊಪ್ಪಳ	464	19	445
ರಾಯಚೂರು	981	4	977
ವಿಜಯನಗರ	77	25	52
ಯಾದಗಿರಿ	459	5	454
ಒಟ್ಟು	2,504	74	2,430

ಕಿದ್ವಾಯಿ: ಅಧಿಕಾರಕ್ಕೆ ಮುನ್ನವೇ ಕಾರ್ಯಾದೇಶ!

• ವರುಣ ಹೆಗಡೆ

ಬೆಂಗಳೂರು: ಅಧಿಕಾರ ಸ್ವೀಕರಿಸುವ ಮುನ್ನವೇ ಪೆಟ್ ಸ್ಕ್ಯಾನ್‌ಗೆ ಸಂಬಂಧಿಸಿದ ಟೆಂಡರ್‌ಗೆ ಕಾರ್ಯಾದೇಶ ನೀಡಿದ ವಿಶೇಷ ಪ್ರಕರಣ ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಡೆದಿದೆ.

2022ರ ಆಗಸ್ಟ್‌ನಲ್ಲಿ ಸಂಸ್ಥೆಯ ಈ ಹಿಂದಿನ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರ ಅಧಿಕಾರಾವಧಿ ಅಂತ್ಯಗೊಂಡಿತ್ತು. ಆ ಸ್ಥಾನಕ್ಕೆ ಸರ್ಕಾರವು 2022ರ ಅಕ್ಟೋಬರ್ 17ರಂದು ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ.ವಿ.ಲೋಕೇಶ್ ಅವರನ್ನು ನೇಮಿಸಿ ಆದೇಶ ಹೊರಡಿಸಿತ್ತು.

ಆದರೆ, ಪೆಟ್‌ಸ್ಕ್ಯಾನ್ ನಿರ್ವಹಣೆ ಹಾಗೂ ಕಾರ್ಯಾಚರಣೆಗೆ ಸಂಬಂಧಿಸಿದಂತೆ 2022ರ ಆಗಸ್ಟ್ 18ರಂದು ಬೆಂಗಳೂರು ಮೆಡಿಕಲ್ ಸಿಸ್ಟಮ್ಸ್ (ಬಿಎಂಎಸ್) ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದು, ಇದಕ್ಕೆ ಡಾ.ವಿ.ಲೋಕೇಶ್ ಸಹಿ ಇದೆ. ಇದರಿಂದಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಸಿಬ್ಬಂದಿ ಆರೋಪಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳಲ್ಲಿ ಪೆಟ್‌ಸ್ಕ್ಯಾನ್ ಪರೀಕ್ಷೆ ದುಬಾರಿಯಾಗಿದ್ದು, ಒಮ್ಮೆ ಪೆಟ್‌ಸ್ಕ್ಯಾನ್ ಮಾಡಿಸಿಕೊಳ್ಳಲು ₹25 ಸಾವಿರದಿಂದ ₹28 ಸಾವಿರದವರೆಗೆ ಶುಲ್ಕ ಪಾವತಿಸಬೇಕು. ಆದ್ದರಿಂದ ಸಂಸ್ಥೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಸೇವೆ ಪ್ರಾರಂಭಿಸಲು ಡಾ.ಸಿ. ರಾಮಚಂದ್ರ ಅವರು ಬಿಎಂಎಸ್ ಸಂಸ್ಥೆಗೆ ಕಾರ್ಯಾದೇಶ ನೀಡಿದ್ದರು.

> **ಕಿದ್ವಾಯಿಯಲ್ಲಿ ವಿಶ್ವ ದರ್ಜೆ ಸೇವೆ ಒದಗಿಸಲು ಕ್ರಮವಹಿಸಲಾಗಿತ್ತು. ಈಗ ಅಲ್ಲಿ ಏನಾಗುತ್ತಿದೆ ಎಂಬುದರ ಮಾಹಿತಿಯಿಲ್ಲ. ಪೆಟ್‌ಸ್ಕ್ಯಾನ್ ಕಾರ್ಯಾದೇಶದಲ್ಲಿ ಇರುವ ಸಹಿ ನನ್ನದಲ್ಲ.**
> **ಡಾ.ಸಿ. ರಾಮಚಂದ್ರ,** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿಕಟಪೂರ್ವ ನಿರ್ದೇಶಕ

8ನೇ ಪುಟ ನೋಡಿ

₹ 3.5 ಲಕ್ಷ ಲಂಚ: ಬೆಸ್ಕಾಂ ಎಇಇ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡವೊಂದಕ್ಕೆ 23 ಕಿಲೋವಾಟ್ ಸಾಮರ್ಥ್ಯದ ವಿದ್ಯುತ್ ಸಂಪರ್ಕಕ್ಕೆ ಮಂಜೂರಾತಿ ನೀಡಲು ₹ 3.5 ಲಕ್ಷ ಲಂಚ ಪಡೆಯುತ್ತಿದ್ದ ಬೆಸ್ಕಾಂ ಎಸ್–1 ಜಯನಗರ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಧನಂಜಯ ವಿ. ಮತ್ತು ಅವರ ಪರವಾಗಿ ಹಣ ಪಡೆದ ಸೈಯದ್ ನಿಜಾಮ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಸಂಜೆ ಬಂಧಿಸಿದ್ದಾರೆ.

ಜಯನಗರ 8ನೇ ಬ್ಲಾಕ್‌ನಲ್ಲಿ ನಿರ್ಮಾಣವಾಗುತ್ತಿರುವ ವಸತಿ ಕಟ್ಟಡಕ್ಕೆ 23 ಕೆವಿ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಕೋರಿ ಭರತ್ ಕುಮಾರ್ ಎನ್.ಎಂ. ಎಂಬ ಎಲೆಕ್ಟ್ರಿಕ್ ಕಾಮಗಾರಿಗಳ ಗುತ್ತಿಗೆದಾರ ಬೆಸ್ಕಾಂನ ಜಯನಗರ ಉಪ ವಿಭಾಗ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಮಂಜೂರಾತಿ ನೀಡಲು ₹ 13 ಲಕ್ಷ ಲಂಚ ನೀಡುವಂತೆ ಧನಂಜಯ ಬೇಡಿಕೆ ಇಟ್ಟಿದ್ದರು. ಮೊದಲ ಕಂತಿನಲ್ಲಿ ₹ 3.5 ಲಕ್ಷವನ್ನು ಬುಧವಾರವೇ ತಲುಪಿಸುವಂತೆ ಸೂಚಿಸಿದ್ದರು.



ಧನಂಜಯ ವಿ.



ಸೈಯದ್ ನಿಜಾಮ್

ಸೋಶಿಯಲಿಸ್ಟ್ ಪಾರ್ಟಿ ಕಾರ್ಯಾಗಾರ

ಬೆಂಗಳೂರು: ನಗರದ ಗಾಂಧಿಭವನದಲ್ಲಿ ಸೋಶಿಯಲಿಸ್ಟ್ ಪಾರ್ಟಿಯಿಂದ (ಇಂಡಿಯಾ) ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ರಾಷ್ಟ್ರಮಟ್ಟದ ಯುವ ಕಾರ್ಯಾಗಾರ ಸೋಮವಾರ ಮುಕ್ತಾಯಗೊಂಡಿತು.

ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರದ 30 ಅಭ್ಯರ್ಥಿಗಳು ಭಾಗವಹಿಸಿದ್ದರು. ಸೋಶಿಯಲಿಸ್ಟ್ ಪಾರ್ಟಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂದೀಪ್ ಪಾಂಡೆ, ದೆಹಲಿಯ ಶ್ಯಾಂ ಗಂಭೀರ್, ಕೇರಳದ ಹಿನಾಮುಲ್ಲಾ ಹಸನ್, ಕರ್ನಾಟಕದ ಮೈಕಲ್ ಫರ್ನಾಂಡಿಸ್, ಪ್ರೊ. ಹನುಮಂತ, ಬಿ.ಟಿ. ಲಲಿತಾ ನಾಯಕ್ ಅವರು ಸಂವಿಧಾನ, ಸ್ವಾತಂತ್ರ್ಯ, ಗಣತಂತ್ರ, ಪ್ರಜಾಸತ್ತೆಗಳ ಬಗ್ಗೆ ಉಪನ್ಯಾಸ ನೀಡಿದರು.

ಉದ್ಯೋಗ ಮೇಳ ಆಗಸ್ಟ್ 26ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಯುವ ಬ್ರಿಗೇಡ್ ಮತ್ತು ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್ ವತಿಯಿಂದ ಆ.26ರಂದು 'ಮಣ್ಣಿನ ಮಕ್ಕಳಿಗೆ ಉದ್ಯೋಗ ಮೇಳ'ವನ್ನು ಆಯೋಜಿಸಲಾಗಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಜನ್ಮದಿನದ ಅಂಗವಾಗಿ ಈ ಮೇಳ ಆಯೋಜಿಸಲಾಗಿದ್ದು, ನಾಗದೇವನಹಳ್ಳಿಯ ಮರಿಯಪ್ಪನಪಾಳ್ಯದಲ್ಲಿರುವ ಇಂಡಿಯನ್ ಹೈಸ್ಕೂಲ್‌ನಲ್ಲಿ ಮೇಳ ನಡೆಯಲಿದೆ ಎಂದು ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ತಿಳಿಸಿದ್ದಾರೆ.

ಯಜಕಿ ಇಂಡಿಯಾ, ಟಿವಿಎಸ್, ಕ್ವೆಸ್ ಕಾರ್ಪ್, ಡಾಮಿನೋಸ್, ಸನ್ಪ್ರೋ ಟೆಕ್ನೋಲಾಜಿಸ್, ಟೊಯೊಟ ಮೋಟರ್ಸ್, ಪಾರ್ಲೆ ಆಗ್ರೊ, ಬ್ರಿಟಾನಿಯಾ ಸೇರಿದಂತೆ 50ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ ಎಂದರು.

'ಜಾತಿ, ಮತಭೇದ ಬಿಟ್ಟು ಅರ್ಹರಿಗೆ ಶಿಕ್ಷಣ ಮತ್ತು ಉದ್ಯೋಗ ಕೊಡಿಸುವುದು ಬ್ರಿಗೇಡ್ ನ ಮುಖ್ಯ ಧ್ಯೇಯ. ಪ್ರತಿ ವರ್ಷ ವಿಶ್ವದಾದ್ಯಂತ ಒಂದು ಸಾವಿರ ಉದ್ಯೋಗ ಕೊಡಿಸುವುದು ಮತ್ತು ಶಿಕ್ಷಣ ಪಡೆಯಲು ಹಂಬಲಿಸುವ 100 ವಿದ್ಯಾರ್ಥಿಗಳಿಗೆ ಶಿಕ್ಷಣದ ವ್ಯವಸ್ಥೆ ಮಾಡಿಸಲಾಗುತ್ತಿದೆ' ಎಂದು ತಿಳಿಸಿದರು.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಏರ್ಪಡಿಸಿದ್ದ ಚರ್ಚೆ, ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬುಧವಾರ ವಿ.ಪಿ. ದೀನದಯಾಳು ನಾಯ್ಡು ಅವರ 107ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬಹುಮಾನ ವಿತರಿಸಿದರು. ವಿ.ಪಿ. ದೀನದಯಾಳು ನಾಯ್ಡು ಅವರ ಸೊಸೆ ಗೀತಾ ವೆಂಕಟೇಶ್, ಬಿಬಿಎಂಪಿ ಉಪ ಆಯುಕ್ತ (ಶಿಕ್ಷಣ) ಎನ್.ಸಿ ವೆಂಕಟರಾಜು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಾಧ್ಯಕ್ಷ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಆಯುಕ್ತೆ (ಗೈಡ್ಸ್) ಗೀತಾ ನಟರಾಜ್ ಇದ್ದರು —ಪ್ರಜಾವಾಣಿ ಚಿತ್ರ

'ಸ್ಕೌಟ್ಸ್, ಗೈಡ್ಸ್‌ಗಳಿಗೆ ಉಚಿತ ಊಟ ನೀಡಲು ಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಕೌಟ್ಸ್, ಗೈಡ್ಸ್ ಶಿಬಿರಗಳಲ್ಲಿ ಉಚಿತ ಊಟ ನೀಡಲು ಆಹಾರ ಧಾನ್ಯ ಬ್ಯಾಂಕ್ ಆರಂಭಿಸಿದ್ದೇವೆ' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಮನವಿ ಮಾಡಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ಬಿಬಿಎಂಪಿ ಸಹಯೋಗದಲ್ಲಿ ಬುಧವಾರ ನಡೆದ ವಿ.ಪಿ. ದೀನದಯಾಳು ನಾಯ್ಡು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ 6 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಅಕ್ಕಿ, ಧಾನ್ಯ, ಸಕ್ಕರೆ ಸೇರಿದಂತೆ ಯಾವುದೇ ಆಹಾರ ಸಾಮಗ್ರಿಗಳನ್ನು ನೀಡಲು ಇಚ್ಛಿಸುವವರು 'ಸ್ಕೌಟ್ಸ್, ಗೈಡ್ಸ್ ಫುಡ್ ಗ್ರೈನ್ ಬ್ಯಾಂಕ್'ಗೆ ಆನ್‌ಲೈನ್ ಮೂಲಕ ಮಾಹಿತಿ ನೀಡಬೇಕು. ಆಯಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಶಿಬಿರ ನಡೆಯುವಾಗ ಮನೆಗೆ ಬಂದು ಸಂಗ್ರಹಿಸುವ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದರು.

'ಹಣ ಇದ್ದವರ ಮಕ್ಕಳಿಗೆ ಸಮವಸ್ತ್ರ ಖರೀದಿಸುವ ಶಕ್ತಿ ಇರುತ್ತದೆ. ಬಡವರ ಮಕ್ಕಳು ₹ 1,500ರಿಂದ ₹2,000 ನೀಡಿ ಖರೀದಿಸುವುದು ಕಷ್ಟ. ಈ ಕಾರಣಕ್ಕೆ ಮಕ್ಕಳು ಸ್ಕೌಟ್ಸ್, ಗೈಡ್ಸ್‌ನಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ 'ಕ್ಲಾತ್ ಬ್ಯಾಂಕ್' ಕೂಡ ಆರಂಭಿಸಿದ್ದೇವೆ. ಸಹಾಯ ಮಾಡಲು ಇಚ್ಛಿಸುವವರಿಂದ ನಾವು ಹಣ ಪಡೆಯುವುದಿಲ್ಲ. ಸಮವಸ್ತ್ರವನ್ನೇ ನೀಡಬೇಕು' ಎಂದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಜನರಿಂದ ಆಯ್ಕೆಯಾಗಿ ಬಂದ ಮೇಲೆ ಜನರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂಬ ಚಿಂತನೆ ಹಿಂದೆ ಇತ್ತು. ಈಗ ಜನಸೇವೆಗೆ ಬರುವ ರಾಜಕಾರಣಿಗಳ ಪ್ರಮಾಣ ಕಡಿಮೆಯಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ನನ್ನ ತಂದೆ ಪಾಲಿಕೆ ಸದಸ್ಯರಾಗಲು ₹ 2,000 ಖರ್ಚು ಮಾಡಿದ್ದರು. ನಾನು 1983ರಲ್ಲಿ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಲು ₹ 15,000 ಮಾತ್ರ ವೆಚ್ಚವಾಗಿತ್ತು. ಆಗ ಜನರ ಸೇವೆ ಮಾಡಬೇಕು ಎಂಬ ಮನೋಭಾವ ಇತ್ತು. ಈಗ ಬದಲಾಗಿದೆ. ನೂಲಿನಂತೆ ಸೀರೆ ಎಂಬ ಮಾತಿನಂತೆ ಜನರಂತೆ ಜನಪ್ರತಿನಿಧಿಗಳು. ಜನರು ಒಳ್ಳೆಯವರನ್ನು ಆಯ್ಕೆ ಮಾಡಿದರೆ ಈ ರೀತಿ ಆಗುವುದಿಲ್ಲ' ಎಂದರು.



ಪ್ರಶಸ್ತಿ ಪ್ರದಾನ

ಬೆಂಗಳೂರು ವೈದ್ಯಕೀಯ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಡಾ.ಕೆ. ಸುಧಾಮಣಿ, ಡಾ. ಲಕ್ಷ್ಮಿ ಚಂಪಕ ವಾಸ್, ಡಾ.ಎನ್. ಕೃಷ್ಣಮೂರ್ತಿ, ಡಾ. ಸುಬ್ಬಣ್ಣ ಶೆಟ್ಟಿ ಹಾಗೂ ಡಾ.ಕೆ.ಎಸ್. ಮಾಧವರಾವ್ ಅವರಿಗೆ 'ವಾರ್ಷಿಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಂಘದ ಅಧ್ಯಕ್ಷರಾದ ಡಾ.ಆರ್. ಸರೋಜ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ರಮೇಶ್ ಕೃಷ್ಣ, ಡಾ. ರಾಮಕೃಷ್ಣ ಹಾಗೂ ಸಂಘದ ಪದಾಧಿಕಾರಿಗಳು ಇದ್ದಾರೆ

ಕೆ.ಆರ್.ಪುರದಲ್ಲಿ ರಾಮರಾಜ್ ಷೋ ರೂಂ

ಬೆಂಗಳೂರು: ಕೆ.ಆರ್. ಪುರದಲ್ಲಿ ರಾಮರಾಜ್ ಕಾಟನ್ ಷೋ ರೂಂ ಆ.17ರಂದು ಆರಂಭವಾಗಲಿದೆ.

ನಂ. 42, ಹಳೆ ಮದ್ರಾಸ್ ರಸ್ತೆಯ 1ನೇ ಮುಖ್ಯರಸ್ತೆಯಲ್ಲಿ ಆರಂಭವಾಗುವ ಷೋ ರೂಂ ಅನ್ನು ಶಾಸಕ ಬೈರತಿ ಬಸವರಾಜ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಮೈಸೂರು ರಸ್ತೆ–ಕೆಂಗೇರಿ ಮೆಟ್ರೊ ಇಂದು ಸ್ಥಗಿತ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ಸಂಚಾರದ ಕಾಮಗಾರಿಗಾಗಿ ಮೈಸೂರು ರಸ್ತೆಯಿಂದ ಕೆಂಗೇರಿವರೆಗೆ ಆ.17ರಂದು ಮೆಟ್ರೊ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

ವಿಸ್ತರಿತ ಮಾರ್ಗದಲ್ಲಿ ಸಿಗ್ನಲಿಂಗ್ ಮತ್ತು ಇತರ ಕಾಮಗಾರಿಗಳು ಹಮ್ಮಿಕೊಂಡಿರುವುದರಿಂದ ಈ ವ್ಯತ್ಯಯವಾಗಲಿದೆ. ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆವರೆಗೆ ಮೆಟ್ರೊ ಸೇವೆ ಎಂದಿನಂತೆ ಇರಲಿದೆ.

ಆ.23 ಮತ್ತು 24ರಂದು ಬೆಳಿಗ್ಗೆ 5ರಿಂದ ಬೆಳಿಗ್ಗೆ 7ರ ವರೆಗೆ ಇದೇ ಮಾರ್ಗದಲ್ಲಿ ಮೆಟ್ರೊ ರೈಲು ಇರುವುದಿಲ್ಲ. ಬೆಳಿಗ್ಗೆ 7ರ ನಂತರ ಎಂದಿನಂತೆ ಸಂಚಾರ ಇರಲಿದೆ.

ಆ. 20ರಿಂದ 29ರ ವರೆಗೆ ಇದೇ ನೇರಳೆ ಮಾರ್ಗದ ಇನ್ನೊಂದು ತುದಿಯಾದ ಸ್ವಾಮಿ ವಿವೇಕಾನಂದ ರಸ್ತೆ –ಬೈಯಪ್ಪನಹಳ್ಳಿ –ಕೃಷ್ಣರಾಜಪುರ–ವೈಟ್‌ಫೀಲ್ಡ್ (ಕಾಡುಗೋಡಿ) ನಡುವೆ ಬೆಳಿಗ್ಗೆ 5ರಿಂದ 7ರವರೆಗೆ ರೈಲು ಸಂಚಾರ ಇರುವುದಿಲ್ಲ.

ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಇದೇ 17, 19ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಖೋಡೇಸ್ ಗ್ಲಾಸ್ ಫ್ಯಾಕ್ಟರಿ ಮತ್ತು ಜಯದೇವ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 17ರಂದು ಮತ್ತು 19ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

17ರಂದು ವ್ಯತ್ಯಯವಾಗುವ ಸ್ಥಳಗಳು: ಆವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್‌ಮೆಂಟ್, ಅಂಜನಾಪುರ ಗ್ರಾಮ, ರಾಯಲ್ ಲೇಕ್ ಫ್ರಂಟ್ ವ್ಯೂ ರೆಸಿಡೆನ್ಸಿ, ಬ್ರೂಕ್ಸ್ ಲೇಔಟ್, 8ನೇ ಹಂತ ಬಿಡಿಎ ಲೇಔಟ್, ರಾಯಲ್ ಕೌಂಟಿ ಲೇಔಟ್, ದೀಪಕ್ ಲೇಔಟ್, ವಡ್ಡರಪಾಳ್ಯ, ಆವಲಹಳ್ಳಿ ಬಿಡಿಎ ಲೇಔಟ್, ತಲಘಟ್ಟಪುರ, ನ್ಯಾಯಾಂಗ ಬಡಾವಣೆ, ವಕೀಲ ಲೇಔಟ್, ಖೋಡೇಸ್ ನರ್ಸರಿ, ವಾಜರಹಳ್ಳಿ, ಬಿಎಸ್‌ಕೆ 6ನೇ ಹಂತ, ಶೋಭಾ ಅಪಾರ್ಟ್‌ಮೆಂಟ್, ರಾಘವಪಾಳ್ಯ, ಬ್ಯಾಂಕ್ ಆಫೀಸರ್ಸ್ ಲೇಔಟ್, ಗುಂಡು ತೋಪು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

19ರಂದು ವ್ಯತ್ಯಯವಾಗುವ ಸ್ಥಳಗಳು: ಬಿಳೇಕಹಳ್ಳಿ, ರಂಕಾ ರಸ್ತೆ, ಎನ್.ಎಸ್. ಪಾಳ್ಯ, ಅನುಗ್ರಹ ಲೇಔಟ್, ವಿಜಯ ಬ್ಯಾಂಕ್ ಲೇಔಟ್ 1ನೇ ಭಾಗ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

'ಅಂಕಿತ ಪುಸ್ತಕ ಪುರಸ್ಕಾರ' ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 'ಅಂಕಿತ ಪುಸ್ತಕ ಪುರಸ್ಕಾರ' ಪ್ರದಾನ ಸಮಾರಂಭವನ್ನು ಇದೇ ಶುಕ್ರವಾರ ಸಂಜೆ 5 ಗಂಟೆಗೆ ತನ್ನ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಹಮ್ಮಿಕೊಂಡಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶಕುಮಾರ ಎಸ್. ಹೊಸಮನಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಲೇಖಕ ಹಾಗೂ ಪತ್ರಕರ್ತ ಗಿರೀಶ್ ರಾವ್ ಹತ್ವಾರ್ (ಜೋಗಿ) ಅವರು ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ದತ್ತಿ ದಾನಿ ಪ್ರಕಾಶ ಕಂಬತ್ತಳ್ಳಿ ಉಪಸ್ಥಿತರಲಿದ್ದಾರೆ.

ಸಾಗರದ ರವೀಂದ್ರ ಪುಸ್ತಕಾಲಯಕ್ಕೆ 2022ನೇ ಸಾಲಿನ ಹಾಗೂ ಬೆಂಗಳೂರಿನ ಛಂದ ಪುಸ್ತಕ ಸಂಸ್ಥೆಗೆ 2023ನೇ ಸಾಲಿನ ಅಂಕಿತ ಪುಸ್ತಕ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ನಿರಂತರ ವೈದ್ಯಕೀಯ ಶಿಕ್ಷಣ ಸಮಾವೇಶ'ದ ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿ: ನಾಗರಾಜ್ ಎನ್.ಎಂ., ಅಧ್ಯಕ್ಷತೆ: ಎಸ್. ಮನೋಜ್ ಕುಮಾರ್, ಆಯೋಜನೆ: ಇಂಡಿಯನ್ ಅಸೋಸಿಯೇಷನ್ ಆಫ್ ಬ್ಲಡ್ ಬ್ಯಾಂಕ್ಸ್, ಸ್ಥಳ: ಸ್ಪರ್ಶ ಆಸ್ಪತ್ರೆಯ ಸಭಾಂಗಣ, ಯಶವಂತಪುರ, ಬೆಳಿಗ್ಗೆ 9ರಿಂದ

'ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ ಉದ್ಘಾಟನೆ: ಡಾ. ಶರಣಪ್ರಕಾಶ್ ಆರ್. ಪಾಟೀಲ, ಆಯೋಜನೆ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸ್ಥಳ: ಕಂಟೋನ್ಮೆಂಟ್ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ, ಸಂಜೆ 4

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗದ ವಾರ್ಷಿಕೋತ್ಸವ: ಗಣಹೋಮ, ಗಂಗಮ್ಮ ದೇವಿಗೆ ಅಭಿಷೇಕ ಬೆಳಿಗ್ಗೆ 7ಕ್ಕೆ, ಧ್ವಜಾರೋಹಣ 9ಕ್ಕೆ, ಕಂಕಣ ಪೂಜೆ, ಮಹಾಮಂಗಳಾರತಿ ಸಂಜೆ 6ಕ್ಕೆ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

ಉಲ್ಲಾಳು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ: ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಕೆ.ಸಿ. ರಮೇಶ್, ಅತಿಥಿಗಳು: ಬಿ.ಎನ್. ಕೃಷ್ಣಪ್ಪ, ವಿನೋದ ನರಸಿಂಹಮೂರ್ತಿ, ಭಾಗ್ಯವತಿ ಮುನಿಯಪ್ಪ, ಮಾರುತಿ, ಪ್ರಶಸ್ತಿ ವಿತರಣೆ: ಆಡಿಟರ್ ನಾಗರಾಜ್ ಯಲಚವಾಡಿ, ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸ್ಥಳ: ಗ್ರೀನ್ ಹಿಲ್ ಇಂಟರ್ ನ್ಯಾಷನಲ್ ಶಾಲೆ, ಕೊಡಿಗೇಹಳ್ಳಿ, ಬೆಳಿಗ್ಗೆ 9.30

ಕ್ರಿಸ್ ಅಮೆರಿಕನ್ ಆಸ್ಪತ್ರೆಯ ಉದ್ಘಾಟನೆ: ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಭೀಮಾಶಂಕರ್ ಗುಳೇದ, ರಶೀದ್, ಆಯೋಜನೆ ಮತ್ತು ಸ್ಥಳ: ಒನ್ ಪಾಯಿಂಟ್ ಕ್ರಿಸ್ ಅಮೆರಿಕನ್ ಆಸ್ಪತ್ರೆ, ವಯ್ಯಾಲಿ ಕಾವಲ್ ಸೊಸೈಟಿ, ನಾಗವಾರ, ಬೆಳಿಗ್ಗೆ 10

ರೈತ ಸಹಾಯವಾಣಿ ಕೇಂದ್ರದ ಉದ್ಘಾಟನೆ, ಬೆಳೆ ಸಮೀಕ್ಷೆ ಬಗ್ಗೆ ತರಬೇತಿ: ಎನ್. ಚೆಲುವರಾಯಸ್ವಾಮಿ, ಸ್ಥಳ: ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಚೇರಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ಮಹೇಶ ಜೋಶಿ, ಪಿ.ಸಿ. ಮೋಹನ್, 'ಸಂದೇಶ ಕಲಾರತ್ನ ಪ್ರಶಸ್ತಿ ಪುರಸ್ಕೃತರು': ಸಂಜಯ್ ಶಾಂತಾರಾಮ್, ಶಶಿಧರ್ ಕೋಟೆ, ಎಂ. ಸೂರ್ಯ ಪ್ರಸಾದ್, ಡಿಂಗ್ರಿ ನಾಗರಾಜ್, ಆಯೋಜನೆ: ಸಂದೇಶ್ ಯುವ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಡಿಐಎ ಶೃಂಗಸಭೆ: ಉದ್ಘಾಟನೆ: ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಸ್ಥಳ: ಅರಮನೆ ಮೈದಾನ, ಮೇಕ್ರಿಸರ್ಕಲ್

ವಚನ ಶ್ರಾವಣ ಉದ್ಘಾಟನೆ: ಎಂ. ಕೃಷ್ಣಪ್ಪ, ಆಶಯ ನುಡಿ: ಎಸ್. ಪಿನಾಕಪಾಣಿ, ಅತಿಥಿಗಳು: ಎಸ್. ರಾಜು, ಡಾ. ವಿ. ಚಂದ್ರಶೇಖರಮೂರ್ತಿ, ಬಿ. ಚಂದ್ರಿಕ, ಅಧ್ಯಕ್ಷತೆ: ಮಹೇಶ ಬೆಲ್ಲದ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗಂಗಾಂಬಿಕೆ, ಮುನಿರಾಜಪ್ಪ ಅವರ ಗೃಹ, ವಿಜಯನಗರ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

ಪುಟ್ಟೇನಹಳ್ಳಿ ಪೊಲೀಸರ ಕಾರ್ಯಾಚರಣೆ: ₹ 30 ಲಕ್ಷ ಸುಲಿಗೆ ಮಾಡಿದ್ದ ಆರೋಪಿಗಳು

ಹನಿಟ್ರ್ಯಾಪ್: ಮುಂಬೈನ ರೂಪದರ್ಶಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರನ್ನು ಹನಿಟ್ರ್ಯಾಪ್ ಮಾಡಿ, ಹಣ ಸುಲಿಗೆ ಮಾಡಿದ್ದ ಮುಂಬೈನ ರೂಪದರ್ಶಿಯನ್ನು ಪುಟ್ಟೇನಹಳ್ಳಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಮುಂಬೈನಲ್ಲಿ ಸ್ನೇಹಾ ಅಲಿಯಾಸ್ ಮೆಹರ್‌ನನ್ನು ವಶಕ್ಕೆ ಪಡೆದುಕೊಂಡಿರುವ ಪೊಲೀಸರು ಆಕೆಯನ್ನು ನಗರಕ್ಕೆ ಕರೆ ತರುತ್ತಿದ್ದಾರೆ.

ಇದೇ ಪ್ರಕರಣದಲ್ಲಿ ಈ ಹಿಂದೆ ಪಾದರಾಯನಪುರದ ನಿವಾಸಿಗಳಾದ ಯಾಸೀನ್ (35), ಶರಣ ಪ್ರಕಾಶ್ ಬಳಿಗೇರ್ (37), ಅಬ್ದುಲ್ ಖಾದರ್(40) ಅವರನ್ನು ಬಂಧಿಸಲಾಗಿತ್ತು. ಆರೋಪಿಗಳು ಸಾಫ್ಟ್‌ವೇರ್ ಎಂಜಿನಿಯರ್‌ಗೆ ಹನಿಟ್ರ್ಯಾಪ್ ಮಾಡಿ ಹಣ ಸುಲಿಗೆ ಮಾಡಿದ್ದರು.

ಎಂಜಿನಿಯರ್ ಟೆಲಿಗ್ರಾಂ ಆ್ಯಪ್‌ನಲ್ಲಿ ಸಕ್ರಿಯವಾಗಿದ್ದರು. ಆರೋಪಿ ಯಾಸೀನ್ ಎಂಬಾತ ಟೆಲಿಗ್ರಾಂ ಆ್ಯಪ್‌ನಲ್ಲಿ ಮುಂಬೈನ ಸ್ನೇಹ ಅವರ ಫೋಟೊ ಹಾಕಿ ಕೆಲವು ಯುವಕರನ್ನು ಸೆಳೆಯುತ್ತಿದ್ದ. ಆಗ ಪ್ರಮೋದ್ ಪರಿಚಯವಾಗಿತ್ತು. ಅವರ ಜತೆ ಚಾಟ್ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

'ನನ್ನ ಪತಿ ದುಬೈನಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಸಂಗಾತಿ ಹುಡುಕುತ್ತಿದ್ದೇನೆ ಎಂದು ಹೇಳಿ ತನ್ನ ಫೋಟೊ ಮತ್ತು ಲೋಕೇಷನ್ ಅನ್ನು ಸ್ನೇಹಾ, ಸಾಫ್ಟ್‌ವೇರ್ ಎಂಜಿನಿಯರ್‌ಗೆ ಕಳುಹಿಸಿದ್ದಳು. ಅದರಂತೆ ಜೆ.ಪಿ. ನಗರದ 5ನೇ ಹಂತದ ಮನೆಗೆ ಬಂದಾಗ ಸ್ವಲ್ಪ ಹೊತ್ತಿನ ನಂತರ ಮೂವರು ಆರೋಪಿಗಳು ಬಂದಿದ್ದರು. ಎಂಜಿನಿಯರ್ ಮೇಲೆ ಹಲ್ಲೆ ನಡೆಸಿದ್ದರು. ಅಲ್ಲದೇ, ಹಣ ನೀಡದಿದ್ದರೆ ರಸ್ತೆಯಲ್ಲಿ ಬೆತ್ತಲೆಯಾಗಿ ಓಡಿಸುತ್ತೇವೆಂದು ಬೆದರಿಕೆ ಹಾಕಿದ್ದರು. ₹ 3 ಲಕ್ಷ ಕೊಟ್ಟರೆ ನಿನ್ನನ್ನು ಬಿಟ್ಟು ಕಳುಹಿಸುತ್ತೇವೆ' ಎಂದು ಬೇಡಿಕೆ ಇಟ್ಟಿದ್ದರು.

'ಅಂದು ಫೋನ್ ಪೇ ಮೂಲಕ ₹ 21 ಸಾವಿರ ವರ್ಗಾವಣೆ ಮಾಡಿಸಿಕೊಂಡಿದ್ದರು. ಕ್ರೆಡಿಟ್ ಕಾರ್ಡ್‌ನಿಂದ ಹಣವನ್ನು ನೀಡುವಂತೆಯೂ ಬೆದರಿಕೆ ಹಾಕಿದ್ದರು. ಕ್ರೆಡಿಟ್ ಕಾರ್ಡ್ ಮನೆಯಲ್ಲಿದೆ ಎಂದು ಹೇಳಿದಾಗ ಮನೆಗೂ ಬರುವುದಾಗಿ ಹೇಳಿದ್ದರು. ಈ ವೇಳೆ ಮನೆಗೆ ಬರುವ ಮಾರ್ಗಮಧ್ಯದಲ್ಲಿ ಎಂಜಿನಿಯರ್ ತಪ್ಪಿಸಿಕೊಂಡು ಬಂದು ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ಇದೇ ಆರೋಪಿಗಳು ಹಿಂದೆಯೂ ಹಲವರಿಗೆ ಹನಿಟ್ರ್ಯಾಪ್ ಮಾಡಿದ್ದು ₹ 30 ಲಕ್ಷ ಹಣ ಸುಲಿಗೆ ಮಾಡಿದ್ದಾರೆ. ಈಗ ರೂಪದರ್ಶಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮಗು ಮೇಲೆ ಅತ್ಯಾಚಾರ: ತಂದೆ, ಮಗನ ಬಂಧನ

ಬೆಂಗಳೂರು: ಐದು ವರ್ಷದ ಮಗುವಿನ ಮೇಲೆ ನಿರಂತರ ಅತ್ಯಾಚಾರ ಎಸಗುತ್ತಿದ್ದ ತಂದೆ ಹಾಗೂ ಮಗನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇಬ್ಬರ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

55 ವರ್ಷದ ತಂದೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಗರದ ಕಾಲೇಜೊಂದರಲ್ಲಿ ಪಿಯುಸಿ ಓದುತ್ತಿರುವ ಪುತ್ರನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪೊಲೀಸ್ ಠಾಣಾ ವ್ಯಾಪ್ತಿಯ ಪ್ರದೇಶವೊಂದರಲ್ಲಿ ನೆಲೆಸಿದ್ದ ಬಂಧಿತರು, ಸಂತ್ರಸ್ತೆಯ ಕುಟುಂಬದ ಸಂಬಂಧಿಕರು. ಸಂಬಂಧಿಕರು ಕಾರಣಕ್ಕೆ ತಾಯಿ, ಮಗುವನ್ನು ಆರೋಪಿಗಳ ಮನೆಯಲ್ಲಿ ಬಿಟ್ಟು ಕೆಲಸಕ್ಕೆ ತೆರಳುತ್ತಿದ್ದರು. ಈ ವೇಳೆ ಮಗುವಿನ ಮೇಲೆ ದೌರ್ಜನ್ಯ ಎಸಗಲಾಗುತ್ತಿತ್ತು ಎಂದು ಮೂಲಗಳು ಹೇಳಿವೆ.

'ಲೈಂಗಿಕ ಕ್ರಿಯೆಯನ್ನು ಮಗುವಿಗೆ ಅವಾಚ್ಯ ಆರೋಪಿಗಳು ಹೇಳುತ್ತಿದ್ದರು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ದಿನ ಕಳೆದಂತೆ ಮಗುವಿಗೆ ಅಲರ್ಜಿ ಆಗಿತ್ತು. ಕ್ಲಿನಿಕ್‌ವೊಂದಕ್ಕೆ ಕರೆದೊಯ್ದರೂ ವೈದ್ಯರು ಕಾರಣ ಪತ್ತೆ ಮಾಡಲಿಲ್ಲ. ಬಳಿಕ ಸಂಬಂಧಿಕರೊಬ್ಬರ ಮನೆಗೆ ತೆರಳಿದ್ದಾಗ ಅಲ್ಲಿ ಮಗು ವಿಚಿತ್ರ ವರ್ತನೆ ಮಾಡಲು ಆರಂಭಿಸಿತ್ತು. ಅಲ್ಲಿ ಮಗುವನ್ನು ವಿಚಾರಿಸಿದಾಗ ತಂದೆ ಹಾಗೂ ಮಗ ದೌರ್ಜನ್ಯ ಎಸಗುತ್ತಿರುವುದನ್ನು ಹೇಳಿಕೊಂಡಿತ್ತು' ಎಂದು ಅವರು ತಿಳಿಸಿದ್ದಾರೆ.

ಸಂತ್ರಸ್ತೆ ಮಗುವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ದೃಢಪಟ್ಟಿದೆ ಎಂದು ಮೂಲಗಳು ಹೇಳಿವೆ.

ಸಲಿಂಗಕಾಮಿ ಪತಿ: ಪತ್ನಿ ದೂರು

ಬೆಂಗಳೂರು: 'ಸಲಿಂಗಕಾಮಿಯಾದ ಪತಿಯನ್ನು ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿ, 29 ವರ್ಷದ ಮಹಿಳೆಯೊಬ್ಬರು ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ. ಶಿವಮೊಗ್ಗ ಮೂಲದ ಮಹಿಳೆ 2020ರಲ್ಲಿ ಮದುವೆಯಾಗಿದ್ದರು.

'ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಗೆ ಕರೆಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

'ಲೈಂಗಿಕ ಜೀವನ ಉತ್ತಮವಾಗಿರಲಿಲ್ಲ. ಇದರಿಂದ ಮಕ್ಕಳು ಆಗಿರಲಿಲ್ಲ. ಸಂಬಂಧಿಕರು ಪ್ರಶ್ನಿಸಲು ಆರಂಭಿಸಿದ್ದರು. ಪತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವಂತೆ ಸಂಬಂಧಿಕರು ಸೂಚಿಸಿದ್ದರು. ಇದರ ಬಗ್ಗೆ ತಿಳಿಸಿದ್ದಕ್ಕೆ ಪತಿ ನನ್ನನ್ನೇ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಪತಿಯ ಫೇಸ್‌ಬುಕ್ ಪರಿಶೀಲಿಸಿದೆ. ಅಲ್ಲಿ ಸಲಿಂಗಕಾಮಿ ಎಂಬುದು ತಿಳಿಯಿತು. ಇದಾದ ಮೇಲೆ ನನ್ನ ಮೇಲೆ ನಿರಂತರ ಹಲ್ಲೆ ನಡೆಸಿದ್ದಾರೆ' ಎಂದು ದೂರಿನಲ್ಲಿ ಹೇಳಿದ್ದಾರೆ.

ಬಿಎಂಟಿಸಿ ಬಸ್ ಚಕ್ರ ಹರಿದು ಮಗು ಸಾವು

ಪ್ರಜಾವಾಣಿ ವಾರ್ತೆ



ಪೂರ್ವರಾವ್

ಬೆಂಗಳೂರು: ನಗರದ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸುಬ್ರಹ್ಮಣ್ಯಪುರ ಮುಖ್ಯರಸ್ತೆಯಲ್ಲಿ ಬಿಎಂಟಿಸಿ ಬಸ್ ಹಾಗೂ ಬೈಕ್ ನಡುವೆ ಬುಧವಾರ ಬೆಳಿಗ್ಗೆ 8.45ರ ಸುಮಾರಿಗೆ ಸಂಭವಿಸಿದ ಅಪಘಾತದಲ್ಲಿ ಮಗುವೊಂದು ಮೃತಪಟ್ಟಿದೆ.

ಬೆಂಗಳೂರು ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆಯ ನರ್ಸರಿ ವಿದ್ಯಾರ್ಥಿನಿ ಎಂ.ಡಿ.ಪೂರ್ವರಾವ್ (4 ವರ್ಷ, 5 ತಿಂಗಳು) ಮೃತಪಟ್ಟ ಮಗು. ತಂದೆ ಎಂ.ಎಸ್.ಪ್ರಸನ್ನ ಅವರೊಂದಿಗೆ ಬೈಕ್‌ನಲ್ಲಿ ಶಾಲೆಗೆ ತೆರಳುವಾಗ ಈ ಅಪಘಾತ ನಡೆದಿದೆ.

ಮುಖ್ಯರಸ್ತೆಯ ಪದ್ಮಾವತಿ ಸಿಲ್ಕ್ ಶೋ ರೂಂ ಬಳಿ ವೇಗವಾಗಿ ಬಂದ ಬಿಎಂಟಿಸಿ ಬಸ್ ಬೈಕ್‌ಗೆ ಡಿಕ್ಕಿಯಾಗಿದೆ. ಡಿಕ್ಕಿ ರಭಸಕ್ಕೆ ತಂದೆ ಹಾಗೂ ಮಗು ಇಬ್ಬರೂ ರಸ್ತೆಯ ಮೇಲೆ ಬಿದ್ದಿದ್ದರು. ತಂದೆ ಎಡಬದಿಗೆ ಬಿದ್ದರೆ, ಮಗು ಬಲಕ್ಕೆ ಬಿದ್ದಿತ್ತು. ಮಗುವಿನ ಮೇಲೆ ಬಸ್ಸಿನ ಚಕ್ರ ಹರಿದಿದ್ದರಿಂದ ಮೃತಪಟ್ಟಿತು. ತಂದೆಯ ಬಲಗಾಲಿಗೆ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದರು.

ಉತ್ತರಹಳ್ಳಿಯಲ್ಲಿ ನೆಲೆಸಿದ್ದ ಪ್ರಸನ್ನ ಅವರು ಸಿಸ್ಕೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ಕೆಲಸಕ್ಕೆ ತೆರಳುವ ಮುನ್ನ ಮಗುವನ್ನು ತಾವೇ ಪ್ರತಿನಿತ್ಯ ಶಾಲೆಗೆ ಕಳುಹಿಸುತ್ತಿದ್ದರು. ಬುಧವಾರ ಬೆಳಿಗ್ಗೆ ಶಾಲೆ ಕಳುಹಿಸುವಾಗ ಈ ಅಪಘಾತ ನಡೆದಿದೆ. ಬಿಎಂಟಿಸಿ ಬಸ್ ಚಾಲಕ ಬಸವರಾಜ್ ಪೂಜಾರಿ ಅವರನ್ನು ವಶಕ್ಕೆ ಪಡೆಯಲಾಗಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಸ್ಥಳೀಯರ ಆಕ್ರೋಶ: ಅಪಘಾತ ನಡೆದ ಬಳಿಕ ಸ್ಥಳದಲ್ಲಿ ಜಮಾಯಿಸಿ ಸ್ಥಳೀಯರು ಬಿಎಂಟಿಸಿ ಬಸ್ ಚಾಲಕನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಮಾರ್ಗದಲ್ಲಿ ಬಸ್‌ಗಳು ಅತ್ಯಂತ ವೇಗವಾಗಿ ಸಂಚರಿಸುತ್ತಿವೆ. ವೃದ್ಧರು, ಮಕ್ಕಳು ರಸ್ತೆ ದಾಟುತ್ತಿರುತ್ತಾರೆ. ಅದನ್ನು ಲೆಕ್ಕಿಸದೇ ಬಸ್‌ಗಳು ವೇಗವಾಗಿ ತೆರಳುತ್ತಿವೆ. ಇದರಿಂದ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ ಎಂದು ಸ್ಥಳೀಯರು ದೂರಿದರು.



ರಕ್ತದಾನ ಶಿಬಿರ

ಯಲಹಂಕ ಸಮೀಪದ ಕೊಡಿಗೇಹಳ್ಳಿಯ ಟಾಟಾ ನಗರದಲ್ಲಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವಿದ್ಯಾರಣ್ಯಪುರ ಉಪಸಮಿತಿ ಹಾಗೂ ಲಯನ್ಸ್ ಕ್ಲಬ್ ಬೆಂಗಳೂರು ಬೆಳಕು ಸಹಯೋಗದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ರಕ್ತದಾನ ಶಿಬಿರ ಏರ್ಪಡಿಸಲಾಯಿತು. 100 ಯುನಿಟ್ ರಕ್ತ ಸಂಗ್ರಹವಾಯಿತು. ಸಂಘದ ವಿದ್ಯಾರಣ್ಯಪುರ ಉಪಸಮಿತಿ ಅಧ್ಯಕ್ಷ ಎಸ್. ನಾಗರಾಜ್, ಕೇಂದ್ರಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಸಿ. ರಮೇಶ್, ಕೇಂದ್ರ ಸಮಿತಿಯ ಕಾರ್ಯಕಾರಿ ಸದಸ್ಯ ಮಲ್ಲಿಕಾರ್ಜುನ್, ಸಂಘದ ವಿದ್ಯಾರಣ್ಯಪುರ ಉಪಸಮಿತಿ ಕಾರ್ಯದರ್ಶಿ ಜಿ.ಸೂರ್ಯಕುಮಾರ್, ಸಹಕಾರ್ಯದರ್ಶಿ ವಿರೂಪಾಕ್ಷ, ಉಪಾಧ್ಯಕ್ಷ ರಾಜ ಶೇಖರಯ್ಯ, ಬಾಬುರಾಜ್, ಸಂಘಟನಾ ಕಾರ್ಯದರ್ಶಿ ಪುಟ್ಟರಾಜು ಇದ್ದರು

ಅಪಘಾತ: ಉಪನ್ಯಾಸಕ, ಶಿಕ್ಷಕಿ ಸಾವು

ಉಲ್ಲಾಳದ ಮಾರುತಿನಗರ ಮುಖ್ಯರಸ್ತೆಯಲ್ಲಿ ಬೈಕ್‌ಗಳ ಮುಖಾಮುಖಿ ಡಿಕ್ಕಿ

ಪ್ರಜಾವಾಣಿ ವಾರ್ತೆ



ನರಸಪ್ಪ



ರಕ್ಷಾ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉಲ್ಲಾಳದ ಮಾರುತಿನಗರ ಮುಖ್ಯರಸ್ತೆಯಲ್ಲಿ ಮಂಗಳವಾರ ರಾತ್ರಿ ಎರಡು ಬೈಕ್‌ಗಳು ಮುಖಾಮುಖಿ ಡಿಕ್ಕಿಯಾಗಿ ಉಪನ್ಯಾಸಕ ಹಾಗೂ ಶಿಕ್ಷಕಿ ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಕೆಂಗೇರಿ ಸರ್ಕಾರಿ ಕಾಲೇಜಿನ ಉಪನ್ಯಾಸಕ, ರಾಮಸಮುದ್ರದ ನಿವಾಸಿ ನರಸಪ್ಪ (51) ಹಾಗೂ ಕಿಡ್ಸ್ ಕೇರ್‌ನ ಶಿಕ್ಷಕಿ ಉಲ್ಲಾಳದ ರಕ್ಷಾ (21) ಮೃತಪಟ್ಟವರು. ಗಾಯಗೊಂಡಿರುವ ಚಂದನ್ (23) ಅವರು ವಿಜಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ರಾತ್ರಿ 11.40ರ ಸುಮಾರಿಗೆ ಚಂದನ್ ಅವರು ಪಲ್ಸರ್ ಬೈಕ್‌ನಲ್ಲಿ ರಕ್ಷಾ ಅವರೊಂದಿಗೆ ತೆರಳುತ್ತಿದ್ದರು. ಮಾರುತಿನಗರ ಕಡೆಯಿಂದ ಕೆಎಲ್‌ಇ ಕಾಲೇಜು ಕಡೆಗೆ ವೇಗವಾಗಿ ತೆರಳುತ್ತಿದ್ದ ವೇಳೆ ಅದೇ ಮಾರ್ಗದಲ್ಲಿ ಎದುರಿನಿಂದ ಬರುತ್ತಿದ್ದ ನರಸಪ್ಪ ಅವರ ಬೈಕ್‌ಗೆ ಡಿಕ್ಕಿಯಾಗಿದೆ. ನರಸಪ್ಪ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಚಂದನ್ ಹಾಗೂ ರಕ್ಷಾ ಅವರ ಬೈಕ್‌ನಿಂದ ಕೆಳಗೆ ಬಿದ್ದು ಗಾಯಗೊಂಡಿದ್ದರು. ರಕ್ಷಾ ಅವರ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ರಕ್ಷಾ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಹೆಲ್ಮೆಟ್ ಧರಿಸದೇ ಪ್ರಯಾಣ: 'ಚಂದನ್ ಹಾಗೂ ರಕ್ಷಾ ಅವರ ಹೆಲ್ಮೆಟ್ ಧರಿಸಿರಲಿಲ್ಲ. ಅಲ್ಲದೇ ಮೋಜು–ಮಸ್ತಿಗಾಗಿ ಅತ್ಯಂತ ವೇಗವಾಗಿ ಬೈಕ್‌ನಲ್ಲಿ ತೆರಳುತ್ತಿದ್ದರು. ಡಿಕ್ಕಿಯ ರಭಸಕ್ಕೆ ಬೈಕ್ 50 ಮೀಟರ್‌ನಷ್ಟು ದೂರಕ್ಕೆ ಉಜ್ಜಿಕೊಂಡು ಹೋಗಿತ್ತು. ಅಜಾಗರೂಕ ಚಾಲನೆ ಆರೋಪದ ಅಡಿ ಚಂದನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಡಿಕ್ಕಿ- ಹೋಂ ಗಾರ್ಡ್ ಸಾವು: ಮೈಸೂರು ರಸ್ತೆಯ ದೊಡ್ಡಬೆಲೆ ಜಂಕ್ಷನ್‌ನಲ್ಲಿ ಕರ್ತವ್ಯ ನಿರ್ವಹಿಸುವ ವೇಳೆ ಕ್ಯಾಂಟರ್ ಡಿಕ್ಕಿಯಾಗಿ ಹೋಂ ಗಾರ್ಡ್ ಒಬ್ಬರು ಮೃತಪಟ್ಟಿದ್ದಾರೆ.

ವಿಜಯಕುಮಾರ್ (47) ಮೃತಪಟ್ಟ ಹೋಂ ಗಾರ್ಡ್. ವೇಗವಾಗಿ ಬಂದ ಕ್ಯಾಂಟರ್ ವಿಜಯಕುಮಾರ ಅವರಿಗೆ ಡಿಕ್ಕಿಯಾಗಿದೆ. ಇದರಿಂದ ಅವರ ತಲೆಗೆ ತೀವ್ರ ಪೆಟ್ಟಾಗಿತ್ತು. ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ರುದ್ರಸ್ವಾಮಿ



ದೊಡ್ಡಬಳ್ಳಾಪುರ: ತಾಲ್ಲೂಕಿನ ಹೊಸಹಳ್ಳಿ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೆಬಲ್ ರುದ್ರಸ್ವಾಮಿ (45) ಅನಾರೋಗ್ಯದಿಂದ ಬುಧವಾರ ನಿಧನರಾದರು.

ನೆಲಮಂಗಲ ಮೂಲದ ರುದ್ರಸ್ವಾಮಿ ಹೊಸಹಳ್ಳಿ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೃತರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ನೆಲಮಂಗಲ ತಾಲ್ಲೂಕಿನ ಕುಪ್ಪೇಮಾಳ ಗ್ರಾಮದಲ್ಲಿ ಬುಧವಾರ ನಡೆಯಿತು.

ಬಿಬಿಎಂಪಿ ಕಡತ ವಿಲೇವಾರಿ: 'ಲೋಕಾ' ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಕಂದಾಯ ಮತ್ತು ನಗರ ಯೋಜನಾ ವಿಭಾಗಗಳಲ್ಲಿ ಕಡತ ವಿಲೇವಾರಿಯಲ್ಲಿ ಉದ್ದೇಶಪೂರ್ವಕ ವಿಳಂಬ ಹೆಚ್ಚುತ್ತಿರುವುದು ಲೋಕಾಯುಕ್ತ ಪೊಲೀಸರ ಶೋಧದಲ್ಲಿ ಪತ್ತೆಯಾಗಿದೆ. ಈ ಕಾರಣದಿಂದ ಪಾಲಿಕೆ ಕಡತ ವಿಲೇವಾರಿ ಮೇಲೆ ನಿಗಾ ಇಡಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಮುಂದಾಗಿದ್ದಾರೆ.

ಪಾಲಿಕೆ ಕಚೇರಿಗಳಲ್ಲಿ ಕಡತ ವಿಲೇವಾರಿಯಲ್ಲಿ ವಿಳಂಬ, ಭ್ರಷ್ಟಾಚಾರ, ದುರಾಡಳಿತದ ಆರೋಪದ ಮೇಲೆ ಹೆಚ್ಚಿನ ದೂರುಗಳು ಲೋಕಾಯುಕ್ತರಿಗೆ ಬಂದಿದ್ದವು. ಈ ಕುರಿತು ಅವರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ್ದಾರೆ. ಲೋಕಾಯುಕ್ತರ ಆದೇಶದಂತೆ ಬಿಬಿಎಂಪಿಯ ಕಂದಾಯ ಹಾಗೂ ನಗರ ಯೋಜನಾ ವಿಭಾಗಗಳ 45 ಕಚೇರಿಗಳ ಮೇಲೆ ಆಗಸ್ಟ್ 3ರಂದು ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು, ದೀರ್ಘ ಕಾಲ ಶೋಧ ನಡೆಸಿದ್ದರು.

ಲೋಕಾಯುಕ್ತ ಪೊಲೀಸರು ಮತ್ತು ನ್ಯಾಯಾಂಗ ವಿಭಾಗದ ಅಧಿಕಾರಿಗಳು ಪಾಲಿಕೆ ಕಚೇರಿಗಳಲ್ಲಿ ಶೋಧದ ವೇಳೆ ಕಂಡುಬಂದ ಸಂಗತಿಗಳ ಕುರಿತು ಲೋಕಾಯುಕ್ತರಿಗೆ ವರದಿ ನೀಡುತ್ತಿದ್ದಾರೆ. ಪೊಲೀಸ್ ವಿಭಾಗದ ಬಹುತೇಕ ತಂಡಗಳು ವರದಿ ಸಲ್ಲಿಸಿವೆ. ನ್ಯಾಯಾಂಗ ವಿಭಾಗದಿಂದ ಪೂರ್ಣ ಪ್ರಮಾಣದಲ್ಲಿ ವರದಿಗಳು ಇನ್ನೂ ಸಲ್ಲಿಕೆಯಾಗಿಲ್ಲ.

ಶೀಘ್ರದಲ್ಲಿ ಸಭೆ: ಬಿ.ಎಸ್. ಪಾಟೀಲ

'ಹೆಚ್ಚಿನ ಕಚೇರಿಗಳಲ್ಲಿ ಅರ್ಜಿಗಳ ವಿಲೇವಾರಿಯಲ್ಲಿ ದೀರ್ಘ ವಿಳಂಬ ಆಗುತ್ತಿರುವುದು ಗಮನಕ್ಕೆ ಬಂದಿದೆ. ಬಿಬಿಎಂಪಿಯ ಹಿರಿಯ ಅಧಿಕಾರಿಗಳ ಜತೆ ಶೀಘ್ರ ಸಭೆ ನಡೆಸಲಾಗುವುದು. ಎಲ್ಲ ವಿಭಾಗಗಳಲ್ಲೂ ಬಾಕಿ ಇರುವ ಕಡತಗಳ ವಿಲೇವಾರಿಗೆ ಗಡುವು ನಿಗದಿಪಡಿಸಲಾಗುವುದು' ಎಂದು ಬಿ.ಎಸ್. ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ಬಾಕಿ ಇರುವ ಕಡತಗಳ ಪಟ್ಟಿಯನ್ನು ಅಧಿಕಾರಿಗಳಿಗೆ ನೀಡಲಾಗುವುದು. ನಿಗದಿತ ದಿನಗಳೊಳಗೆ ಅವುಗಳನ್ನು ವಿಲೇವಾರಿ ಮಾಡುವಂತೆ ಸೂಚಿಸಲಾಗುವುದು. ಕಡತ ವಿಲೇವಾರಿ ಮೇಲೆ ಲೋಕಾಯುಕ್ತದ ಅಧಿಕಾರಿಗಳಿಂದಲೂ ನಿಗಾ ಇರಿಸಲಾಗುವುದು ಎಂದರು.

ಲಾಡ್ಜ್‌ನಲ್ಲಿ ಯುವಕ ಆತ್ಮಹತ್ಯೆ

ಬೆಂಗಳೂರು: ಕಾಟನ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಲಾಡ್ಜ್‌ನಲ್ಲಿ ಯುವಕ ಸೆಲ್ಫಿ ವಿಡಿಯೊ ಮಾಡಿ ನೇಣುಬಿಗಿದುಕೊಂಡು ಆತ್ಮಹತ್ಯೆಕೊಂಡಿದ್ದಾರೆ.

ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಶಶಿಧರ್ (24) ಆತ್ಮಹತ್ಯೆ ಮಾಡಿಕೊಂಡವರು.

ಶಶಿಧರ್ ಅವರು ಬಾಲಕಿಯನ್ನು ಪ್ರೀತಿಸಿ ಹತ್ತು ದಿನಗಳ ಹಿಂದಷ್ಟೇ ಮದುವೆಯಾಗಿದ್ದರು. ಆದರೆ, ಈ ವಿಚಾರ ತಿಳಿದ ಆಕೆಯ ಪೋಷಕರು ಶಶಿಧರ್ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು. ಅದರಿಂದ ಹೆದರಿದ್ದ ಶಶಿಧರ್ ಮೂರು ದಿನಗಳ ಹಿಂದೆ ಬೆಂಗಳೂರಿಗೆ ಬಂದು ಕಾಟನ್‌ಪೇಟೆಯ ಲಾಡ್ಜ್‌ನಲ್ಲಿದ್ದರು. ಅಲ್ಲಿನ ಪೊಲೀಸರು ಹುಡುಕಾಟ ಆರಂಭಿಸಿರುವುದನ್ನು ತಿಳಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. 'ಆರು ವರ್ಷಗಳಿಂದ ಪ್ರೀತಿಸಿ ಮದುವೆಯಾಗಿದ್ದೆ. ಆದರೆ, ಆಕೆ ಪೋಷಕರು ಜಾತಿ ಸಲುವಾಗಿ ತನ್ನ ವಿರುದ್ಧ ದೂರು ದಾಖಲಿಸಿದ್ದಾರೆ. ನನ್ನ ಸಾವಿಗೆ ಪತ್ನಿಯ ಪೋಷಕರು ಹಾಗೂ ಸಂಬಂಧಿಕರು ಕಾರಣ' ಎಂದು ವಿಡಿಯೊದಲ್ಲಿ ದೂರಿದ್ದಾರೆ. ಮಂಗಳವಾರ ಬೆಳಿಗ್ಗೆ ಲಾಡ್ಜ್ ಸಿಬ್ಬಂದಿ ಬಂದು ನೋಡಿದಾಗ ಯುವಕ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ.

ಧಿಡೀರ್ ಎದೆನೋವು: ವ್ಯಕ್ತಿ ಸಾವು



ಬೆಂಗಳೂರು: ತಾವರೆಕೆರೆಯ ಕುಮಾರಮ್ಮ ಹಾಗೂ ದಿವಂಗತ ಟಿ.ಎಸ್.ನಟರಾಜ್ ದಂಪತಿಯ ಪುತ್ರ ಟಿ.ಎನ್. ಭವನ ಕುಮಾರ್ (34) ಬುಧವಾರ ನಿಧನರಾದರು. ಭವನ ಕುಮಾರ್ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಬುಧವಾರ ಬೆಳಗ್ಗೆ ದಿಢೀರ್ ಎದೆ ನೋವು ಕಾಣಿಸಿಕೊಂಡು ಹೃದಯ ಘಾತದಿಂದ ನಿಧನರಾಗಿದ್ದಾರೆ. ಅಂತ್ಯಕ್ರಿಯೆಯನ್ನು ಟಿ.ಆರ್.ಮಿಲ್ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರಿಗೆ ತಾಯಿ ಕುಮಾರಮ್ಮ, ಪತ್ನಿ ಮಧುರಾ, ಪುತ್ರಿ ಮೌಲ್ಯ ಇದ್ದಾರೆ.

ಬಿಲ್ ಬಿಡುಗಡೆಗೆ ಶಾಸಕರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದ ಕಾಮಗಾರಿಗಳ ತನಿಖೆಯನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಆದಷ್ಟು ಬೇಗ ಪೂರ್ಣಗೊಳಿಸಿ, ಕೆಲಸ ಮಾಡಿದ ಗುತ್ತಿಗೆದಾರರ ಬಿಲ್ ಬಿಡುಗಡೆ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಕಾಂಗ್ರೆಸ್ ಶಾಸಕರು ಒತ್ತಾಯಿಸಿದರು.

ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಬೆಂಗಳೂರು ನಗರ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರ ಜೊತೆ ಪ್ರತ್ಯೇಕವಾಗಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳು, ಅನುದಾನ, ಸರ್ಕಾರ ಮತ್ತು ಪಕ್ಷದ ಜತೆಗಿನ ಸಮನ್ವಯ ಹಾಗೂ ಮುಂಬರುವ ಲೋಕಸಭಾ ಚುನಾವಣೆ ಕುರಿತು ಶಾಸಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ತನಿಖೆಗೂ ಮೊದಲು ಬಿಲ್ ಬಿಡುಗಡೆ ಬೇಡ: 'ಗುತ್ತಿಗೆದಾರರ ಬಾಕಿ ಬಿಲ್ ಆದಷ್ಟು ಬೇಗ ಪಾವತಿಸದಿದ್ದರೆ ಕಾಮಗಾರಿಗಳು ಬಾಕಿ ಉಳಿಯುತ್ತವೆ. ಹೀಗಾದರೆ ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗಲಿದೆ' ಎಂದು ಬೆಂಗಳೂರಿನ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದರು.

'ಸದ್ಯ ಎಸ್‌ಐಟಿ ತನಿಖೆ ನಡೆಸುತ್ತಿದೆ. 20 ದಿನಗಳಲ್ಲಿ ತನಿಖೆ ಮುಗಿಯಲಿದೆ. ಅದಕ್ಕೂ ಮೊದಲು ಬಿಲ್ ಬಿಡುಗಡೆ ಬೇಡ' ಎಂದು ಶಾಸಕರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಮನವರಿಕೆ ಮಾಡಿದರು.

ಸಭೆಯ ಬಳಿಕ ಮಾತನಾಡಿದ ಸಚಿವ ರಾಮಲಿಂಗಾ ರೆಡ್ಡಿ, 'ಬೆಂಗಳೂರು ಅಭಿವೃದ್ಧಿ, ಸಂಚಾರ ದಟ್ಟಣೆ, ಒಂಟಿ ಮನೆ ನಿರ್ಮಿಸುವ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಿದ್ದೇವೆ. ಬೆಂಗಳೂರು ವಿಧಾನಸಭಾ ಕ್ಷೇತ್ರವಾರು ಮನೆ ಕಟ್ಟಿಸಿಕೊಡುವುದು, ಕುಡಿಯುವ ನೀರು, ಮಾದಕ ವಸ್ತು ನಿಯಂತ್ರಣದ ಬಗ್ಗೆಯೂ ಸಮಾಲೋಚನೆ ಮಾಡಿದ್ದೇವೆ' ಎಂದು ವಿವರಿಸಿದರು.

ಕಾಮಗಾರಿಗಳ ಬಿಲ್ ಬಾಕಿ ಕುರಿತು ಪ್ರತಿಕ್ರಿಯಿಸಿದ ಅವರು, 'ಎಸ್‌ಐಟಿ ತನಿಖೆ ನಡೆಯುತ್ತಿದ್ದು, ತನಿಖೆ ಪೂರ್ಣಗೊಳಿಸಲು ಒಂದು ತಿಂಗಳು ಸಮಯ ಕೊಟ್ಟಿದ್ದಾರೆ. ಈಗಾಗಲೇ 10 ದಿನ ಕಳೆದಿದೆ. ಕೆಲಸ ಚೆನ್ನಾಗಿ ಮಾಡಿದವರಿಗೆ ಹಣ ಬಿಡುಗಡೆ ಆಗಲಿದೆ' ಎಂದರು.

'ಡಿಸೆಂಬರ್‌ನಲ್ಲಿ ಪಾಲಿಕೆ ಚುನಾವಣೆ ಬರಬಹುದು. ನಗರಕ್ಕೆ ಸಂಬಂಧಿಸಿದ ಬಾಕಿ ಇರುವ ಯೋಜನೆಗಳಿಗೆ ಅನುಮತಿ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ. ಕುಡಿಯುವ ನೀರು ಮತ್ತು ಘನತ್ಯಾಜ್ಯ ನಿರ್ವಹಣೆ ವಿಷಯಗಳ ಕುರಿತು ಚರ್ಚಿಸಿದ್ದೇವೆ' ಎಂದರು.

ಬೆಂಕಿ ಅವಘಡ: ₹10 ಲಕ್ಷ ಪರಿಹಾರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಬೆಂಕಿ ಅವಘಡದಿಂದ ಗಾಯಗೊಂಡಿರುವ ಒಂಬತ್ತು ಮಂದಿಗೆ ತಲಾ ₹10 ಲಕ್ಷ ಪರಿಹಾರ ನೀಡಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, 'ಒಂಬತ್ತು ಜನಕ್ಕೂ ಪರಿಹಾರ ನೀಡುವ ಜೊತೆಗೆ ಅವರು ಶೇ 10ರಷ್ಟು ಚೇತರಿಸಿಕೊಳ್ಳುವವರೆಗೂ ವಿಶೇಷ ರಜೆಯನ್ನು ನೀಡಬೇಕು. ಎಲ್ಲರಿಗೂ ಸಂಪೂರ್ಣ ಚಿಕಿತ್ಸೆ ವೆಚ್ಚವನ್ನು ಪಾಲಿಕೆ ವತಿಯಿಂದಲೇ ಭರಿಸಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ಮುಖ್ಯ ಎಂಜಿನಿಯರ್ ಶಿವಕುಮಾರ್, ಕಾರ್ಯಪಾಲಕ ಎಂಜಿನಿ ಯರ್ ವಿಜಯಮಾಲ, ಆಪರೇಟರ್ ಜ್ಯೋತಿ ಅವರಿಗೆ ಮಂಗಳವಾರ ಕೈಗಳಿಗೆ ಫ್ಯಾಸಿಯೊಟಮಿ (ಚರ್ಮ ಕಸಿ) ಪ್ರಕ್ರಿಯೆ ನಡೆಸಲಾಗಿತ್ತು. ಕಾರ್ಯಪಾಲಕ ಎಂಜಿನಿಯರ್ ಕಿರಣ್ ಅವರಿಗೆ ಮತ್ತೆ ಡಯಾಲಿಸಿಸ್ ನಡೆಸಲಾಗಿದೆ. ಅತಿಹೆಚ್ಚು ಗಂಭೀರವಾಗಿದ್ದ ಶಿವಕುಮಾರ್ ಅವರಿಗೆ ಉಸಿರಾಟದ ಪ್ರಕ್ರಿಯೆ ಸುಧಾರಿಸಲು ಸ್ಪೈರೊಮೆಟ್ರಿ ನಡೆಸಲಾಯಿತು. ಶಿವಕುಮಾರ್ ಹಾಗೂ ಜ್ಯೋತಿ ಅವರ ಸ್ಥಿತಿ ಇನ್ನೂ ಗಂಭೀರವಾಗಿದ್ದು ತೀವ್ರ ನಿಗಾ ವಹಿಸಲಾಗಿದೆ. ಉಳಿದ ಏಳು ಜನರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಪ್ರಕಟಣೆ ತಿಳಿಸಿದೆ.

ಪ್ರಯೋಗಾಲಯಕ್ಕೆ ವ್ಯವಸ್ಥೆ: ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಸ್ಥಳಾವಕಾಶ ಕಡಿಮೆಯಿದ್ದು, ಸಿಬ್ಬಂದಿ ಕಚೇರಿಗೆ ಪ್ರತ್ಯೇಕ ಕೊಠಡಿ ನೀಡಬೇಕು ಎಂದು 2022ರ ಆಗಸ್ಟ್ 16ರಂದು ಅಂದಿನ ಅಧೀಕ್ಷಕ ಎಂಜಿನಿಯರ್ ಬಿ.ಜಿ. ರಾಘವೇಂದ್ರ ಪ್ರಸಾದ್ ಟಿಪ್ಪಣಿ ಬರೆದು ಕಳುಹಿಸಿದ್ದರು. ಆದರೆ, ಅದು ಅಂದಿನಿಂದ ಪ್ರಧಾನ ಎಂಜಿನಿಯರ್ ಕಚೇರಿಯಲ್ಲಿತ್ತು. ಇದೀಗ, ಪ್ರಯೋಗಾಲಯಕ್ಕೆ ಸುರಕ್ಷಿತ ಕ್ರಮಗಳನ್ನು ಒದಗಿಸುವ ಬಗ್ಗೆ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಮುಂದಾಗಿದ್ದಾರೆ. 'ಪ್ರಯೋಗಾಲಯಕ್ಕೆ ಯಾವ ರೀತಿ ವ್ಯವಸ್ಥೆ ಕಲ್ಪಿಸಬೇಕು ಎಂಬುದನ್ನು ಇಂತಹ ಪ್ರಯೋಗಾಲಯಗಳನ್ನು ಹೊಂದಿರುವ ಲೋಕೋಪಯೋಗಿ ಇಲಾಖೆ, ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ರಾಸ್ತಾ ಸೆಂಟರ್ ಫಾರ್ ರೋಡ್ ಟೆಕ್ನಾಲಜಿ ಅವರಿಂದ ತಾಂತ್ರಿಕ ಸಲಹೆಯನ್ನು ಪಡೆಯಲು ನಿರ್ಧರಿಸಲಾಗಿದೆ' ಎಂದು ಪ್ರಹ್ಲಾದ್ ತಿಳಿಸಿದರು.

'ಪ್ರಯೋಗಾಲಯದಲ್ಲಿ ಬಿಟುಮಿನ್ ಪರೀಕ್ಷಿಸಲು ಬೆಂಜೀನ್ ಬಳಸುವುದು ಸಹಜ. ಆದರೆ ಅಂದು ರಾಸಾಯನಿಕ ಸೋರಿಕೆಯಾಗಿದ್ದರಿಂದ ಬಿಸಿಗಾಳಿ ಹೆಚ್ಚಾಗಿ ಬೆಂಕಿ ಅವಘಡ ಸಂಭವಿಸಿದೆ' ಎಂದು ಪ್ರಾಥಮಿಕ ತನಿಖೆ ನಡೆಸಿದ ಪ್ರಹ್ಲಾದ್ ಹೇಳಿದರು.

ಮುರುಘಾಮಠ: ಮಾಜಿ ಸಚಿವ ಏಕಾಂತಯ್ಯಗೆ ಹೈಕೋರ್ಟ್ ಪ್ರಶ್ನೆ

ಮೇಲ್ಮನವಿ ಸಲ್ಲಿಕೆಗೆ ನಿಮಗಿರುವ ಅಧಿಕಾರವೇನು?

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ನಿಮಗಿರುವ ಸ್ವತಂತ್ರ ಹಕ್ಕುಗಳೇನು?, ಸರ್ಕಾರ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿದ್ದ ಆದೇಶವನ್ನು ಈಗಾಗಲೇ ಹಿಂಪಡೆದಿದೆ. ಅಂದಿನ ಆಡಳಿತಾಧಿಕಾರಿ ತಮ್ಮ ಅವಧಿಯಲ್ಲಿ ನಿಮ್ಮನ್ನು ವಿದ್ಯಾಪೀಠಕ್ಕೆ ಉಪಾಧ್ಯಕ್ಷರನ್ನಾಗಿ ಮಾಡಿದ್ದರು. ಅವರೀಗ ಇಡೀ ಚಿತ್ರಣದಿಂದಲೇ ಹೊರಗಿರುವಾಗ ನಿಮ್ಮ ಅಳಲು ತೋಡಿಕೊಳ್ಳಲು ಇರುವ ಕಾನೂನುಬದ್ಧ ಅಧಿಕಾರವಾದರೂ ಏನು...'?

'ಚಿತ್ರದುರ್ಗದ, 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ಈ ಹಿಂದಿನ ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದ ಆದೇಶವನ್ನು ರದ್ದುಪಡಿಸಿದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ಮುಂದುವರಿಸಿತು.

ವಿಚಾರಣೆ ವೇಳೆ ಮೇಲ್ಮನವಿದಾರ ಮಾಜಿ ಸಚಿವ ಎಚ್.ಏಕಾಂತಯ್ಯ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್ ವಕೀಲ ಸುಘೋಷ್ ಸುಬ್ರಹ್ಮಣ್ಯಂ ಅವರಿಗೆ ನ್ಯಾಯಪೀಠ ಕೇಳಿದ ಪ್ರಶ್ನೆಗಳಿವು.

ವಿವಿಧ ರಾಜ್ಯಗಳ ಹೈಕೋರ್ಟ್ ಪೂರ್ವ ನಿದರ್ಶನಗಳನ್ನು ಪ್ರಸ್ತುತಪಡಿಸಿದ ಸುಘೋಷ್, 'ಏಕಾಂತಯ್ಯ ಅವರಿಗೀಗ 90 ವರ್ಷ. ಅವರು ಮುರುಘಾ ಮಠದಲ್ಲೇ ಓದಿ ಬೆಳೆದವರು. ಮಠದ ಏಳಿಗೆಗಾಗಿ ಸದಾ ಹಂಬಲಿಸುವ ನಿಷ್ಠಾವಂತ ಭಕ್ತ. ಸಚಿವರಾಗಿದ್ದವರು. ಮೇಲಾಗಿ, ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠದ (ಎಸ್‌ಜೆಎಂ) ಉಪಾಧ್ಯಕ್ಷರಾಗಿದ್ದವರು. ಹೀಗಾಗಿ, ಸುದುದ್ದೇಶದಿಂದ ಈ ಮೇಲ್ಮನವಿ ಸಲ್ಲಿಸಲು ಅರ್ಹರಾಗಿದ್ದಾರೆ, ಮಾತ್ರವಲ್ಲ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸುವ ಅರ್ಹತೆ ಹೊಂದಿದ್ದಾರೆ' ಎಂದು ಪ್ರತಿಪಾದಿಸಿದರು.

ಮತ್ತೊಬ್ಬ ಮೇಲ್ಮನವಿದಾರರೂ ಆದ ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್ ಪರ ಹಿರಿಯ ವಕೀಲ ಕೆ.ಜಿ.ರಾಘವನ್ ಸುದೀರ್ಘ ಮೂರುವರೆ ಗಂಟೆಗಳಿಗೂ ಹೆಚ್ಚು ಕಾಲ ವಾದ ಮಂಡಿಸಿ, ' ಆದರೆ, ಮಠದ ಪೀಠಾಧಿಪತಿ ಕಳಂಕಿತರಾಗಿ ಕ್ರಿಮಿನಲ್ ಪ್ರಕರಣದಲ್ಲಿ ಜೈಲು ಸೇರಿರುವ ಕಾರಣ ಸರ್ಕಾರ ಮಠದ ಚರ ಮತ್ತು ಸ್ಥಿರಾಸ್ತಿ ರಕ್ಷಣೆಗೆ ಸೂಕ್ತವಾದ ನಿಲುವು ತೆಗೆದುಕೊಂಡಿತ್ತು. ರಾಜ್ಯದಲ್ಲಿ ಧಾರ್ಮಿಕ ಮಠವೊಂದಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿದ್ದನ್ನು ನಾವು ಸೋಸಲೆ ವ್ಯಾಸರಾಯರ ಮಠದ ಚರಿತ್ರೆಯಲ್ಲಿ ಗಮನಿಸಬಹುದು. ಸಂವಿಧಾನದ 162ನೇ ವಿಧಿಯಡಿ ಸರ್ಕಾರ ಇಂತಹ ಅಧಿಕಾರ ಬಳಕೆ ಮಾಡುವುದು ಸೂಕ್ತವಾಗಿಯೇ ಇದೆ' ಎಂದರು.

'ಸಿವಿಲ್ ಪ್ರಕ್ರಿಯಾ ಸಂಹಿತೆ–1908ರ ಕಲಂ 92ರ ಅನುಸಾರ ಅಸಲು ದಾವೆ ಹೂಡಿ ಪರಿಹಾರ ಪಡೆಯಿರಿ ಎಂದು ಏಕಸದಸ್ಯ ನ್ಯಾಯಪೀಠ ಹೇಳಿರುವುದು ಸಮರ್ಥನೀಯವಲ್ಲ. ಕಾನೂನಾತ್ಮಕ ಅಂಶಗಳನ್ನು ಗಮನಿಸಿದಾಗ ಏಕಸದಸ್ಯ ನ್ಯಾಯಪೀಠ ರಿಟ್ ಅರ್ಜಿಯ ವಿಚಾರಣೆ ನಡೆಸಲು ಸಾಕಷ್ಟು ಸಮಯ ತೆಗೆದುಕೊಂಡಿದೆ. ಆದರೆ, ವಾಸ್ತವವನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವಿದೆ. ಹಾಗಾಗಿ, ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಪಡಿಸಬೇಕು' ಎಂದು ಕೋರಿದರು.

ಬೆಳಗ್ಗೆ 10 ಗಂಟೆಗೇ ವಿಚಾರಣೆ ಆರಂಭಿಸಿದ ನ್ಯಾಯಪೀಠ ದಿನದ ಬೆಳಗಿನ ಕಲಾಪದ ಅವಧಿ ಮುಕ್ತಾಯವಾಗುವತನಕ ನಡೆಸಿತು. ಮಧ್ಯಾಹ್ನ 2.30ಕ್ಕೆ ಪುನಃ ಶಿವಮೂರ್ತಿ ಶರಣರ ಪರ ಹಾಜರಿದ್ದ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ಅವರ ವಾದ ಆಲಿಕೆ ಮುಂದುವರಿಸುವುದಾಗಿ ತಿಳಿಸಿತು. ಆದರೆ, ಮಧ್ಯಾಹ್ನದ ಕಲಾಪದಲ್ಲಿ ವಿಚಾರಣೆ ಕೈಗೆತ್ತಿಕೊಳ್ಳದೆ ಗುರುವಾರಕ್ಕೆ (ಆ.17) ನಿಗದಿಗೊಳಿಸಿ ಮುಂದೂಡಿತು.

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳ ಕುರಿತ ಮಾಹಿತಿ ನೀಡಿದ್ದಾರೆ **ಗುರುಶಂಕರ್**

ಪ್ರಚಲಿತ ವಿದ್ಯಮಾನಗಳು

1. ಭಾರತ್ ಮಂಟಪಂ

ಇತ್ತೀಚೆಗೆ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಪ್ರಗತಿ ಮೈದಾನದ 'ಭಾರತ್ ಮಂಟಪಂ' ಎನ್ನುವ ಅಂತರರಾಷ್ಟ್ರೀಯ ಪ್ರದರ್ಶನ ಮತ್ತು ಕನ್ವೆನ್ಷನ್ ಸೆಂಟರ್ ಉದ್ಘಾಟಿಸಿದರು.

ಅಂದಾಜು ₹ 2,700 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಸಂಕೀರ್ಣವನ್ನು ಸಿಂಗಪುರದ ಪ್ರಸಿದ್ಧ ಮರೀನಾ ಬೇ ಸ್ಯಾಂಡ್ಸ್‌ನ ವಾಸ್ತುಶಿಲ್ಪಿ ಏಡಾಸ್ ಮತ್ತು ಭಾರತೀಯ ಸಂಸ್ಥೆ ಆರ್ಕಾಪ್ ವಿನ್ಯಾಸಗೊಳಿಸಿದೆ.

ಮಂಟಪಂ ವಿಶೇಷತೆಗಳು: ಅಂದಾಜು 123 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ ಈ ಸಂಕೀರ್ಣದ ವಿನ್ಯಾಸವನ್ನು ಶಂಖಕಾರದಿಂದ ಪ್ರೇರಣೆಗೊಂಡು ರಚಿಸಲಾಗಿದೆ. ಈ ಕಟ್ಟಡದ ಗೋಡೆಗಳ ಮೇಲೆ ಮತ್ತು ಮುಂಭಾಗದಲ್ಲಿ ಭಾರತದ ಸಾಂಪ್ರದಾಯಿಕ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವಂತಹ ಚಿತ್ರಗಳನ್ನು ರಚಿಸಲಾಗಿದೆ.



ನವದೆಹಲಿಯ ಪ್ರಗತಿ ಮೈದಾನದಲ್ಲಿರುವ ಭಾರತ್ ಮಂಟಪ್ – ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಮತ್ತು ಕನ್ವೆಷನ್ ಸೆಂಟರ್ (ಐಇಸಿಸಿ) ಚಿತ್ರ: ವಿಕಿ ಕಾಮನ್ಸ್

ಈ ಕನ್ವೆನ್ಷನ್ ಸೆಂಟರ್‌ನ ಬಹುಪಯೋಗಿ ಸಭಾಂಗಣ ಮತ್ತು ಪ್ಲೀನರಿ ಹಾಲ್ ಒಟ್ಟು 7000 ಆಸನಗಳ ಸಾಮರ್ಥ್ಯವನ್ನು ಹೊಂದಿದೆ ಆಸ್ಟ್ರೇಲಿಯಾದ ಹೆಸರಾಂತ ಒಪೆರಾ ಹೌಸ್‌ಗಿಂತ ಹೆಚ್ಚಿನ ಆಸನ ಸಾಮರ್ಥ್ಯವನ್ನು ಹೊಂದಿದೆ.

ಭಾರತ್ ಮಂಟಪಂ ಸಂಕೀರ್ಣದಲ್ಲಿ ಅತ್ಯಾಧುನಿಕ ಸೌಲಭ್ಯಗಳಿವೆ. ಸುಸಜ್ಜಿತ ಆಡಿಟೋರಿಯಂಗಳು, ಆಂಫಿಥಿಯೇಟರ್, ಸಭಾ ಕೋಣೆಗಳು, ಲಾಂಜ್‌ಗಳಿವೆ. ಮುಂದಿನ ತಿಂಗಳು (ಸೆಪ್ಟೆಂಬರ್ 2023)ರಲ್ಲಿ ನಡೆಯಲಿರುವ ಜಿ20 ಶೃಂಗಸಭೆಯನ್ನು ಭಾರತ್ ಮಂಟಪಂ ಸಂಕೀರ್ಣದಲ್ಲಿ ಆಯೋಜಿಸಲಾಗಿದೆ.

2. ಅತಿಥಿ ಪೋರ್ಟಲ್

ವಲಸಿಗ ಕಾರ್ಮಿಕರ ಗುರುತು ಪತ್ತೆ ಹಚ್ಚುವಿಕೆ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಕೇರಳ ಸರ್ಕಾರ ಇತ್ತೀಚೆಗೆ 'ಅತಿಥಿ' ಎಂಬ ನೂತನ ಪೋರ್ಟಲ್‌ವೊಂದನ್ನು ಆರಂಭಿಸಿದೆ.

ಕೇರಳದಲ್ಲಿ ಕಾರ್ಯನಿರ್ವಹಿಸುತ್ತಿರುವ ವಲಸೆ ಕಾರ್ಮಿಕರು ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿರುವ ಸಂಗತಿ ಇತ್ತೀಚೆಗೆ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ವಲಸೆ ಕಾರ್ಮಿಕರ ಪತ್ತೆಹಚ್ಚುವಿಕೆ ಯನ್ನು ಸರಳೀಕರಣಗೊಳಿಸಲು ಹಾಗೂ ವಲಸೆ ಕಾರ್ಮಿಕರ ಮೇಲೆ ನಿಗಾ ವಹಿಸಲು ಹಾಗೂ ಯಾವುದೇ ರೀತಿಯ ಅಪರಾಧ ಚಟುವಟಿಕೆಗಳು ನಡೆಯದಂತೆ ಉಸ್ತುವಾರಿವಹಿಸಲು ಕೇರಳ ಸರ್ಕಾರ ಈ ಕ್ರಮ ಕೈಗೊಂಡಿದೆ.

ಬೇರೆ ರಾಜ್ಯಗಳಿಂದ ಕೇರಳಕ್ಕೆ ಬರುವಂತಹ ವಲಸಿಗ ಕಾರ್ಮಿಕರ ಹೆಸರುಗಳನ್ನು ಈ ಪೋರ್ಟಲ್‌ನಲ್ಲಿ ನೋಂದಾಯಿಸಲಾಗುತ್ತದೆ. ಮುಂದೆ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಕ್ರಮ ಕೈಗೊಳ್ಳಲೂ ಈ ಪೋರ್ಟಲ್ ಸಹಾಯವಾಗಲಿದೆ.

ರೈಲ್ವೆ ನಿಲ್ದಾಣಗಳಲ್ಲಿ ವಲಸಿಗ ಕಾರ್ಮಿಕರ ನೋಂದಣಿ ಪ್ರಕ್ರಿಯೆಯನ್ನು ಕೈಗೊಳ್ಳಲು ಕಚೇರಿಗಳನ್ನು ಸ್ಥಾಪಿಸಲಾಗುತ್ತದೆ. ಈ



ಸಾಂದರ್ಭಿಕ ಚಿತ್ರ

ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿಗಳು ವಲಸಿಗ ಕಾರ್ಮಿಕರಿಗೆ ಬೇಕಾದ ಸಹಕಾರವನ್ನು ಕಲ್ಪಿಸುತ್ತಾರೆ.

ನೋಂದಣಿಯಾದ ಪ್ರತಿ ಕಾರ್ಮಿಕರಿಗೆ ಪ್ರತ್ಯೇಕ ಗುರುತಿನ ಚೀಟಿಯನ್ನು ಕಲ್ಪಿಸಲಾಗುತ್ತದೆ ಹಾಗೂ ಮುಂದಿನ ದಿನಗಳಲ್ಲಿ ವಲಸಿಗ ಕಾರ್ಮಿಕರ ದಾಖಲೆಗಳನ್ನು ನಿರ್ವಹಿಸಲು ಹೆಚ್ಚು ಉಪಯುಕ್ತವಾಗುತ್ತದೆ.

ವಲಸಿಗ ಕಾರ್ಮಿಕರ ಪ್ರಮುಖ ಮಾಹಿತಿಯನ್ನು ನೋಂದಣಿ ಪ್ರಕ್ರಿಯೆಯಲ್ಲಿ ಪಡೆದುಕೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರ ಈ ವರ್ಗದವರಿಗೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲೂ ಹೆಚ್ಚು ಉಪಯುಕ್ತವಾಗುತ್ತದೆ ಎಂದು ಕೇರಳ ಸರ್ಕಾರ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.



ಸಾಂದರ್ಭಿಕ ಚಿತ್ರ

3. ನಮ್ದಾ (Namda Art) ಯೋಜನೆ

ಶತಮಾನಗಳಷ್ಟು ಹಳೆಯದಾದ ಕಾಶ್ಮೀರದ ನಮ್ದಾ ಕರಕುಶಲ ಕಲೆಯನ್ನು ಪುನರುಜ್ಜೀವನ ಗೊಳಿಸಲು ರೂಪಿಸಿರುವ ಯೋಜನೆ 'ನಮ್ದಾ ಯೋಜನೆ'.

ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆಯ ಭಾಗವಾಗಿರುವ ಸ್ಕಿಲ್ ಇಂಡಿಯಾದ ಪ್ರಾಯೋಗಿಕ ಯೋಜನೆ(ಪೈಲಟ್ ಪ್ರಾಜೆಕ್ಟ್) ಅಡಿಯಲ್ಲಿ ಇದನ್ನು ಹಮ್ಮಿಕೊಳ್ಳಲಾಗಿದೆ. ನಮ್ದಾ ಕರಕುಶಲ ಕಲೆಯೆಂದರೆ ಕುರಿಯ ಉಣ್ಣೆಯನ್ನು ಬಳಸಿ ಸಾಮಾನ್ಯ ನೇಯ್ಗೆಗಿಂತ ಭಿನ್ನವಾಗಿ ಫೆಲ್ಟಿಂಗ್ ತಂತ್ರದೊಂದಿಗೆ ತಯಾರಿಸುವ ಕಂಬಳಿಗಳಾಗಿವೆ.

ಕಡಿಮೆ ಕಚ್ಚಾವಸ್ತುಗಳ ಲಭ್ಯತೆ, ನುರಿತ ಮಾನವ ಸಂಪನ್ಮೂಲಗಳ ಕೊರತೆ ಮತ್ತು ಮಾರುಕಟ್ಟೆ ತಂತ್ರಗಳು ಕೊರತೆಯಿಂದಾಗಿ ನಮ್ದಾ ಕರಕುಶಲ ವಸ್ತುಗಳ ರಫ್ತು 1998 ರಿಂದ 2008ರ ನಡುವೆ ಬಹುಪಾಲು ಕಡಿಮೆಯಾಗಿತ್ತು.

ಇತ್ತೀಚೆಗೆ ವಿಶ್ವ ಯುವ ಕೌಶಲ ದಿನದಂದು ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆಯ ರಾಜ್ಯ ಸಚಿವರಾದ ರಾಜೀವ್ ಚಂದ್ರಶೇಖರ್ ಅವರು ಈ ಉತ್ಪನ್ನಗಳ ಮೊದಲ ಹಂತದ ರಫ್ತಿಗೆ ಚಾಲನೆ ನೀಡಿದರು.

ವಿಶೇಷ ಸೂಚನೆ: ಈ ಯೋಜನೆಯನ್ನು ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯ ಭಾಗವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ನಮ್ದಾ ಕಲೆ ತರಬೇತಿ: ಇತ್ತೀಚೆಗೆ ಕಾಶ್ಮೀರದ ಶ್ರೀನಗರ, ಬಾರಮುಲ್ಲಾ, ಗಂಡೇರ್ಬಲ್, ಬಂಡಿಪೋರ, ಬುಡಗಾಂವ್ ಹಾಗೂ ಅನಂತನಾಗ್ ಜಿಲ್ಲೆಗಳ ಎರಡು ಸಾವಿರಕ್ಕೂ ಕುಶಲಕರ್ಮಿಗಳಿಗೆ 'ನಮ್ದಾ ಕರಕುಶಲ ಕಲೆ' ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಯೋಜನೆಯು ನಶಿಸುತ್ತಿರುವ ಕರಕುಶಲತೆಯ ಸಂರಕ್ಷಣೆಗೆ ಮತ್ತು ಸ್ಥಳೀಯ ನೇಕಾರರ ಮತ್ತು ಕಲಾವಿದರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿದೆ.

ಸಾರ್ವಜನಿಕ- ಖಾಸಗಿ ಸಹಭಾಗಿತ್ವ: 'ನಮ್ದಾ ತರಬೇತಿ ಯೋಜನೆ'ಯು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯ ಯಶಸ್ವಿ ಅನುಷ್ಠಾನಕ್ಕೆ ಮಾದರಿಯಾಗಿದೆ. ಸರ್ಕಾರ, ಸ್ಥಳೀಯ ಕೈಗಾರಿಕೋದ್ಯಮಿಗಳು, ವೀರ್ ಹ್ಯಾಂಡಿ ಕ್ರಾಫ್ಟ್ ಆ್ಯಂಡ್ ಶ್ರೀನಗರ ಕಾರ್ಪೆಟ್ ಟ್ರೈನಿಂಗ್ ಆ್ಯಂಡ್ ಮಾರ್ಕೆಟ್ ಸೆಂಟರ್ ಸಂಸ್ಥೆಯ ಸಹಭಾಗಿತ್ವದಲ್ಲಿ ನಮ್ದಾ ಕರಕುಶಲತೆಯ ತರಬೇತಿ ಕಾರ್ಯಕ್ರಮವನ್ನು ಕಲ್ಪಿಸುತ್ತಿದೆ.

ಕೈಗಾರಿಕೋದ್ಯಮಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಕ್ರಿಯವಾಗಿ ಯೋಜನೆಯಲ್ಲಿ ಭಾಗವಹಿಸುತ್ತಿರುವ ಕಾರಣದಿಂದ ಮುಂದಿನ ದಿನಗಳಲ್ಲಿ ಕಾಶ್ಮೀರದ ಆರ್ಥಿಕ ಅಭಿವೃದ್ಧಿ ಹೆಚ್ಚುವ ಹಾಗೂ ಹೆಚ್ಚಿನ ಪ್ರಮಾಣದ ಹೂಡಿಕೆಗಳು ಹರಿದು ಬರುವ ಸಾಧ್ಯತೆಗಳಿವೆ.

ತರಬೇತಿ ಅವಧಿ: ಈ ಕಾರ್ಯಕ್ರಮದಡಿಯಲ್ಲಿ ಮೂರು ಹಂತಗಳಲ್ಲಿ ತರಬೇತಿ ಕಲ್ಪಿಸಲಾಗುತ್ತದೆ ಹಾಗೂ ಗರಿಷ್ಠ ಮೂರುವರೆ ತಿಂಗಳು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

ಮುಂದಿನ ದಿನಗಳಲ್ಲಿ ಕಾಶ್ಮೀರದ ಶ್ರೀಮಂತ ಪರಂಪರೆಯನ್ನು ಪುನಶ್ಚೇತನಗೊಳಿಸುವ, ಕರಕುಶಲಕರ್ಮಿಗಳಿಗೆ ಬೇಕಾಗುವ ಅವಶ್ಯಕ ಕೌಶಲಗಳನ್ನು ಕಲ್ಪಿಸು ಹಾಗೂ ಮುಂದಿನ ದಿನಗಳಲ್ಲಿ ಉದ್ಯೋಗ ಅವಕಾಶಗಳನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

Karnataka Bank Ltd.

ಕರ್ನಾಟಕ ಬ್ಯಾಂಕ್‌ನಲ್ಲಿ ಆಫೀಸರ್ ಹುದ್ದೆಗಳು

ಕರ್ನಾಟಕ ಬ್ಯಾಂಕ್ ದೇಶದಾದ್ಯಂತ ತನ್ನ ಶಾಖೆಗಳಲ್ಲಿ ಖಾಲಿ ಇರುವ ಪ್ರೊಬೇಷನರಿ ಆಫೀಸರ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಮುಖ್ಯ ಪರೀಕ್ಷೆ ಹಾಗೂ ಸಂದರ್ಶನಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಆ.12 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಆ. 26 ಅರ್ಜಿ ಸಲ್ಲಿಸಲು ಕೊನೆ ದಿನ.

ವಯೋಮಿತಿ: ಗರಿಷ್ಠ 28 ವರ್ಷಗಳು. ಸರ್ಕಾರದ ನಿಯಮದಂತೆ ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ₹800 ಹಾಗೂ ಎಸ್‌ಸಿ/ಎಸ್‌ಟಿ ವರ್ಗದ ಅಭ್ಯರ್ಥಿಗಳಿಗೆ ₹700 ಶುಲ್ಕ ನಿಗದಿಪಡಿಸಲಾಗಿದೆ. ಆನ್‌ಲೈನ್ ಮೂಲಕ ಮಾತ್ರ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ.

ಶೈಕ್ಷಣಿಕ ಅರ್ಹತೆ: ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.
ಸ್ಪೆಷಲ್ ಆಫೀಸರ್ ಗಳ ಹುದ್ದೆಗಳಿಗೆ ಅಗ್ರಿಕಲ್ಚರ್ /ಲಾ ಪದವಿ/ಎಂ ಬಿ ಎ ಪದವಿ ಮಾರ್ಕೆಟಿಂಗ್/ಫೈನಾನ್ಸ್ ನಲ್ಲಿ ಪಡೆದಿರಬೇಕು.
ಪದವಿ/ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದವರು ಮಾತ್ರ ಅರ್ಜಿ ಸಲ್ಲಿಸಬಹುದು.
ಪದವಿಯಲ್ಲಿ ಪಡೆದ ಶೇಕಡವಾರು ಅಂಕಗಳನ್ನು ಅರ್ಜಿಯಲ್ಲಿ ಭರ್ತಿ ಮಾಡಬೇಕಾಗಿರುತ್ತದೆ.

ಮಾದರಿ ಪ್ರಶ್ನೋತ್ತರಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

1. ಸೂರ್ಯನ ಕುರಿತು ಅನ್ವೇಷಣೆ ನಡೆಸಿದ ಪ್ರಮುಖ ಬಾಹ್ಯಾಕಾಶ ನೌಕೆಗಳಾವುವು?
ಎ. ಸೋಲಾರ್ ಆರ್ಬಿಟರ್ ಬಿ. ಪಾರ್ಕರ್ ಸೋಲಾರ್ ಪ್ರೋಬ್
ಸಂಕೇತ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ
ಸಿ. ಮೇಲಿನ ಎರಡೂ ಉತ್ತರಗಳು ಸರಿ ಡಿ. ಮೇಲಿನ ಎರಡೂ ಉತ್ತರಗಳು ತಪ್ಪು
ಉತ್ತರ: ಸಿ

2. ರಾಷ್ಟ್ರೀಯ ಆಯುಷ್ ಅಭಿಯಾನದ ಅನುದಾನದ ಅನುಪಾತವನ್ನು ಗುರುತಿಸಿ
1. ಈಶಾನ್ಯ ರಾಜ್ಯಗಳ ವಿಚಾರದಲ್ಲಿ ಕೇಂದ್ರ ಸರ್ಕಾರ ಶೇ 90ರಷ್ಟು ಅನುದಾನವನ್ನು ಕಲ್ಪಿಸುತ್ತದೆ.
2. ಉತ್ತರಖಾಂಡ ಮತ್ತು ಹಿಮಾಚಲ ಪ್ರದೇಶದ ವಿಚಾರದಲ್ಲಿ ಕೇಂದ್ರ ಸರ್ಕಾರ ಶೇ 70 ರಷ್ಟು ಅನುದಾನವನ್ನು ಕಲ್ಪಿಸುತ್ತದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ
ಎ. 1 ಮಾತ್ರ ಬಿ. 2 ಮಾತ್ರ ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪು.
ಉತ್ತರ: ಎ

3. ಸಾರ್ವಜನಿಕ ಮಾನವ ಸಂಪನ್ಮೂಲ ಮಂಡಳಿಯಲ್ಲಿ ಕೆಳಗಿನ ಯಾವ ಹುದ್ದೆಗಳು ಸ್ಥಾನಮಾನವನ್ನು ಪಡೆದುಕೊಂಡಿವೆ?
1. ಕೇಂದ್ರ ಸಚಿವರು 2. ರಾಜ್ಯಗಳ ಮುಖ್ಯಮಂತ್ರಿಗಳು.
3. ಮಾನವ ಸಂಪನ್ಮೂಲ ಅಭಿವೃದ್ಧಿ ವಲಯದ ಪರಿಣತರು.
4. ವಿವಿಧ ವಲಯಗಳ ಚಿಂತಕರು.
ಕೋಡ್ ಬಳಸಿ ಸರಿಯಾದ ಉತ್ತರ ಗುರುತಿಸಿ
ಎ. 1 ಮಾತ್ರ ಬಿ. 2 ಮಾತ್ರ ಸಿ. 1, 2, 3 ಮತ್ತು 4 ಡಿ. 2 ಮತ್ತು 4
ಉತ್ತರ : ಸಿ

4. ಇತ್ತೀಚೆಗೆ ಇಸ್ರೇಲ್ ಕೆಳಗಿನ ಯಾವ ರಾಷ್ಟ್ರಕ್ಕೆ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಹಸ್ತಾಂತರಿಸಲು ಮುಂದಾಗಿದೆ?
ಎ. ಸ್ವೀಡನ್ ಬಿ. ಸ್ವಿಟ್ಜರ್‌ಲ್ಯಾಂಡ್ ಸಿ. ಫಿನ್‌ಲ್ಯಾಂಡ್ ಡಿ. ಉಕ್ರೇನ್
ಉತ್ತರ : ಸಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.
ಎ. ಸಾಗರ ಅಥವಾ ಸಮುದ್ರದ ಅಂಚಿನ ಹೆಚ್ಚು ಆಳವಿಲ್ಲದ ಭಾಗವನ್ನೇ ಖಂಡಾವರಣ ಪ್ರದೇಶ ಎನ್ನುವರು.
ಬಿ. ಖಂಡಾವರಣ ಪ್ರದೇಶವು ಮೀನುಗಾರಿಕೆ, ಜಲಚರ ಕೃಷಿ, ನೌಕಾಯಾನ ಹಾಗೂ ಕಚ್ಚಾತೈಲಗಳ ಉತ್ಪಾದನೆಗೆ ಪ್ರಾಮುಖ್ಯತೆ ಪಡೆದಿದೆ.
ಸಂಕೇತ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ. ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡು ಹೇಳಿಕೆಗಳೂ ಸರಿ. ಡಿ. ಮೇಲಿನ ಎರಡು ಹೇಳಿಕೆಗಳೂ ತಪ್ಪು.
ಉತ್ತರ: ಸಿ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.
ಎ. ಗ್ರೀಕರ ಕಾಲದಲ್ಲಿ ಪೌರತ್ವ ಎಂಬುದು ಸಂಕುಚಿತ ಅರ್ಥವನ್ನು ಹೊಂದಿತ್ತು.
ಬಿ. ಆಧುನಿಕ ಕಾಲದ ಪೌರತ್ವದ ಪರಿಕಲ್ಪನೆ ವಿಶಾಲಾರ್ಥವನ್ನು ಹೊಂದಿದೆ.
ಸಂಕೇತ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡು ಹೇಳಿಕೆಗಳೂ ಸರಿ.
ಡಿ. ಮೇಲಿನ ಎರಡು ಹೇಳಿಕೆಗಳೂ ತಪ್ಪು.
ಉತ್ತರ: ಸಿ

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ ಕೋಡ್ ಸ್ಕ್ಯಾನ್ ಮಾಡಿ

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ
1,402 ಸ್ಪೆಷಲ್ ಆಫೀಸರ್ಸ್ ಹುದ್ದೆಗಳು

ಆರ್ ಕೆ ಬಾಲಚಂದ್ರ

> ಬೇರೆ ಬೇರೆ ವಿಷಯಗಳಲ್ಲಿ ಪದವಿ ಪಡೆದಿರುವವರಿಗೂ ಬ್ಯಾಂಕ್ ಉದ್ಯೋಗ ಕೈಬೀಸಿ ಕರೆಯುತ್ತಿದೆ. ಇಂಥ ವಿಶೇಷ ಪದವಿಗಳೊಂದಿಗೆ ಕೆಲಸದ ಅನುಭವವಿರುವವನ್ನು ವಿಶೇಷ ಅಧಿಕಾರಿ(ಸ್ಪೆಷಲಿಸ್ಟ್ ಆಫೀಸರ್) ಹುದ್ದೆಗೆ ನೇಮಕ ಮಾಡಿಕೊಳ್ಳುತ್ತಿದೆ

ಒಂದು ಕಾಲದಲ್ಲಿ ಕಾಮರ್ಸ್ ಪದವಿ, ಕೃಷಿ ಪದವಿ ಅಧ್ಯಯನ ಮಾಡಿದವರಿಗೆ ಹೆಚ್ಚಾಗಿ ಬ್ಯಾಂಕ್‌ನಲ್ಲಿ ಉದ್ಯೋಗ ಸಿಗುತ್ತಿತ್ತು. ಆದರೆ, ಈಗ ಇವೆರಡರ ಜೊತೆಗೆ, ಕಾನೂನು, ಎಂಜಿನಿಯರಿಂಗ್, ಮಾರ್ಕೆಟಿಂಗ್, ಮ್ಯಾನೇಜ್‌ಮೆಂಟ್ ಸೇರಿದಂತೆ ಬೇರೆ ಬೇರೆ ವಿಷಯಗಳಲ್ಲಿ ಪದವಿ ಪಡೆದಿರುವವರಿಗೂ ಬ್ಯಾಂಕ್ ಉದ್ಯೋಗ ಕೈಬೀಸಿ ಕರೆಯುತ್ತಿದೆ. ಇಂಥ ವಿಶೇಷ ಪದವಿಗಳೊಂದಿಗೆ ಕೆಲಸದ ಅನುಭವವಿರುವವನ್ನು ವಿಶೇಷ ಅಧಿಕಾರಿ (ಸ್ಪೆಷಲಿಸ್ಟ್ ಆಫೀಸರ್) ಹುದ್ದೆಗೆ ನೇಮಕ ಮಾಡಿಕೊಳ್ಳುತ್ತಿದೆ.

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸೋನಲ್ ಸೆಲೆಕ್ಷನ್- ಐಬಿಪಿಎಸ್) ದೇಶದ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಇಂಥ ಸ್ಪೆಷಲ್ ಆಫೀಸರ್ಸ್‌ಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಗಾಗ್ಗೆ ನೇಮಕ ಮಾಡಿಕೊಳ್ಳುತ್ತಿರುತ್ತದೆ. ಅದರಂತೆ ಈ ವರ್ಷವೂ ದೇಶದ ನಾಲ್ಕು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ 1,402 ಸ್ಪೆಷಲ್ ಆಫೀಸರ್ಸ್ ನೇಮಕ ಮಾಡಿಕೊಳ್ಳುವುದಾಗಿ ಅಧಿಸೂಚನೆ ಹೊರಡಿಸಿದೆ.

ಆಗಸ್ಟ್ 1 ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದೆ. ಇದೇ 21 ಅರ್ಜಿ ಸಲ್ಲಿಕೆಗೆ ಕೊನೆ ದಿನ. ಆನ್‌ಲೈನ್ ಮೂಲಕ (https://www.ibps.in)ಅರ್ಜಿ ಸಲ್ಲಿಸಬೇಕು. ಎಲ್ಲ ಹುದ್ದೆಗಳು ಸ್ಕೇಲ್ 1 ಅಧಿಕಾರಿ ಹಂತದ ಹುದ್ದೆಗಳಾಗಿವೆ.

ಹುದ್ದೆ	ಸಂಖ್ಯೆ
ಐಟಿ ಆಫೀಸರ್	120
ಅಗ್ರಿಕಲ್ಚರಲ್ ಫೀಲ್ಡ್ ಆಫೀಸರ್	500
ರಾಜ್‌ಭಾಷಾ ಅಧಿಕಾರಿ	41
ಲಾ ಆಫೀಸರ್	10
ಎಚ್‌ಆರ್/ಪರ್ಸನಲ್ ಆಫೀಸರ್	31
ಮಾರ್ಕೆಟಿಂಗ್ ಆಫೀಸರ್	700
ಒಟ್ಟು	1,402

ಯಾವ್ಯಾವ ಬ್ಯಾಂಕ್ ಗಳಲ್ಲಿ ಹುದ್ದೆ?
- ಬ್ಯಾಂಕ್ ಆಫ್ ಇಂಡಿಯಾ
- ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
- ಇಂಡಿಯನ್ ಓವರಸೀಸ್ ಬ್ಯಾಂಕ್
- ಪಂಜಾಬ್ ನ್ಯಾಷನಲ್ ಬ್ಯಾಂಕ್

ಅರ್ಜಿ ಶುಲ್ಕ: ಸಾಮಾನ್ಯ, ಒಬಿಸಿ ಹಾಗೂ ಇತರೆ ಅಭ್ಯರ್ಥಿಗಳಿಗೆ: ₹850. ಪ.ಜಾ, ಪ.ಪಂ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹಾಗೂ ಮಾಜಿ ಯೋಧರಿಗೆ ₹175. ನೋಂದಣಿ ನಂತರ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಶುಲ್ಕ ಪಾವತಿಸಬೇಕು.

ವಯೋಮಿತಿ: ಕನಿಷ್ಠ 20 ವರ್ಷಗಳು, ಗರಿಷ್ಠ 30 ವರ್ಷಗಳು(01.08.2023 ಕ್ಕೆ ಅನ್ವಯಿಸಿದಂತೆ). ಸರ್ಕಾರದ ನಿಯಮಾನುಸಾರ ಎಸ್.ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳಷ್ಟು ವಯೋಮಿತಿ ಸಡಿಲಿಕೆ ಮಾಡಲಾಗಿದೆ.

ನೇಮಕಾತಿ ಪ್ರಕ್ರಿಯೆ: ಮೂರು ಹಂತಗಳಲ್ಲಿ ನೇಮಕಾತಿ ನಡೆಯಲಿದೆ. ಈ ಪ್ರಕ್ರಿಯೆಯಲ್ಲಿ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಇರಲಿದೆ. ಎರಡೂ ಲಿಖಿತ ಪರೀಕ್ಷೆಗಳೂ ಆನ್‌ಲೈನ್ ಮೂಲಕ ನಡೆಯಲಿವೆ. ಪೂರ್ವಭಾವಿ ಪರೀಕ್ಷೆಯಲ್ಲಿ ಆಯ್ಕೆಯಾದವರು, ಮುಖ್ಯಪರೀಕ್ಷೆಗೆ ಹಾಜರಾಗಬೇಕು. ಮುಖ್ಯ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ತಪ್ಪು ಉತ್ತರಗಳಿಗೆ ಋಣಾತ್ಮಕ ಮೌಲ್ಯಮಾಪನವಿದೆ. ಪರೀಕ್ಷೆಗಳು ಇಂಗ್ಲಿಷ್/ ಹಿಂದಿ ಭಾಷೆಯಲ್ಲಿರಲಿದೆ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಒಬ್ಬ ಅಭ್ಯರ್ಥಿ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ವೆಬ್ ಲಿಂಕ್: https://ibpsonline.ibps.in/crpsp13jun23/ ಹಾಗೂ ಅಧಿಸೂಚನೆಗೆ:www.ibps.in

ಪರೀಕ್ಷಾ ಪ್ರಕ್ರಿಯೆ: ಮೊದಲನೇ ಹಂತ– ಪೂರ್ವಭಾವಿ ಪರೀಕ್ಷೆ. ಇದು ಈ ವರ್ಷದ ಡಿಸೆಂಬರ್ 30/31ರಂದು ನಡೆಯಲಿದೆ. ಎರಡನೇ ಹಂತ– ಮುಖ್ಯ ಪರೀಕ್ಷೆ. ಇದು 2024ರ ಜನವರಿ 28 ರಂದು ನಿಗದಿಯಾಗಿದೆ. ಮೂರನೇ ಹಂತ– ಸಂದರ್ಶನ– 2024ರ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ನಡೆಯುವ ಸಾಧ್ಯತೆ ಇದೆ.



ಪರೀಕ್ಷಾ ಕೇಂದ್ರಗಳು:

ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್): ಬೆಂಗಳೂರು,ಬೆಳಗಾವಿ, ಬೀದರ್, ಕಲಬುರಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿ.

ಮುಖ್ಯ ಪರೀಕ್ಷೆ: ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ

ಶೈಕ್ಷಣಿಕ ಅರ್ಹತೆಗಳೇನು?

1) ಐಟಿ ಆಫೀಸರ್ ಹುದ್ದೆಗೆ: ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ವಿಷಯಕ್ಕೆ ಸಂಬಂಧಿಸಿದ ನಾಲ್ಕು ವರ್ಷಗಳ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರಬೇಕು ಅಥವಾ ಸ್ನಾತಕೋತ್ತರ ಪದವಿ ಪಡೆದಿರಬೇಕು ಅಥವಾ ಪದವಿ ಜೊತೆಯಲ್ಲಿ DOEACC "B" ಲೆವೆಲ್ ಪರೀಕ್ಷೆ ಪಾಸಾಗಿರಬೇಕು.

2) ಅಗ್ರಿಕಲ್ಚರಲ್ ಫೀಲ್ಡ್ ಆಫೀಸರ್: ಕೃಷಿ/ ತೋಟಗಾರಿಕೆ / ಪಶುಸಂಗೋಪನೆ,/ ಪಶು ವೈದ್ಯಕೀಯ ವಿಜ್ಞಾನ/ ಡೇರಿ ಸೈನ್ಸ್/ ಅಗ್ರಿ ಎಂಜಿನಿಯರಿಂಗ್/ ಮೀನುಗಾರಿಕೆ ವಿಜ್ಞಾನ/ ಮೀನು ಸಾಕಣೆ, ಮಾರ್ಕೆಟಿಂಗ್ ಮತ್ತು ಸಹಕಾರ/ ಸಹಕಾರ ಮತ್ತು ಬ್ಯಾಂಕಿಂಗ್/ ಕೃಷಿ-ಅರಣ್ಯ/ಅರಣ್ಯ/ ಕೃಷಿ ಜೈವಿಕ ತಂತ್ರಜ್ಞಾನ/ ಆಹಾರ ವಿಜ್ಞಾನ/ ಕೃಷಿ ವ್ಯವಹಾರ ನಿರ್ವಹಣೆ/ ಆಹಾರ ತಂತ್ರಜ್ಞಾನ/ ಡೇರಿ ತಂತ್ರಜ್ಞಾನ / ಕೃಷಿ ಎಂಜಿನಿಯರಿಂಗ್/ ರೇಷ್ಮೆ ಕೃಷಿ/ ಮೀನುಗಾರಿಕೆ ಎಂಜಿನಿಯರಿಂಗ್ ನಾಲ್ಕು ವರ್ಷಗಳ ಪದವಿ ಪಡೆದಿರಬೇಕು.

3) ಲಾ ಆಫೀಸರ್: ಕಾನೂನು ವಿಷಯದಲ್ಲಿ ಪದವಿ ಪಡೆದಿರಬೇಕು ಮತ್ತು ಬಾರ್ ಕೌನ್ಸಿಲ್‌ನ ಸದಸ್ಯತ್ವ ಪಡೆದಿರಬೇಕು.

4) ರಾಜ್ಯ ಭಾಷಾ ಅಧಿಕಾರಿ ಹುದ್ದೆಗೆ: ಹಿಂದಿಯಲ್ಲಿ ಸ್ನಾತಕೋತ್ತರ ಪದವಿ, ಜೊತೆಗೆ - ಪದವಿಯಲ್ಲಿ ಇಂಗ್ಲಿಷ್ ಅನ್ನು ಒಂದು ವಿಷಯವಾಗಿ ಅಭ್ಯಾಸ ಮಾಡಿರಬೇಕು ಅಥವಾ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಜೊತೆಗೆ ಪದವಿಯಲ್ಲಿ ಇಂಗ್ಲಿಷ್ ಮತ್ತು ಹಿಂದಿಯನ್ನು ವಿಷಯವಾಗಿ ಅಭ್ಯಾಸ ಮಾಡಿರಬೇಕು.

5) ಎಚ್ ಆರ್ / ಪರ್ಸನಲ್ ಆಫೀಸರ್: ಪದವೀಧರರಾಗಿರಬೇಕು ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್/ಇಂಡಸ್ಟ್ರಿಯಲ್ ರಿಲೇಷನ್ಸ್ ಎಚ್‌ಆರ್/ ಎಚ್‌ಆರ್‌ಡಿ/ ಸೋಷಿಯಲ್ ವರ್ಕ್/ ಕಾರ್ಮಿಕ ಕಾನೂನು ಇದ್ಯಾವುದಾದರೂ ವಿಷಯದಲ್ಲಿ ಪೂರ್ಣಾವಧಿಯ ಸ್ನಾತಕೋತ್ತರ ಪದವಿ ಅಥವಾ ಪೂರ್ಣಾವಧಿಯ ಸ್ನಾತಕೋತ್ತರ ಅಥವಾ ಡಿಪ್ಲೊಮಾ ಮಾಡಿರಬೇಕು.

6) ಮಾರ್ಕೆಟಿಂಗ್ ಆಫೀಸರ್: ಪದವೀಧರರಾಗಿರಬೇಕು ಮತ್ತು ಎರಡು ವರ್ಷಗಳ ಪೂರ್ಣಾವಧಿ ಎಂಎಂಎಸ್ (ಮಾರ್ಕೆಟಿಂಗ್) ಎಂಬಿಎ (ಮಾರ್ಕೆಟಿಂಗ್)/ PGDBA /PGDBM/PGPM/ PGDM ಮಾರ್ಕೆಟಿಂಗ್‌ನಲ್ಲಿ ಸ್ಪೆಷಲೈಸೇಷನ್ ಮಾಡಿರಬೇಕು.

ಗಮನಿಸಿ: IT ಆಫೀಸರ್ ಸ್ಕೇಲ್-I ಹೊರತುಪಡಿಸಿ ಬೇರೆ ಹುದ್ದೆಗಳಿಗೆ ಅಭ್ಯರ್ಥಿಯು ಕಂಪ್ಯೂಟರ್ ನಿರ್ವಹಣಾ ಜ್ಞಾನ ಹೊಂದಿರುವುದು ಕಡ್ಡಾಯ. ಹೀಗಾಗಿ ಕಂಪ್ಯೂಟರ್ ಕಲಿಕೆಯ ಬಗ್ಗೆ ದೃಢೀಕರಣ ಪತ್ರವನ್ನು ಕೂಡ ಅಭ್ಯರ್ಥಿಯು ಹೊಂದಿರಬೇಕಾಗುತ್ತದೆ.

(ಮುಂದಿನ ವಾರ: ಪರೀಕ್ಷೆಗಳ ವಿವರ ಮತ್ತು ಆಯ್ಕೆ ಪ್ರಕ್ರಿಯೆ)

(ಲೇಖಕರು ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಆಫೀಸರ್ಸ್ ಆಯ್ಕೆಗೆ ಮೂರು ಹಂತಗಳ ಪರೀಕ್ಷೆ

ಆರ್ಕೆಬಿ

ದೇಶದ ಹನ್ನೊಂದು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ 3,049 ಪ್ರೊಬೇಷನರಿ ಆಫೀಸರ್ಸ್‌ಗಳ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಆಗಸ್ಟ್ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಆ. 21 ಅರ್ಜಿ ಸಲ್ಲಿಕೆ ಕೊನೆ ದಿನವಾಗಿದೆ.

ಈ ನೇಮಕಾತಿಗೆ ಸಂಬಂಧಿಸಿದಂತೆ ಕಳೆದ ಸಂಚಿಕೆಯಲ್ಲಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಮತ್ತು ಶೈಕ್ಷಣಿಕ ಅರ್ಹತೆ ಮತ್ತಿತರ ವಿಷಯಗಳ ಕುರಿತು ವಿವರಣೆ ನೀಡಲಾಗಿತ್ತು. ಈ ಸಂಚಿಕೆಯಲ್ಲಿ ಪರೀಕ್ಷೆಯ ನಿಯಮಗಳು ಮತ್ತು ಪರೀಕ್ಷೆಗಿರುವ ವಿಷಯಗಳ ಕುರಿತು ವಿವರವನ್ನು ನೀಡಲಾಗಿದೆ.

ನೇಮಕಾತಿ ಪ್ರಕ್ರಿಯೆ: ಮೊದಲ ಹಂತದಲ್ಲಿ ಪೂರ್ವ ಭಾವಿ ಪರೀಕ್ಷೆ (ಪ್ರಿಲಿಮ್ಸ್) ನಡೆಯಲಿದೆ. ಬೆಳಗಾವಿ, ಬೆಂಗಳೂರು, ಬೀದರ್, ಚಿಕ್ಕಬಳ್ಳಾಪುರ ದಾವಣಗೆರೆ, ದಾರವಾಡ ಕಲಬುರಗಿ, ಹಾಸನ, ಹುಬ್ಬಳ್ಳಿ, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ಪೂರ್ವಭಾವಿ ಪರೀಕ್ಷಾ ಕೇಂದ್ರಗಳಿರಲಿವೆ.

ಪರೀಕ್ಷೆ ವಿವರ : ಪೂರ್ವಭಾವಿ ಪರೀಕ್ಷೆ ಒಂದು ಗಂಟೆ ಅವಧಿಯದ್ದು (ಪ್ರತಿ ಪತ್ರಿಕೆಗೂ 20 ನಿಮಿಷಗಳು). 100 ಅಂಕಗಳಿರುತ್ತವೆ (ಅಂದರೆ ಪ್ರತಿ ಪ್ರಶ್ನೆಗೆ ಒಂದೊಂದು ಅಂಕ ನಿಗದಿ) ಇದರಲ್ಲಿ ಇಂಗ್ಲಿಷ್ ಭಾಷಾ ಪತ್ರಿಕೆಗೆ 30, ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್ ಗೆ 35 ಹಾಗೂ ರೀಸನಿಂಗ್ ಎಬಿಲಿಟಿಯ 35 ಪ್ರಶ್ನೆಗಳಿರಲಿವೆ. ಪ್ರತಿ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಗಳಿಸಬೇಕೆಂಬ ನಿಯಮವಿದೆ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ಬೆಂಗಳೂರು, ಹುಬ್ಬಳ್ಳಿ-ದಾರವಾಡ ಮತ್ತು ಮಂಗಳೂರಿನಲ್ಲಿ ಮಾತ್ರ ನಡೆಯಲಿದೆ.

ಇಂಗ್ಲೀಷ್ ಭಾಷೆ ಒಂದನ್ನು ಹೊರತುಪಡಿಸಿ ಮತ್ತೆಲ್ಲಾ ಪ್ರಶ್ನೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತವೆ. ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ತಪ್ಪು ಉತ್ತರ ಗುರುತಿಸಿದಲ್ಲಿ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯದ ಪ್ರತಿ ಪ್ರಶ್ನೆಗೆ ನಿಗದಿಪಡಿಸಿದ ಅಂಕದ 0.25 ಅಂಕವನ್ನು ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ. ಪ್ರಶ್ನೆಗೆ ಉತ್ತರ ಗುರುತಿಸಲಾಗಿಲ್ಲದಿದ್ದರೆ ಅಂಕ ಕಳೆಯುವುದಿಲ್ಲ.

ಮುಖ್ಯ ಪರೀಕ್ಷೆ ವಿವರಗಳು

ಪತ್ರಿಕೆ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ
I	ರೀಸನಿಂಗ್ ಮತ್ತು ಕಂಪ್ಯೂಟರ್ ಆಪ್ಟಿಟ್ಯೂಡ್	40	60	60
II	ಜನರಲ್/ಎಕಾನಮಿ/ ಬ್ಯಾಂಕಿಂಗ್ ಅವೇರ್‌ನೆಸ್	40	40	35
III	ಇಂಗ್ಲಿಷ್ ಭಾಷೆ	35	40	40
IV	ಡೇಟಾ ಅನಾಲಿಸಿಸ್ ಆ್ಯಂಡ್ ಇಂಟರ್‌ಪ್ರಿಟೇಷನ್	35	60	45
	ಒಟ್ಟು	155	200	180

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನೇಮಕಾತಿ

ಮುಖ್ಯ ಪರೀಕ್ಷೆ ಮುಗಿಯುತ್ತಿದ್ದಂತೆ ಇಂಗ್ಲಿಷ್ ಭಾಷೆಗೆ (Letter Writing & Essay- with two questions)ಸಂಬಂಧಿಸಿದಂತೆ 25 ಅಂಕಗಳಿಗೆ ಡಿಸ್ಕ್ರಿಟಿವ್ ಟೆಸ್ಟ್ ನಡೆಸಲಾಗುತ್ತದೆ. ಅವಧಿ 30 ನಿಮಿಷಗಳು. ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿಯೇ ಉತ್ತರ ಬರೆಯಬೇಕು.

ಇಂಗ್ಲಿಷ್ ಭಾಷೆಯ ವಿವರಣಾತ್ಮಕ ಪೇಪರ್ (ಪತ್ರ ಬರವಣಿಗೆ ಮತ್ತು ಪ್ರಬಂಧ) ಅನ್ನು ಸ್ವಯಂಚಾಲಿತ ಸ್ಕೋರಿಂಗ್ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ. ಬರವಣಿಗೆಯ ಪ್ರಾವೀಣ್ಯಕ್ಕೆ ಸಂಬಂಧಿಸಿದಂತೆ ವೈಶಿಷ್ಟ್ಯಗಳನ್ನು ಗುರುತಿಸುವುದು ಇದರ ಕಾರ್ಯವಿಧಾನವಾಗಿದೆ. ಆಂಗ್ಲ ಭಾಷೆಯಲ್ಲಿ ಹಾಗೂ ಬರವಣಿಗೆಯಲ್ಲಿ ಪರೀಕ್ಷೆ ಬರೆಯುವವರ ಪ್ರಾವೀಣ್ಯವನ್ನು ವಸ್ತುನಿಷ್ಠ ರೀತಿಯಲ್ಲಿ ಮೌಲ್ಯಮಾಪನ ಮಾಡುವ ವಿಶಿಷ್ಟ ವಿಧಾನವಾಗಿದೆ.

ನೆನಪಿಡಿ: ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಇಲ್ಲ. ಈ ಎರಡೂ ಪರೀಕ್ಷೆಗಳಲ್ಲಿ ಬ್ಯಾಂಕ್ ನಿಗದಿಪಡಿಸಿದಷ್ಟು ಅಂಕ ಪಡೆದವರು ಮಾತ್ರ ಮೂರನೇ ಹಂತ ಸಂದರ್ಶನಕ್ಕೆ ಅರ್ಹರಾಗುತ್ತಾರೆ.

ಆಯ್ಕೆ ಪಟ್ಟಿ: ಅಂತಿಮ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳು ಹಂತ-II ಮತ್ತು ಹಂತ-III ಎರಡರಲ್ಲೂ ಪ್ರತ್ಯೇಕವಾಗಿ ಅರ್ಹತೆ ಪಡೆದಿರಬೇಕು. ಸಂದರ್ಶನಕ್ಕೆ ನಿಗದಿ ಪಡಿಸಲಾದ ಒಟ್ಟು ಅಂಕಗಳು 100. ಸಂದರ್ಶನದಲ್ಲಿ ಕನಿಷ್ಠ ಅರ್ಹತಾ ಅಂಕಗಳು ಶೇ 40 (SC/ST/OBC/PWBD ಅಭ್ಯರ್ಥಿಗಳಿಗೆ ಶೇ 35). ಪರೀಕ್ಷೆ ಕುರಿತು ಇನ್ನಷ್ಟು ವಿವರಗಳಿಗಾಗಿ www.ibps.in ಮತ್ತು https://ibpsonline.ibps.in/crppo13jun23/ ಜಾಲ ತಾಣ ನೋಡಿ. (ಮುಗಿಯಿತು)

ಅರ್ಜಿ ಸಲ್ಲಿಕೆ ವಿವರವಿರುವ ಹಿಂದಿನ ಸಂಚಿಕೆ ಲೇಖನಕ್ಕಾಗಿ ಕೋಡ್ ಸ್ಕ್ಯಾನ್ ಮಾಡಿ

ಮಾಲಿನ್ಯ ನಿಯಂತ್ರಣ ಮಂಡಳಿ: ₹19.92 ಕೋಟಿ ಗುತ್ತಿಗೆಯಲ್ಲಿ ಪಕ್ಷಪಾತ

ಅಧ್ಯಕ್ಷರಿಂದ ಕಾಯ್ದೆ ಉಲ್ಲಂಘನೆ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು ಜಾಗೃತಿ ಕಾರ್ಯಕ್ರಮಗಳ ಕಾರ್ಯಾದೇಶ ನೀಡುವಲ್ಲಿ ಕಾಯ್ದೆಗಳನ್ನು ಉಲ್ಲಂಘಿಸಿದ್ದಾರೆ ಎಂದು ರಾಜ್ಯ ಸರ್ಕಾರ ನೇಮಿಸಿದ್ದ ತನಿಖಾ ಸಮಿತಿ ವರದಿಯಲ್ಲಿ ತಿಳಿಸಲಾಗಿದೆ.

ಜಲ ಮಾಲಿನ್ಯ ಕಾಯ್ದೆ 1974 ಮತ್ತು ವಾಯು ಮಾಲಿನ್ಯ ಕಾಯ್ದೆ 1981ರ ಪ್ರಕಾರ ಮಂಡಳಿ ಅಧ್ಯಕ್ಷರಿಗೆ ಯಾವುದೇ ಸಮಿತಿಯನ್ನು ರಚಿಸುವ ಅಧಿಕಾರ ಇಲ್ಲ. ಅಧ್ಯಕ್ಷ ಶಾಂತ್ ತಮ್ಮಯ್ಯ ಅದನ್ನು ಉಲ್ಲಂಘಿಸಿ ಏಕ ಸಮಿತಿಯನ್ನು ರಚಿಸಿದ್ದಾರೆ ಎಂದು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಹೆಚ್ಚುವರಿ ನಿರ್ದೇಶಕ ಮಹದೇವ ಅವರು ಸರ್ಕಾರ ರಚಿಸಿರುವ ಸಮಿತಿಯ ತನಿಖಾಧಿಕಾರಿಯಾಗಿದ್ದಾರೆ. ಯೋಜಿತ ಸಂಸ್ಥೆಗಳಿಗೆ ಗುತ್ತಿಗೆ ನೀಡುವ ಉದ್ದೇಶದಿಂದಲೇ ಏಕ ಮೂಲ ಸಂಸ್ಥೆಯನ್ನು ಆಯ್ಕೆ ಮಾಡುವ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮಂಡಳಿ ಅಧ್ಯಕ್ಷರು ಸ್ವಯಂ ಘೋಷಿತವಾಗಿ ಏಕ ಮೂಲ ಸಂಸ್ಥೆಯ ಅಧ್ಯಕ್ಷರನ್ನು ನೇಮಕ ಮಾಡಿಕೊಂಡಿದ್ದಾರೆ. ಪಾರದರ್ಶಕ ಕಾಯ್ದೆ 1999 -4(ಬಿ) ಅಡಿಯಲ್ಲಿ ಮೂರು ತಜ್ಞರ ಸಮಿತಿ ರಚಿಸಬೇಕು. ಮಂಡಳಿಯಲ್ಲಿರುವ ಇದೇ ವಿಷಯದ ತಜ್ಞರೇ ಸದಸ್ಯರಾಗಬೇಕು.

ಕಚೇರಿ ಜ್ಞಾಪನಾ ಪತ್ರವನ್ನು ಅಧ್ಯಕ್ಷರೇ ಹೊರಡಿಸಿ, ಅವರೇ ಏಕ ಸಂಸ್ಥೆಯನ್ನು ರಚಿಸಿದ್ದಾರೆ. ಐದು ಸಂಸ್ಥೆಗಳಿಗೆ ಯೋಜಿತ ಜಾಹೀರಾತು ಕಾರ್ಯಗಳನ್ನು ನೀಡಲು ಅನುಮೋದನೆ ನೀಡುವ ಉದ್ದೇಶದಿಂದಲೇ ಈ ಸಮಿತಿ ರಚಿಸಲಾಗಿದೆ. ₹19.92 ಕೋಟಿ ಮೌಲ್ಯದ ಜಾಹೀರಾತು ನೀಡುವ ಬಗ್ಗೆ ಐದು ಸಂಸ್ಥೆಗಳ ಪ್ರಸ್ತಾವನೆ ಪರಿಗಣಿಸಿ, ನಾಲ್ಕು ಸಂಸ್ಥೆಗಳನ್ನು ಏಕ ಮೂಲ ಸಂಸ್ಥೆ ಎಂದು ಪರಿಗಣಿಸಲಾಗಿದೆ.

ರಾಜ್ಯ ಸರ್ಕಾರದ 1976 ನಿಯಮಗಳ ಸೆಕ್ಷನ್ 15(ಇ) ಪ್ರಕಾರ, ಪ್ರತಿ ಪ್ರಕರಣದಲ್ಲಿ ₹25 ಸಾವಿರ ಮೌಲ್ಯದ ಟೆಂಡರ್ ಗಳನ್ನು ಮಾತ್ರ ಅಧಕ್ಷರು ಅನುಮೋದಿಸಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ. 35 ದಿನಗಳ ಅಲ್ಪಾವಧಿ ಟೆಂಡರ್ ಆಹ್ವಾನಿಸಬಹುದಿತ್ತು. ಅದನ್ನು ಪರಿಗಣಿಸದೆ ಯೋಜಿತ ವ್ಯಕ್ತಿಗಳಿಗೆ ಗುತ್ತಿಗೆ ನೀಡುವ ಉದ್ದೇಶದಿಂದ, ಸ್ಪರ್ಧಾತ್ಮಕತೆ ನಿಯಂತ್ರಿಸುವ ಉದ್ದೇಶದಿಂದ ಪಕ್ಷಪಾತ ಎಸಗಿರುವುದು ಕಂಡುಬಂದಿದೆ.

ಪರಿಸರ ಜಾಗೃತಿ ಉಂಟು ಮಾಡುವ ಕಾರ್ಯಕ್ರಮಗಳು ಹೆಚ್ಚು ಜನರನ್ನು ತಲುಪಿಸುವ ಮುನ್ನೋಟವಿಲ್ಲದೆ, ಯೋಜಿತ ಸಂಸ್ಥೆಗಳಿಗೆ ಗುತ್ತಿಗೆಯನ್ನು ನೀಡುವ ಉದ್ದೇಶದಿಂದಲೇ ಏಕ ಮೂಲ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ಎಂದು ವರದಿ ತಿಳಿಸಿದೆ.

ಇದರ ಜೊತೆಗೆ, ಮಹದೇವ ಅವರು ಆ.16 ರಂದು ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಅವರಿಗೆ ಬರೆದಿರುವ ಪತ್ರದಲ್ಲಿ, ₹24.60 ಕೋಟಿ ಆಯವ್ಯಯದಲ್ಲಿ ಮರಿ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಪ್ರಸ್ತಾವನೆಯನ್ನೂ ಮಂಡಳಿಯ ಸಭೆಗೆ ಸಲ್ಲಿಸಲಾಗಿದೆ. ಈ ಲೆಕ್ಕ ಶೀರ್ಷಿಕೆ ಗಳಿ ಮರು ಹೊಂದಾಣಿಕೆಗೆ ಸರ್ಕಾರದಿಂದ ಪಡೆದಿರುವ ಅಧಿಕಾರ ಪ್ರತ್ಯಾಯೋಜನೆಯ ಆದೇಶ ಪ್ರತಿಗಳನ್ನು ಒದಗಿಸಲು ಸೂಚಿಸಿದ್ದಾರೆ.

> ಸೈನ್‌ಪೋಸ್ಟ್‌ಗೆ ದಿ:14–02–2023, ಸಾಯಿ ದಿ:14–02–2023) ಅಂದಾಜು 35 ದಿನಗಳ ಅವಧಿಯಲ್ಲಿ ಅಲ್ಪಾವಧಿ ಟೆಂಡರ್‌ನ್ನು ಅಹ್ವಾನಿಸಿ ಟೆಂಡರ್ ಪ್ರಕಿಯೆಯನ್ನು ಅಖೈರುಗೊಳಿಸಬಹುದಾಗಿತ್ತು. ಆದರೆ ಇದನ್ನು ಪರಿಗಣಿಸದೆ ಯೋಜಿತ ವ್ಯಕ್ತಿಗಳಿಗೆ ಗುತ್ತಿಗೆ ನೀಡುವ ಉದ್ದೇಶದಿಂದಲೇ, ಸ್ಪರ್ಧಾತ್ಮಕತೆಯನ್ನು ನಿಯಂತ್ರಿಸುವ ಉದ್ದೇಶದಿಂದ, ಪಕ್ಷಪಾತ ಎಸಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ವಿವರಣೆ ಅಗತ್ಯವಿದೆ.

ಪ್ರಕರಣದ ಹಿನ್ನೆಲೆ

ಮಂಡಳಿಯ ಅಧ್ಯಕ್ಷ ಶಾಂತ್ ತಿಮ್ಮಯ್ಯ ನೇತೃತ್ವದ 'ಸಿಂಗಲ್ ಸೋರ್ಸ್ ಕಮಿಟಿ' ಸಭೆಯಲ್ಲಿ ₹17.85 ಕೋಟಿ ಮೌಲ್ಯದ ಜಾಗೃತಿ ಕಾರ್ಯಕ್ರಮಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ -1999 ಅನ್ನು (ಕೆಟಿಪಿಪಿ) ಉಲ್ಲಂಘಿಸಿ, ಈ ಗುತ್ತಿಗೆಯನ್ನು ನಿರ್ದಿಷ್ಟ ಏಜೆನ್ಸಿಗಳಿಗೆ ನೀಡಲು ಸಮ್ಮತಿ ನೀಡಲಾಗಿತ್ತು.

ಇದೆಲ್ಲ, ಕೆಟಿಪಿಪಿ ಕಾಯ್ದೆಯ ಉಲ್ಲಂಘನೆಯಾಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿದ್ದ ಸೂರಿ ಪಾಯಲ ಅವರೇ ಸರ್ಕಾರಕ್ಕೆ ಪತ್ರ ಬರೆದಿದ್ದರು. ಪರಿಸರ ಹಾಗೂ ಜೀವಪರಿಸ್ಥಿತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಜುಲೈ 3ರಂದು ಪತ್ರ ಬರೆದು, 'ಸಿಂಗಲ್ ಸೋರ್ಸ್ ಕಮಿಟಿ' ಸಭೆಯಲ್ಲಿ ಅನುಮೋದನೆ ನೀಡಲಾಗಿರುವ ಎಲ್ಲ ಮಾಹಿತಿಯನ್ನೂ ನೀಡಿದ್ದರು. ಇದನ್ನು ಆಧರಿಸಿ ಸರ್ಕಾರ ತನಿಖಾ ಸಮಿತಿ ರಚಿಸಿತ್ತು.

ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ಜುಲೈ 17 ರಂದು 'ಮಾಲಿನ್ಯ ನಿಯಂತ್ರಣ ಮಂಡಳಿ - ಸರ್ಕಾರದ ಮಧ್ಯೆ ಸಂಘರ್ಷ' ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು.

ವಿಧಾನಸೌಧ: ಹೋರಾಟಗಾರರ ವಶ

ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ಗೃಹ ಸಚಿವರ ನಿವಾಸಕ್ಕೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ನಿಂದನೆ ಪ್ರಕರಣದಲ್ಲಿ ನಟ ಉಪೇಂದ್ರ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿ, ಹೋರಾಟಗಾರ ಬಿ.ಆರ್.ಭಾಸ್ಕರ್ ಪ್ರಸಾದ್ ಹಾಗೂ ಹರಿರಾಮ್ ಅವರ ನೇತೃತ್ವದಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ತೆರಳುತ್ತಿದ್ದ ಹೋರಾಟಗಾರರನ್ನು ಬುಧವಾರ ರಾತ್ರಿ ಪೊಲೀಸರು ವಶಕ್ಕೆ ಪಡೆದುಕೊಂಡರು.

ಹೋರಾಟಗಾರ ಬೈರಪ್ಪ ಹರೀಶ್ ಕುಮಾರ್, ಸುನಿಲ್, ನವೀನ್ ಸೇರಿದಂತೆ ಹಲವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ವಿಧಾನಸೌಧದ ಎದುರು ವಶಕ್ಕೆ ಪಡೆದರು. ಇದರಿಂದ ಕೆರಳಿದ ಹೋರಾಟಗಾರರು ಪೊಲೀಸರು ವಿರುದ್ಧ ಆಕ್ರೋಶ ಹೊರಹಾಕಿದರು.

'ತಳ ಸಮುದಾಯಗಳ ಬಗ್ಗೆ ನಟ ಉಪೇಂದ್ರ ಅವರು ಕೀಳಾಗಿ ಮಾತನಾಡಿದ್ದಾರೆ. ಅವರ ಹೇಳಿಕೆ ಖಂಡನಾರ್ಹ. ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಹೋರಾಟ ನಡೆಸಿದರೆ, ಪೊಲೀಸರು ಹೋರಾಟಗಾರರ ಮೇಲೆಯೇ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ಭಾಸ್ಕರ್ ಪ್ರಸಾದ್ ದೂರಿದರು.

'ಉಪೇಂದ್ರ ಹೇಳಿಕೆ ನೀಡಿ ಸಾಕಷ್ಟು ದಿನ ಕಳೆದಿದ್ದರೂ ಅವರನ್ನು ಪೊಲೀಸರು ಬಂಧಿಸಿಲ್ಲ. ಗೃಹ ಸಚಿವರ ಮನೆ ಎದುರು ಧರಣಿ ಮಾಡಲು ಮುಂದಾಗಿದ್ದೆವು. ಆದರೆ, ಪೊಲೀಸರು ನಮ್ಮನ್ನು ವಿಧಾನಸೌಧದ ಎದುರೇ ತಡೆದರು' ಎಂದು ಹೋರಾಟಗಾರರು ತಿಳಿಸಿದರು.

ಪೊಲೀಸ್ ಆಯುಕ್ತರಿಗೆ ಮನವಿ: 'ಉಪೇಂದ್ರ ಅವರ ವಿರುದ್ಧ ನೀಡಿರುವ ದೂರನ್ನು ವಾಪಸ್ ಪಡೆಯಬೇಕೆಂದು ಬೆದರಿಕೆ ಹಾಕಲಾಗುತ್ತಿದೆ. ನನಗೆ ರಕ್ಷಣೆ ನೀಡಬೇಕು' ಎಂದು ಕೋರಿ ಗೋಪಾಲ್ ಗಿರಿಯಪ್ಪ ಅವರು ಪೊಲೀಸ್ ಕಮಿಷನರ್‌ಗೆ ಮನವಿ ಸಲ್ಲಿಸಿದ್ದಾರೆ. ಇವರು ಉಪೇಂದ್ರ ವಿರುದ್ಧ ಸಿಕೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಸಮ್ಮುಖದಲ್ಲೇ ದೂರು ನೀಡಿದ್ದೆವು. ಉಪೇಂದ್ರ ಅವರ ಅಭಿಮಾನಿಗಳು ಸಾಮಾಜಿಕ ಜಾಲತಾಣ ಮತ್ತು ಮೊಬೈಲ್‌ನಲ್ಲಿ ಕರೆ ಮಾಡಿ ದೂರು ವಾಪಸ್ ಪಡೆಯುವಂತೆ ಬೆದರಿಕೆ ಹಾಕುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ದೇಶದಲ್ಲೇ ಪ್ರಥಮ ಕೇಂದ್ರ ಬೆಂಗಳೂರಿನಲ್ಲಿ ಆರಂಭ

ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳಿಗೆ ಬಾಲಮಂದಿರ

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳಿಗಾಗಿ ವಿಶೇಷ ಬಾಲಮಂದಿರವನ್ನು ತೆರೆಯಲಾಗಿದ್ದು, ಮಕ್ಕಳ ಪಾಲನೆ ಹಾಗೂ ರಕ್ಷಣೆಗೆ ಸಜ್ಜಾಗಿದೆ. ಇದು ದೇಶದಲ್ಲೇ ಮೊದಲನೆಯದು.

ಇಲ್ಲಿನ ಕಿದ್ವಾಯಿ ಆಸ್ಪತ್ರೆ ಬಳಿ 'ಮಿಷನ್ ವಾತ್ಸಲ್ಯ' ಯೋಜನೆ ಅಡಿ ಪ್ರತ್ಯೇಕ ಎರಡು ಬಾಲಮಂದಿರಗಳು ನಿರ್ಮಾಣವಾಗಿವೆ.

ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಮಾದರಿ ನಿಯಮದ ಅಡಿ ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕ ಬಾಲಮಂದಿರ ನಿರ್ಮಾಣಕ್ಕೆ ಅವಕಾಶವಿದೆ. ಅದರಂತೆ ರಾಜ್ಯದ 30 ಜಿಲ್ಲೆಗಳಲ್ಲಿ 30 ಬಾಲಕರ ಬಾಲಮಂದಿರ, 29 ಬಾಲಕಿಯರ ಬಾಲಮಂದಿರ, 1 ಶಿಶು ಮಂದಿರ, 1 ಅನುಪಾಲನಾ ಗೃಹ ಸೇರಿ ಒಟ್ಟು 61 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳ ಪಾಲನೆ, ಪೋಷಣೆಗೆ ಪ್ರತ್ಯೇಕ ಕೇಂದ್ರ ಇದುವರೆಗೂ ಇರಲಿಲ್ಲ. ಈಗ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುದಾನದಲ್ಲಿ ಪ್ರಥಮ ಕೇಂದ್ರವು ಆರಂಭವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎರಡೂವರೆ ವರ್ಷ ತಡ: 2020ರಲ್ಲಿ ನಡೆದಿದ್ದ ಕೇಂದ್ರದ ಯೋಜನಾ ಅನುಮೋದನೆ ಸಭೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ರಾಜಧಾನಿಯಲ್ಲಿ ಎರಡು ಬಾಲಮಂದಿರ ಆರಂಭಿಸಲು ಅನುಮತಿ ಸಿಕ್ಕಿತ್ತು. ಕೇಂದ್ರವು ಅನುದಾನ ನೀಡುವ ಭರವಸೆ ನೀಡಿತ್ತು. ಆದರೆ, ಎರಡೂವರೆ ವರ್ಷ ತಡವಾಗಿ ಕೇಂದ್ರ ಆರಂಭವಾಗಿದೆ.

ತಲಾ 50 ಮಂದಿ ಸಾಮರ್ಥ್ಯ: 'ಬಾಲಕ ಹಾಗೂ ಬಾಲಕಿಯರಿಗೆ ಎರಡು ಪ್ರತ್ಯೇಕ ಬಾಲಮಂದಿರ ನಿರ್ಮಿಸಲಾಗಿದೆ. ತಲಾ 50 ಮಂದಿ ಸಾಮರ್ಥ್ಯವಿದೆ. ಪರಿವೀಕ್ಷಣಾಧಿಕಾರಿ, ಗೃಹಪಾಲಕಿ, ರಕ್ಷಕರು, ಅಡುಗೆ ಸಹಾಯಕರು ಸೇರಿದಂತೆ ಎರಡೂ ಕೇಂದ್ರದಲ್ಲೂ ಒಟ್ಟು 16 ಹುದ್ದೆ ಸೃಷ್ಟಿಸ ಲಾಗಿದೆ. ಅವರು ಮಕ್ಕಳ ಪಾಲನೆ, ಶಿಕ್ಷಣಕ್ಕೆ ನೆರವಾಗಲಿದ್ದಾರೆ. ಈ ಹುದ್ದೆಗಳ ವೆಚ್ಚದ ಶೇಕಡ 60ರಷ್ಟು ಕೇಂದ್ರ ಸರ್ಕಾರ ಭರಿಸಿದರೆ, ಉಳಿದ ಹಣವನ್ನು ರಾಜ್ಯ ಸರ್ಕಾರ ನೀಡಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಬಾಲಮಂದಿರದಲ್ಲಿ ಮಕ್ಕಳಿಗೆ ಸಂಪೂರ್ಣ ಪುನರ್ವಸತಿ ಕಲ್ಪಿಸುತ್ತೇವೆ. ಕೆಲವರು ದೂರವಾಣಿ ಕರೆ ಮಾಡಿ ವಿಚಾರಿಸುತ್ತಿದ್ದಾರೆ. ಯಾರೂ ಮಕ್ಕಳನ್ನು ದಾಖಲಿಸಿಲ್ಲ' ಎಂದು ಹೆಸರು ಹೇಳಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮತ್ತೆ ಸಮೀಕ್ಷೆ

'ಪ್ರಾಥಮಿಕ ಸಮೀಕ್ಷೆಯಂತೆ ರಾಜ್ಯದಲ್ಲಿ 70 ಸಾವಿರ ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ. ಈ ಸಂಖ್ಯೆ ಮಕ್ಕಳನ್ನೂ ಒಳಗೊಂಡಿದೆ. ನಿಖರ ಮಾಹಿತಿ ತಿಳಿಯಲು ಮತ್ತೊಂದು ಸಮೀಕ್ಷೆ ನಡೆಸಲಾಗುತ್ತಿದೆ.

ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳು, ಸಾರ್ವಜನಿಕರಿಂದ ಶೋಷಣೆಗೆ ಒಳಗಾಗುತ್ತಿರುವ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಮಕ್ಕಳ ಕಲ್ಯಾಣ ಸಮಿತಿ ಮುಂದೆಯೂ ಪ್ರಕರಣಗಳು ಬರುತ್ತಿವೆ. ಶೋಷಣೆ ತಪ್ಪಿಸಿ ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಯೋಜನೆ ರೂಪಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕುಟುಂಬವಾದದ ನಿಲುವು ವೈಯಕ್ತಿಕವೇ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತ್ತೆ ಮತ್ತೆ ಕುಟುಂಬ ವಾದವನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಪಕ್ಷವನ್ನು ಚುಚ್ಚುವ ಪ್ರಯತ್ನ ಮಾಡಿದ್ದೀರಿ. ಕುಟುಂಬವಾದದ ಬಗೆಗಿನ ನಿಮ್ಮ ನಿಲುವು ವೈಯಕ್ತಿಕವಾದದ್ದೇ. ಇಲ್ಲವೇ ಪಕ್ಷದ್ದೇ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಕುಟುಂಬ ರಾಜಕಾರಣ ಕುರಿತ ಪ್ರಧಾನಿ ಹೇಳಿಕೆಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ಕರ್ನಾಟಕದ ಚುನಾವಣೆಯಲ್ಲಿ ಈ ಬಾರಿ ನಿಮ್ಮ ಪಕ್ಷ 'ಕುಟುಂಬ ರಾಜಕಾರಣ'ಕ್ಕೆ ಸೇರುವ 34 ಅಭ್ಯರ್ಥಿಗಳಿಗೆ ಟಿಕೆಟ್ ನೀಡಿತ್ತು. ಬಿ.ಎಸ್. ಯಡಿಯೂರಪ್ಪನವರ ಕುಟುಂಬ, ಜಾರಕಿಹೊಳಿ ಕುಟುಂಬ, ಕತ್ತಿ ಕುಟುಂಬ, ಜೊಲ್ಲೆ, ನಿರಾಣಿ, ಗಣಿ ರೆಡ್ಡಿಗಳು, ಗುತ್ತೇದಾರ್‌ಗಳು ಇವರೆಲ್ಲಾ ನಿಮ್ಮ ಪಕ್ಷದ ಟಿಕೆಟ್ ಪಡೆದು ಚುನಾವಣೆ ಎದುರಿಸಲಿಲ್ಲವೇ' ಎಂದೂ ಕೇಳಿದ್ದಾರೆ.

'ಅಡ್ಡ ಮಾರ್ಗದಲ್ಲಿ ಅಧಿಕಾರ ಹಿಡಿಯಲು ಹೊರಟಾಗ ನಿಮಗೆ ಕುಟುಂಬವಾದದ ನೆನಪಾಗುವುದಿಲ್ಲವೇ? ಕರ್ನಾಟಕದಲ್ಲಿ ದೇವೇಗೌಡರ ಕುಟುಂಬ, ಮಹಾರಾಷ್ಟ್ರದಲ್ಲಿ ಠಾಕ್ರೆ ಕುಟುಂಬ, ಹರಿಯಾಣದಲ್ಲಿ ಚೌತಾಲಾ ಕುಟುಂಬ, ಕಾಶ್ಮೀರದಲ್ಲಿ ಮುಫ್ತಿ ಕುಟುಂಬ, ಪಂಜಾಬ್‌ನಲ್ಲಿ ಬಾದಲ್ ಪರಿವಾರದೊಂದಿಗೆ ನಿಮ್ಮ ಪಕ್ಷ ಅಧಿಕಾರ ಸವಿದಿಲ್ಲವೇ' ಎಂದೂ ಕುಟುಕಿದ್ದಾರೆ.

'ಜಾತಿ, ಧರ್ಮಗಳ ಆಧಾರದಲ್ಲಿ ದೇಶ ಒಡೆಯುವ ಬಿಜೆಪಿ ಕಾರ್ಯಸೂಚಿ ಈಗ ಗುಪ್ತವಾಗಿ ಉಳಿದಿಲ್ಲ. ಸರ್ಕಾರದ ಸಾಧನೆಗಳ ಆಧಾರದಲ್ಲಿ ಮುಂಬರುವ ಲೋಕಸಭಾ ಚುನಾವಣೆ ಎದುರಿಸಲು ಸಾಧ್ಯ ಇಲ್ಲ ಎನ್ನುವುದು ನಿಮಗೆ ಮನದಟ್ಟಾಗಿದೆ. ಈ ಪರಿಸ್ಥಿತಿಯಲ್ಲಿ ಉಳಿದಿರುವ ಮತ್ತು ನಿಮಗೆ ಅತ್ಯಂತ ಪ್ರಿಯವಾದ ಅಸ್ತ್ರ ಅನ್ಯ ಧರ್ಮಗಳ ದ್ವೇಷ ಮತ್ತು ಕಾಂಗ್ರೆಸ್ ವಿರುದ್ಧ ರಾಜಕಾರಣ ಮಾತ್ರ' ಎಂದಿದ್ದಾರೆ.

ದಂಡುಮೇಜಿನ ಸಭೆಯಲ್ಲಿ ದಲಿತ ಸಂಘಟನೆಗಳ ಹಕ್ಕೊತ್ತಾಯ

ದಲಿತರ ವಿಷಯಗಳ ಚರ್ಚೆಗೆ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟರಿಗೆ ನೀಡಿದ ಅನುದಾನ, ಹಲವು ಯೋಜನೆಗಳನ್ನು ರೂಪಿಸಿದರೂ ಬದಲಾಗದ ದಲಿತರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಕುರಿತು ಚರ್ಚಿಸುವುದಕ್ಕಾಗಿಯೇ ಒಂದು ವಾರ ವಿಶೇಷ ಅಧಿವೇಶನ ಕರೆಯಬೇಕು ಎಂದು ದಲಿತ ಸಂಘರ್ಷ ಸಮಿತಿ, ದಲಿತ ಹಕ್ಕುಗಳ ಸಮಿತಿ ಮುಖಂಡರು ಒತ್ತಾಯಿಸಿದರು.

ಗಾಂಧಿ ಭವನದಲ್ಲಿ ಬುಧವಾರ 'ಪರಿಶಿಷ್ಟರ ಅನುದಾನ ಮತ್ತು ಸರ್ಕಾರದ ಧೋರಣೆಗಳು' ವಿಷಯ ಕುರಿತು ಸಂಘಟನೆಗಳ ಮುಖಂಡರು ವಿಶೇಷ ಅಧಿವೇಶನಕ್ಕೆ ಹಕ್ಕೊತ್ತಾಯ ಮಂಡಿಸುವ ನಿರ್ಣಯ ಕೈಗೊಂಡರು.

ನಿವೃತ್ತ ಐಎಎಸ್ ಅಧಿಕಾರಿ ಎನ್. ಸಿ.ಮುನಿಯಪ್ಪ ಮಾತನಾಡಿ, 90ರ ದಶಕದ ನಂತರ ಪರಿಶಿಷ್ಟರ ಕಲ್ಯಾಣಕ್ಕೆ ಪ್ರತ್ಯೇಕವಾಗಿ ಹಣ ಮೀಸಲಿಡುವ ಪರಿಪಾಠ ಆರಂಭವಾಯಿತು. ₹ 250 ಕೋಟಿಯಿಂದ ಆರಂಭವಾದ ಅನುದಾನ ಇಂದು ₹ 34,294 ಕೋಟಿ ತಲುಪಿದೆ. ಆದರೆ, ದಲಿತರ ಆರ್ಥಿಕ ಸ್ಥಿತಿಗತಿ ಸ್ವಲ್ಪವೂ ಬದಲಾಗಿಲ್ಲ. ಪ್ರತಿ ವರ್ಷವೂ ಬಜೆಟ್‌ನಲ್ಲಿ ಸಾವಿರಾರು ಕೋಟಿ ಅಧಿಕ ಅನುದಾನ ಘೋಷಿಸಲಾಗುತ್ತದೆ. ಈ ಹಣ ಸದ್ಬಳಕೆಯಾಗಿದ್ದರೆ ಬಹಳಷ್ಟು ದಲಿತರು ಅಭಿವೃದ್ಧಿ ಕಾಣಬೇಕಿತ್ತು. ಸಬಲರಾಗಬೇಕಾದವರು ದುರ್ಬಲರಾಗೇ ಇದ್ದಾರೆ. ಇದಕ್ಕೆ ಆಡಳಿತ, ವಿರೋಧ ಪಕ್ಷಗಳ ವೈಫಲ್ಯ ಕಾರಣ. ಮೀಸಲು ಕ್ಷೇತ್ರದಿಂದ ಆಯ್ಕೆಯಾದರೂ ಧ್ವನಿ ಎತ್ತದಿರುವುದು ವಿಪರ್ಯಾಸ ಎಂದರು.



ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಹಾಗೂ ದಲಿತ ಹಕ್ಕುಗಳ ಸಮಿತಿ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎನ್. ಸಿ. ಮುನಿಯಪ್ಪ ಮಾತನಾಡಿದರು. ರಾಜಣ್ಣ, ಟಿ.ಆರ್. ಚಂದ್ರಶೇಖರ್, ಮಾವಳ್ಳಿ ಶಂಕರ್, ಬಿ. ರಾಜಶೇಖರ್ ಮೂರ್ತಿ ಇದ್ದರು – ಪ್ರಜಾವಾಣಿ ಚಿತ್ರ

ಆರ್ಥಿಕ ತಜ್ಞ ಟಿ.ಆರ್.ಚಂದ್ರಶೇಖರ್ ಮಾತನಾಡಿ, ಅವೈಜ್ಞಾನಿಕ ಯೋಜನೆಗಳಿಂದಾಗಿ ದಲಿತರಿಗೆ ಫಲ ದೊರೆಯುತ್ತಿಲ್ಲ. ಬೇರೆಬೇರೆ ಇಲಾಖೆಗಳ ಮಧ್ಯೆ ಸಮನ್ವಯ ಇಲ್ಲ. ಹಾಗಾಗಿ, ಯೋಜನೆಗಳನ್ನು ಪುನರ್ ರೂಪಿಸಬೇಕು. ಹಣಕಾಸು ಬಳಕೆ, ಯೋಜನೆಗಳ ಕುರಿತು ತಜ್ಞರಿಂದ ಮೌಲ್ಯಮಾಪನ ನಡೆಸಬೇಕು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ದಲಿತ ಹಕ್ಕುಗಳ ಸಮಿತಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಚಾಲಕ ಬಿ.ರಾಜಶೇಖರಮೂರ್ತಿ, ರಾಜ್ಯದ ಶೇ 70ರಷ್ಟು ದಲಿತರಿಗೆ ನಿವೇಶನ, ಮನೆಗಳಿಲ್ಲ. ಸ್ಮಶಾನ ಭೂಮಿಗಳಿಲ್ಲ. ಪದವಿ ಪಡೆದ ದಲಿತ ಯುವಕರು ಉದ್ಯೋಗವಿಲ್ಲದೆ ಬಾರ್, ಲಾರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ವಿಷಯಗಳ ಚರ್ಚೆಗೆ ವಿಶೇಷ ಅಧಿವೇಶನ ಕರೆಯುವ ಜತೆಗೆ, ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತ್ಯೇಕ ಸಭೆಗಳನ್ನು ಆಯೋಜಿಸಬೇಕು ಎಂದರು.

ದಸಂಸ ಅಂಬೇಡ್ಕರ್ ವಾದದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ದಲಿತ ಹಕ್ಕು ಸಮಿತಿ ಸಹ ಸಂಚಾಲಕ ರಾಜಣ್ಣ, ಮುಖಂಡರಾದ ಕೊರಳೂರು ಶ್ರೀನಿವಾಸ್, ಮುನಿನಂಜಪ್ಪ, ಪಿ.ನಾಗರಾಜ್, ರವಿಚಂದ್ರನ್, ರಾಜು, ನಿರ್ಮಲಾ, ಧನಮ್ಮ ಚರ್ಚೆಯಲ್ಲಿ ಭಾಗವಹಿಸಿದ್ದರು.

ರಾಜಕಾಲುವೆ: ವಲಯದ ಆಯುಕ್ತ ಜಯರಾಂ ರಾಯಪುರ ಪರಿಶೀಲನೆ

ಕಾಮಗಾರಿ ಪೂರ್ಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಲಯ ವ್ಯಾಪ್ತಿಯಲ್ಲಿರುವ ಬೃಹತ್ ನೀರುಗಾಲುವೆಗಳ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಸೂಚಿಸಿದರು.

ಬೃಹತ್ ನೀರುಗಾಲುವೆಗಳನ್ನು ಬುಧವಾರ ಪರಿಶೀಲಿಸಿದ ಅವರು, ಮಳೆಗಾಲದ ಸಂದರ್ಭದಲ್ಲಿ ರಾಜಕಾಲುವೆಗಳಿಂದ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಹೂಳನ್ನು ಕಾಲಕಾಲಕ್ಕೆ ತೆರವುಕೊಳಿಸಬೇಕು ಎಂದರು.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ 165ರಲ್ಲಿ ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ಕಚೇರಿಯ ಆವರಣದಲ್ಲಿ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಇಲ್ಲಿ ಸಾರ್ವಜನಿಕರು ಭೇಟಿ ನೀಡುತ್ತಿರುತ್ತಾರೆ. ಹೀಗಾಗಿ ರಾಜ ಕಾಲುವೆಗೆ ಆರ್‌ಸಿಸಿ ಚಾವಣಿ ಹಾಕಿಕೊಡಬೇಕು ಎಂದು ಬೆಸ್ಕಾಂ ಅಧಿಕಾರಿಗಳು ಮನವಿ ಮಾಡಿಕೊಂಡರು.

ರಾಜಕಾಲುವೆಯ ನಿರ್ವಹಣೆಗೆ ತೊಂದರೆಯಾಗದಂತೆ ಮೂರು ಕಡೆ ರ್‍ಯಾಂಪ್ ನಿರ್ಮಿಸಿ, ಹೂಳನ್ನು ತೆಗೆಯಲು ಅನುಕೂಲವಾಗುವಂತೆ ಕಾಮಗಾರಿ ನಡೆಸಬೇಕು. ಚಿಕ್ಕದಾದ ಹೈಡ್ರಾಲಿಕ್ ಎಸ್ಕವೇಟರ್ ಹೋಗುವಂತೆ ಆರ್.ಸಿ.ಸಿ ಚಾವಣಿಯಿಂದ ಮುಚ್ಚುವ ವ್ಯವಸ್ಥೆ ಮಾಡಿ ಎಂದು ಜಯರಾಂ ಸೂಚಿಸಿದರು.

ಗಾಳಿ ಆಂಜನೇಯ ದೇವಸ್ಥಾನ: ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗಾಳಿ ಆಂಜನೇಯ ದೇವಸ್ಥಾನದ ಹಿಂಭಾಗದ ವೃಷಭಾವತಿ ಮಳೆ ನೀರುಗಾಲುವೆಯನ್ನು ಪರಿಶೀಲಿಸಿದರು.

ಕವಿಕಾ ಕಾರ್ಖಾನೆ ಹಿಂಭಾಗ ಮಳೆನೀರುಗಾಲುವೆಯಲ್ಲಿನ ಹೂಳನ್ನು ಹೊರತೆಗೆಯಲು ಅನುಕೂಲವಾಗುವಂತೆ ಈಗಾಗಲೇ ನಿರ್ಮಿಸಿರುವ ತಾತ್ಕಾಲಿಕ ರ್‍ಯಾಂಪ್‌ಗೆ ಬದಲಾಗಿ ಶಾಶ್ವತವಾಗಿ ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ನಿರ್ಮಿಸಿರುವಂತೆ ರ್‍ಯಾಂಪ್ ನಿರ್ಮಿಸಲು ಜಯರಾಂ ಸೂಚಿಸಿದರು.

ಮುಖ್ಯ ಎಂಜಿನಿಯರ್ ರಾಜೇಶ್, ಕಾರ್ಯಪಾಲಕ ಎಂಜಿನಿಯರ್ ಚೇತನ್, ಬೆಸ್ಕಾಂ, ಕೆಪಿಟಿಸಿಎಲ್ ಅಧಿಕಾರಿಗಳು ಇದ್ದರು.



ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ಹರಿಯುತ್ತಿರುವ ವೃಷಭಾವತಿ ಕಣಿವೆಯ ಬಳಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಬುಧವಾರ ಪರಿಶೀಲನೆ ನಡೆಸಿದರು

ಹೂಳು ತೆಗೆಯಲು ತಾಕೀತು

ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ಹರಿಯುತ್ತಿರುವ ವೃಷಭಾವತಿ ಕಣಿವೆಯಲ್ಲಿ ನೀರು ಹರಿವನ್ನು ಪರಿಶೀಲಿಸಿದರು. ಹೊರವರ್ತುಲ ರಸ್ತೆಯ ಸೇತುವೆಯ ಕೆಳಭಾಗದ ವೆಂಟ್ ಚಿಕ್ಕದಾಗಿರುವ ಕಾರಣ ಹೆಚ್ಚು ಮಳೆಯಾದ ಸಂದರ್ಭದಲ್ಲಿ ಪ್ರವಾಹ ಆಗುವುದನ್ನು ತಡೆಯಲು ಆಗಾಗ್ಗೆ ಹೂಳನ್ನು ತೆಗೆಯಲು ವಲಯ ಆಯುಕ್ತರು ಸೂಚಿಸಿದರು.

ನಾಯಂಡಹಳ್ಳಿ ಜಂಕ್ಷನ್ ವೃತ್ತದಲ್ಲಿ ಎಂ.ಆರ್. ಕನ್ವೆನ್ಷನ್ ಹಾಲ್ ಮುಂಭಾಗ ಲಭ್ಯವಿರುವ ಸುಮಾರು ಅರ್ಧ ಎಕರೆ ಖಾಲಿ ಜಾಗವನ್ನು ಘನ ತ್ಯಾಜ್ಯ ನಿರ್ವಹಣೆ ಉದ್ದೇಶಗಳಿಗೆ ಅಥವಾ ಬೃಹತ್ ನೀರುಗಾಲುವೆ ಉದ್ದೇಶಕ್ಕಾಗಿ ಮಾತ್ರ ಮೀಸಲಿಡಲು ಸೂಚಿಸಿದರು.

ಮೆಟ್ರೋದಲ್ಲಿ 11 ದಿನಗಳಲ್ಲಿ ನಿತ್ಯ ಹೆಚ್ಚುವರಿಯಾಗಿ 30 ಸಾವಿರ ಜನ

ಪ್ರಯಾಣಿಕರ ಸಂಖ್ಯೆ ಹೆಚ್ಚಿಸಿದ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿ ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನದಿಂದಾಗಿ 'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ಒಮ್ಮೆಲೇ ಪ್ರಯಾಣಿಕರ ಸಂಖ್ಯೆಯನ್ನು 30 ಸಾವಿರದಷ್ಟು ಹೆಚ್ಚಿಸಿದೆ.

ಮೆಟ್ರೊ ಹಸಿರು ಮಾರ್ಗದಲ್ಲಿ ರೈಲು ನಿತ್ಯ 143 ಟ್ರಿಪ್ ಚಲಿಸುತ್ತದೆ. ಸರಾಸರಿ 2.5 ಲಕ್ಷ ಪ್ರಯಾಣಿಕರು ಹಿಂದೆ ಮೆಟ್ರೊದಲ್ಲಿ ಸಂಚರಿಸಿದ್ದರೆ. ಆ.5ರಿಂದ ಆ.15ರವರೆಗೆ ಸರಾಸರಿ 2.8 ಲಕ್ಷ ಜನರು ಪ್ರಯಾಣಿಸಿದ್ದರು. ಅದರಲ್ಲಿಯೂ ಆ.15ರ ಸ್ವಾತಂತ್ರ್ಯೋತ್ಸವದ ದಿನ 3.46 ಲಕ್ಷ ಜನ ಸಂಚರಿಸಿದ್ದು ದಾಖಲೆಯಾಗಿದೆ.

ಫಲಪುಷ್ಪ ಪ್ರದರ್ಶನ ಆರಂಭವಾದ ಮೇಲೆ ಆ.5ರಂದು 3 ಲಕ್ಷ ದಾಟಿತ್ತು. ಬಳಿಕ ಒಂದು ವಾರ ಭಾರಿ ಸ್ಪಂದನೆ ಇರಲಿಲ್ಲ. 2.5 ಲಕ್ಷದಿಂದ 2.9 ಲಕ್ಷದವರೆಗೆ ಪ್ರಯಾಣಿಕರ ಸಂಖ್ಯೆ ಇತ್ತು. ಕೊನೇ ಮೂರುದಿನಗಳು ಮತ್ತೆ 3 ಲಕ್ಷದ ಗಡಿ ದಾಟಿದ್ದವು. ಈ 11 ದಿನಗಳಲ್ಲಿ ನಿತ್ಯದ ಆದಾಯವು ಸರಾಸರಿ ₹ 7.5 ಲಕ್ಷದಷ್ಟು ಹೆಚ್ಚಾಗಿದೆ.

ತಪಾಸಣೆಯೇ ಇಲ್ಲ: ಫಲಪುಷ್ಪ ಪ್ರದರ್ಶನ ನೋಡಲು ಮಧ್ಯಾಹ್ನದ ಬಳಿಕ ಬರುವವರ ಸಂಖ್ಯೆಯು ಪ್ರತಿದಿನ ಮಧ್ಯಾಹ್ನದ ಬಳಿಕ ಅಧಿಕೊಳ್ಳುತ್ತಿದ್ದು, ಮಂಗಳವಾರ ವಿಪರೀತ ಹೆಚ್ಚಿತ್ತು. ಕಾಯಿನ್ ಟಿಕೆಟ್ ಅಲ್ಲದೇ, ಪೇಪರ್ ಟಿಕೆಟ್ ವ್ಯವಸ್ಥೆ ಮಾಡಿದ್ದರೂ ಟಿಕೆಟ್ ವಿತರಣೆ ಮಾಡುವುದೇ ದೊಡ್ಡ ಸವಾಲಾಗಿತ್ತು. ಮೆಟ್ರೊ ನಿಲ್ದಾಣಗಳ ಒಳ ಪ್ರವೇಶಿಸುವಾಗ ಎಲ್ಲ ಕಡೆ ಮನುಷ್ಯರ ತಪಾಸಣೆಯ ಜೊತೆಗೆ ಬ್ಯಾಗ್‌ಗಳ ತಪಾಸಣೆ ಮಾಡಲಾಗುತ್ತದೆ. ಆದರೆ, ಲಾಲ್‌ಬಾಗ್ ರೈಲು ನಿಲ್ದಾಣದಲ್ಲಿ ನೂಕುನುಗ್ಗಲು ಇದ್ದಿದ್ದರಿಂದ ಮನುಷ್ಯರ ತಪಾಸಣೆಯಷ್ಟೇ ಮಾಡುತ್ತಿದ್ದು, ಬ್ಯಾಗ್ ಪರಿಶೀಲನೆಯನ್ನು ಕೈಬಿಡಲಾಗಿತ್ತು.

ಟಿಕೆಟ್ ಪಡೆದ ಮೇಲೂ ಮೆಟ್ರೊ ಪ್ಲಾಟ್‌ಫಾರ್ಮ್‌ಗೆ ಹೋಗಲು ಸಾಹಸಪಡುತ್ತಿರುವುದು ಕಂಡು ಬಂತು. ಪೇಪರ್ ಟಿಕೆಟ್ ಪಡೆದವರಿಗೆ ಬೇರೆ ಸರದಿ, ಸ್ಮಾರ್ಟ್‌ಕಾರ್ಡ್ ಬಳಕೆದಾರರಿಗೆ ಬೇರೆ ಸರದಿ ಮಾಡಿದರೂ ಜನಸಂದಣಿ ನಿಯಂತ್ರಿಸಲು ಮೆಟ್ರೊ ಸಿಬ್ಬಂದಿ ಹರಸಾಹಸ ಪಡುತ್ತಿದ್ದರು.

ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ವಿಶೇಷ ಸಂದರ್ಭಗಳಲ್ಲಿ ಹೆಚ್ಚುವರಿ ಮೆಟ್ರೊ ರೈಲು ಸಂಚರಿಸುವಂತೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮೆಟ್ರೊ ಪ್ರಯಾಣಿಕರು ಅಬಿಪ್ರಾಯ ವ್ಯಕ್ತಪಡಿಸಿದರು.

ಬಿಎಂಟಿಸಿ ಬಸ್‌ನಲ್ಲಿಯೂ ಸಂಚರಿಸಿದವರ ಸಂಖ್ಯೆ ಹೆಚ್ಚಳ

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಿಂದಾಗಿ ಬಿಎಂಟಿಸಿ ಬಸ್‌ಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಅಧಿಕವಾಗಿತ್ತು. ಹೆಚ್ಚುವರಿಯಾಗಿ 20 ಬಸ್‌ಗಳು ಈ ಮಾರ್ಗದಲ್ಲಿ ಸಂಚರಿಸಿದವು. ಆ.15ರಂದು ಒಂದೇ ದಿನ ಈ ಮಾರ್ಗದಲ್ಲಿ 10 ಸಾವಿರದಷ್ಟು ಅಧಿಕ ಪ್ರಯಾಣಿಕರು ಬಿಎಂಟಿಸಿ ಬಸ್‌ನಲ್ಲಿ ಸಂಚರಿಸಿದ್ದಾರೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> **ಫಲಪುಷ್ಪ ಪ್ರದರ್ಶನ ಕಾಲದಲ್ಲಿಯೂ ಸಂಚಾರ ದಟ್ಟಣೆಯಿಲ್ಲದ, ಸುರಕ್ಷಿತ ಪ್ರಯಾಣಕ್ಕಾಗಿ ಜನರು ಮೆಟ್ರೊವನ್ನೇ ಅವಲಂಬಿಸಿದ್ದಾರೆ.**
> **ಅಂಜುಂ ಪರ್ವೇಜ್,** ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

ಅಶೋಕ ವಿ.ವಿಯ ಮತ್ತೊಬ್ಬ ಪ್ರಾಧ್ಯಾಪಕ ರಾಜೀನಾಮೆ

ನವದೆಹಲಿ (ಪಿಟಿಐ): ಅಶೋಕ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಸಬ್ಯಸಾಚಿ ದಾಸ್ ಅವರು ರಾಜೀನಾಮೆ ನೀಡಿದ ಮರುದಿನವೇ ಮತ್ತೊಬ್ಬ ಪ್ರಾಧ್ಯಾಪಕ ಪುಲಾಪ್ರೆ ಬಾಲಕೃಷ್ಣನ್ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಮಧ್ಯೆ ದಾಸ್ ಅವರನ್ನು ಮರು ನೇಮಕ ಮಾಡಿಕೊಳ್ಳದಿದ್ದಲ್ಲಿ ಸಾಮೂಹಿಕವಾಗಿ ರಾಜೀನಾಮೆ ನೀಡುವುದಾಗಿ ಆಡಳಿತ ಮಂಡಳಿಗೆ ಸಹೋದ್ಯೋಗಿಗಳು ಪತ್ರ ಬರೆದಿದ್ದಾರೆ. ಇಂಗ್ಲಿಷ್ ಮತ್ತು ಸೃಜನಾತ್ಮಕ ಬರವಣಿಗೆ ವಿಭಾಗಗಳು ಸಹ ಇದಕ್ಕೆ ಬೆಂಬಲ ನೀಡಿವೆ. ಆಗಸ್ಟ್ 23ರ ಒಳಗಾಗಿ ದಾಸ್ ಅವರನ್ನು ಮರುನೇಮಕ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿವೆ.

ಬಾಲಕೃಷ್ಣನ್ ಅವರ ರಾಜೀನಾಮೆ ಕುರಿತು ವಿಶ್ವವಿದ್ಯಾಲಯ ಸಿಬ್ಬಂದಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ದಾಸ್ ಅವರು ತಮ್ಮ ಸಂಶೋಧನಾ ಪ್ರಬಂಧ 'ಡೆಮಾಕ್ರಟಿಕ್ ಬ್ಯಾಕ್‌ಸ್ಲೈಡಿಂಗ್ ಇನ್ ವರ್ಲ್ಡ್ಸ್ ಲಾರ್ಜೆಸ್ಟ್ ಡೆಮಾಕ್ರಸಿ' (ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುತ್ವದ ಹಿನ್ನಡೆ) ವಿವಾದಕ್ಕೀಡಾದ ನಂತರ ರಾಜೀನಾಮೆ ಸಲ್ಲಿಸಿದ್ದರು.

ಬಾಲಕೃಷ್ಣನ್ ಮತ್ತು ಇತರ ಸಹೋದ್ಯೋಗಿಗಳ ನಡೆಯನ್ನು ಸ್ವರಾಜ್ ಇಂಡಿಯಾ ಸಂಸ್ಥಾಪಕ ಮತ್ತು ರಾಜಕೀಯ ಕಾರ್ಯಕರ್ತ ಯೋಗೇಂದ್ರ ಯಾದವ್ ಶ್ಲಾಘಿಸಿದ್ದಾರೆ.

'10 ವರ್ಷ ಶಕ್ತಿ ಯೋಜನೆ ಇರುತ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆ ನಿಲ್ಲುತ್ತದೆ ಎಂದು ಯಾರೋ ಅಪಪ್ರಚಾರ ಮಾಡುತ್ತಿದ್ದಾರೆ. ಇನ್ನು 10 ಯೋಜನೆ ಇರುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಕುಚೋದ್ಯ ಮಾಡಲು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಇದನ್ನು ನಂಬಿ ಕೆಲವು ಮಹಿಳೆಯರು ಬಸ್‌ಪಾಸ್ ಬೇಕು ಎಂದು ಕೇಳುತ್ತಿದ್ದಾರಂತೆ. ಮಹಿಳೆಯರು ಬಸ್‌ಪಾಸ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ನಾವೇ ಮುಂದಿನ ಬಾರಿಯೂ ಗೆಲ್ಲುತ್ತೇವೆ. ಈ ಯೋಜನೆ ಮುಂದುವರಿಯುತ್ತದೆ' ಎಂದು ತಿಳಿಸಿದ್ದಾರೆ.

ಇಲಾಖೆ ಸ್ಪಷ್ಟನೆ: 'ಶಕ್ತಿ ಯೋಜನೆ' ಕೊನೆಗೊಳ್ಳುತ್ತಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುದ್ದಿ ಸುಳ್ಳು. ಸತ್ಯಕ್ಕೆ ದೂರವಾದ ಈ ಸುಳ್ಳು ಸುದ್ದಿಯನ್ನು ಜನರು ನಂಬಬಾರದು. ಮಹಿಳೆಯರಿಗೆ ಒದಗಿಸುತ್ತಿರುವ ಉಚಿತ ಪ್ರಯಾಣ ಮುಂದುವರಿದಿದೆ. ಈ ಬಗ್ಗೆ ಸಾರ್ವಜನಿಕರಿಗೆ ಕಾಲಕಾಲಕ್ಕೆ ಸಮರ್ಪಕವಾದ ಮಾಹಿತಿಯನ್ನು ಒದಗಿಸಲಾಗುತ್ತಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಅನುಕೂಲಸಿಂಧು ರಾಜಕಾರಣ'

ಬೆಂಗಳೂರು: 'ಕೆಲವೊಮ್ಮೆ ಸ್ಥಳೀಯವಾಗಿ ಅನುಕೂಲ ಸಿಂಧು ರಾಜಕಾರಣ ಮಾಡಿಕೊಳ್ಳಬೇಕಾಗುತ್ತದೆ. ಯಾರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಎನ್ನುವುದು ಸ್ಥಳೀಯ ನಾಯಕರಿಗೆ ಬಿಟ್ಟ ವಿಚಾರ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ದೊಡ್ಡ, ದೊಡ್ಡ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುತ್ತಿಲ್ಲ. ಅನ್ಯಪಕ್ಷಗಳ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ ಸೇರಲು ಒಲವು ತೋರಿದ್ದಾರೆ' ಎಂದರು.

ಮೊದಲ ಸ್ಥಾನ ಸಿಗುವುದಿಲ್ಲ: 'ಪಕ್ಷ ಬಿಟ್ಟು ಹೋಗಿರುವವರು ಮರಳಿ ಬಂದಿರುವ ಉದಾಹರಣೆ ಸಾಕಷ್ಟಿದೆ. ಹೀಗಾಗಿ, ತಪ್ಪು ಮಾಡಿರುವುದನ್ನು ಸರಿ ಮಾಡಿಕೊಳ್ಳುವುದಾದರೆ ಪಕ್ಷಕ್ಕೆ ಮತ್ತೆ ಬರಬಹುದು. ಆದರೆ, ಅವರಿಗೆ ಮೊದಲ ಸ್ಥಾನ ಸಿಗುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಬಿಜೆಪಿಯಲ್ಲಿ ಸರಿಯಾಗಿ ನಡೆಸಿಕೊಳ್ಳಲಿಲ್ಲ ಎಂಬ ಕಾರಣಕ್ಕೆ ಆ ಪಕ್ಷದ ಕೆಲವು ಶಾಸಕರು ಕಾಂಗ್ರೆಸ್‌ಗೆ ಬರಬಹುದು. ಬಿಜೆಪಿಯಿಂದ ಬರುವ ಶಾಸಕರನ್ನು ಸೇರಿಸಿಕೊಳ್ಳುತ್ತೇವೆ. ಪರಿಶೀಲನೆ ಮಾಡಿ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆಂದು ಅಧ್ಯಕ್ಷರು ಕೂಡಾ ಈಗಾಗಲೇ ಹೇಳಿದ್ದಾರೆ. ಕಾಂಗ್ರೆಸ್ ಸಿದ್ಧಾಂತ, ನಾಯಕತ್ವದ ಮೇಲೆ ನಂಬಿಕೆ ಇಟ್ಟು ಪಕ್ಷಕ್ಕೆ ಬರುವುದಾದರೆ ಬರಬಹುದು' ಎಂದರು.

'ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸೀಟು ಗೆಲ್ಲಬೇಕು. ಅದಕ್ಕೆ ಏನು ಬೇಕೋ ಅದನ್ನು ಮಾಡುತ್ತೇವೆ. ಬಿಜೆಪಿಯವರು ಕಳೆದ ಬಾರಿ 25 ಸ್ಥಾನ ಪಡೆದಿದ್ದರು. ಈ ಬಾರಿ ನಾವು ಅಷ್ಟು ಸ್ಥಾನ ಪಡೆಯಲು ಗುರಿ ಇಟ್ಟುಕೊಂಡಿದ್ದೇವೆ' ಎಂದರು.

ಯಾರೇ ಬಂದರೂ ಸ್ವಾಗತ: ಸಂಸದ ಡಿ.ಕೆ. ಸುರೇಶ್ ಮಾತನಾಡಿ, 'ಪಕ್ಷಕ್ಕೆ ಯಾರೇ ಬಂದರೂ ಸ್ವಾಗತ. ಸೇರಿಸಿಕೊಳ್ಳಬೇಕೇ, ಬೇಡವೇ ಎಂದು ಹೈಕಮಾಂಡ್ ತೀರ್ಮಾನಿಸುತ್ತದೆ. ಆದರೆ, ಈ ಬಗ್ಗೆ ಪ್ರಾಥಮಿಕವಾಗಿ ನನಗೆ ಯಾವ ವಿಚಾರವೂ ಗೊತ್ತಿಲ್ಲ' ಎಂದರು.

ಟ್ಯಾಂಕರ್ ಸಿಲುಕಿ ಅನಿಲ ಸೋರಿಕೆ

ಧಾರವಾಡ/ಬೆಳಗಾವಿ: ಧಾರವಾಡ ಸಮೀಪದ ಹೈಕೋರ್ಟ್ ಬಳಿಯಿರುವ ರಾಷ್ಟ್ರೀಯ ಹೆದ್ದಾರಿ–4ರ ಅಂಡರ್‌ಪಾಸ್‌ನಲ್ಲಿ ಎಚ್‌ಪಿಸಿಎಲ್ ಗ್ಯಾಸ್ ಟ್ಯಾಂಕರ್ ಸಿಲುಕಿಕೊಂಡು, ಅನಿಲ ಸೋರಿಕೆಯಾದ ಪರಿಣಾಮ ಬುಧವಾರ ರಾತ್ರಿಯಿಡೀ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಟ್ಯಾಂಕರ್ ಮುಂಬೈಯಿಂದ ಬೇಲೂರು ಕೈಗಾರಿಕಾ ಪ್ರದೇಶಕ್ಕೆ ಬರುತಿತ್ತು. ಸರ್ವಿಸ್ ರಸ್ತೆಯಲ್ಲಿ ಸಾಗಲು ಪ್ರಯತ್ನಿಸಿ, ಟ್ಯಾಂಕರ್ ಸಿಲುಕಿತು.

ಅಂಡರ್‌ಪಾಸ್‌ನ ಸೀಲಿಂಗ್‌ಗೆ ಟ್ಯಾಂಕರ್‌ನ ಮುಚ್ಚಳ ತಾಗಿ, ಅನಿಲ ಸೋರಿಕೆಯಾಗಿದ್ದರಿಂದ ಬೆಳಗಾವಿ, ಧಾರವಾಡ ಕಡೆ ಸಾಗುವ ವಾಹನಗಳ ಸಂಚಾರ ತಡೆ ಹಿಡಿಯಲಾಗಿತ್ತು.

ಎಲ್‌ಸಿಎ ದತ್ತಾಂಶ ಕಳವು ಆರೋಪ

ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಮಾನಿಕ ಅಭಿವೃದ್ಧಿ ಸಂಸ್ಥೆಯ ಲಘು ಯುದ್ಧ ವಿಮಾನ (ಎಲ್‌ಸಿಎ) ಅಭಿವೃದ್ಧಿಗೆ ಸಂಬಂಧಿಸಿದ ದತ್ತಾಂಶ ಕಳವು ಮಾಡಿ ಡಾರ್ಕ್ ವೆಬ್ ಸಂಸ್ಥೆಗೆ ಮಾರಾಟ ಮಾಡಿದ ಆರೋಪದಡಿ ವೈಮಾನಿಕ ಎಂಜಿನಿಯರ್ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಗೊಳಿಸುವಂತೆ ಕೋರಿ ಯಲಹಂಕದ ಶಿವರಾಮಕೃಷ್ಣ ಚೆನ್ನುಬೊಯ್ನಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, 'ಇಂತಹ ಪ್ರಕರಣಗಳ ತನಿಖೆ ಯುದ್ಧೋಪಾದಿಯಲ್ಲಿ ನಡೆಯಬೇಕು. ನಾಲ್ಕು ತಿಂಗಳ ಒಳಗೆ ತನಿಖೆ ಪೂರ್ಣಗೊಳಿಸಬೇಕು' ಎಂಬ ಖಡಕ್ ನಿರ್ದೇಶನ ನೀಡಿದೆ.

ಕೇಂದ್ರ ಸರ್ಕಾರದ ಪರ ಡೆಪ್ಯೂಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್ ಅವರ ವಾದ ಮನ್ನಿಸಿರುವ ನ್ಯಾಯಪೀಠ, 'ಇಂತಹ ಪ್ರಕರಣದ ತನಿಖೆಯನ್ನು ರಾತ್ರೋರಾತ್ರಿ ಪೂರ್ಣಗೊಳಿಸಲಾಗದು. ಇದರಲ್ಲಿ ಹಲವು ಸೂಕ್ಷ್ಮ ಹಾಗೂ ಗೋಪ್ಯ ವಿಚಾರ ಅಡಗಿವೆ. ಅರ್ಜಿದಾರರು ಅತ್ಯಂತ ಸೂಕ್ಷ್ಮ ದತ್ತಾಂಶವನ್ನು ಡಾರ್ಕ್ ವೆಬ್ ಸಂಸ್ಥೆಗೆ ಸೋರಿಕೆ ಮಾಡಿದ್ದಾರೆ ಎನ್ನಲಾಗಿದೆ. ಯಾವುದೇ ವ್ಯಕ್ತಿ ಯಾವುದೇ ರೀತಿಯಲ್ಲಿ ರಾಷ್ಟ್ರದ ಸುರಕ್ಷತೆಯನ್ನು ಅಸ್ಥಿರಗೊಳಿಸಲು ಮುಂದಾದರೆ ಅದನ್ನು ಲಘುವಾಗಿ ಪರಿಗಣಿಸಲಾಗದು. ಅರ್ಜಿದಾರರು ತಮ್ಮನ್ನು ಅಮಾಯಕ ಎಂದು ಬಿಂಬಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದು ಇಲ್ಲಿಗೆ ಬಿಡುವಂತಹ ಪ್ರಕರಣವಲ್ಲ. ಈ ಕೇಸಿನಲ್ಲಿ ತನಿಖೆ ಆಗಲೇಬೇಕು. ಸತ್ಯಾಂಶ ಹೊರಬರಬೇಕು' ಎಂದು ಅಭಿಪಾಯಪಟ್ಟಿದೆ.

'ದತ್ತಾಂಶ ಸೋರಿಕೆ ಅಥವಾ ಕಳವು ಮತ್ತು ಡಾರ್ಕ್ ವೆಬ್‌ಗೆ ಅದರ ಮಾರಾಟ ನಮ್ಮ ರಾಷ್ಟ್ರವೂ ಸೇರಿದಂತೆ ಎಲ್ಲ ದೇಶಗಳಿಗೂ ಆತಂಕದ ವಿಚಾರ. ಇಂತಹ ಸೂಕ್ಷ್ಮವಾದ ದತ್ತಾಂಶ ಸೋರಿಕೆ ಕೃತ್ಯದಲ್ಲಿ ಭಾಗಿಯಾದವರನ್ನು ಕಠಿಣ ರೀತಿಯಲ್ಲಿ ಹತ್ತಿಕ್ಕಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?

ಕೇಂದ್ರ ರಕ್ಷಣಾ ಇಲಾಖೆಯ ವೈಮಾನಿಕ ಅಭಿವೃದ್ಧಿ ಸಂಸ್ಥೆಯು (ಎಡಿಎ), ಭಾರತೀಯ ವಿಜ್ಞಾನ ಮಂದಿರದ (ಐಐಎಸ್ ಸಿ) ಜೊತೆ ಕೆಲವು ಯೋಜನೆಗಳ ಅನುಷ್ಠಾನದಲ್ಲಿ ತೊಡಗಿತ್ತು. ಈ ವೇಳೆ ಐಐಎಸ್‌ಸಿ ಜೊತೆ ಇಂಟರ್ನಿ ಆಗಿದ್ದ ಅರ್ಜಿದಾರರು ಲಘು ಯುದ್ಧ ವಿಮಾನಗಳ ತಯಾರಿಕೆಯಲ್ಲಿಯೂ ಇಂಟರ್ನಿಯಾಗಿ ಕಾರ್ಯ ನಿರ್ವಹಿಸಿದ್ದರು. ಆಗ ಅವರು ಸೋರ್ಸ್ ಕೋಡ್ ಪಡೆದು ಅದನ್ನು ಡಾರ್ಕ್ ವೆಬ್ ಸಂಸ್ಥೆಗೆ ಮಾರಾಟ ಮಾಡಿದ್ದಾರೆ' ಎಂಬುದು ಆರೋಪ.

ಮಾಹಿತಿ ಸೋರಿಕೆ ಹೇಗೆ ಆಗಿದೆ ಎಂಬುದನ್ನು ಪತ್ತೆ ಹಚ್ಚಲು ಇಲಾಖೆಯು ಸತತ 18 ತಿಂಗಳ ಕಾಲ ಆಂತರಿಕ ತನಿಖೆ ನಡೆಸಿತ್ತು. ಇದರಲ್ಲಿ ಅರ್ಜಿದಾರರು ಭಾಗಿಯಾಗಿರುವ ಅಂಶ ಕಂಡು ಬಂದಿತ್ತು.

'ಪ್ರಕರಣವನ್ನು ತಡವಾಗಿ ದಾಖಲಿಸಲಾಗಿದೆ. ಕೃತ್ಯದಲ್ಲಿ ನಾನು ಭಾಗಿಯಾಗಿದ್ದೇನೆ ಎನ್ನುವುದಕ್ಕೆ ಯಾವುದೇ ಸಾಕ್ಷ್ಯವಿಲ್ಲ. ನಾನೊಬ್ಬ ಪ್ರತಿಭಾವಂತ ವಿದ್ಯಾರ್ಥಿ. ಇದರ ತನಿಖೆಗೆ ಅವಕಾಶ ನೀಡಿದರೆ, ಅದು ಕಾನೂನಿನ ದುರ್ಬಳಕೆ ಆಗಲಿದೆ. ಹಾಗಾಗಿ, ಪ್ರಕರಣ ರದ್ದುಗೊಳಿಸಬೇಕು' ಎಂದು ಆಕ್ಷೇಪಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ರಾಜ್ಯ ಸರ್ಕಾರಕ್ಕೆ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹ

‘ತಮಿಳುನಾಡಿಗೆ ನೀರು ನಿಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ತಕ್ಷಣ ನಿಲ್ಲಿಸಬೇಕು. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ವಿಚಾರದಲ್ಲಿ ರಾಜ್ಯದ ಹಿತವನ್ನು ಸರ್ಕಾರ ಕಾಪಾಡಬೇಕು ಎಂದು ಅವರು ಸರಣಿ ಟ್ವೀಟ್ ಮಾಡಿದ್ದಾರೆ. ತಮಿಳುನಾಡಿಗೆ 10 ಟಿಎಂಸಿ ಅಡಿ ನೀರು ಬಿಡುಗಡೆ ಮಾಡುವುದಾಗಿ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಹೇಳಿಕೆ ನೀಡಿರುವ ಬೆನ್ನಲ್ಲೇ ಬೊಮ್ಮಾಯಿ ಅವರು ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿದ್ದಾರೆ.

ತಮಿಳುನಾಡು ಕುರುವೈ ಬೆಳೆಗೆ ಎರಡು ಪಟ್ಟು ನೀರು ಬಳಕೆ ಮಾಡಿದೆ. ಕುರುವೈ ಬೆಳೆ ಪ್ರದೇಶವನ್ನು ನಾಲ್ಕು ಪಟ್ಟು ವಿಸ್ತರಣೆ ಮಾಡಿದೆ. ಕರ್ನಾಟಕ ಸರ್ಕಾರ ಕಾವೇರಿ ಜಲ ನ್ಯಾಯಮಂಡಳಿಯಲ್ಲಿ ತಮಿಳುನಾಡು ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸದೇ, ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ ತಕ್ಷಣ ನೀರು ಬಿಟ್ಟಿರುವುದು ಅಕ್ಷಮ್ಯ ಅಪರಾಧ ಎಂದು ಹೇಳಿದ್ದಾರೆ.

‘ನಮ್ಮ ರಾಜ್ಯದ ರೈತರಿಗೆ ನೀರು ಬಿಡದೇ ಆ ನೀರನ್ನು ಅಣೆಕಟ್ಟಿನಲ್ಲಿ ಸಂಗ್ರಹಿಸಿಡಲಾಯಿತು. ಅಷ್ಟೇ ಅಲ್ಲ ಆ ನೀರನ್ನು ನಮ್ಮ ರೈತರಿಗೆ ಕೊಡದೇ ತಮಿಳುನಾಡಿಗೆ ಹರಿಸುವ ಸ್ಥಿತಿ ತಂದೊಡ್ಡಿದ್ದೀರಿ. ಅಚ್ಚರಿ ಎಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾವೇರಿ ನೀರನ್ನು ಬಿಡಲು ಸಾಧ್ಯವೇ ಇಲ್ಲ ಎಂಬ ಹೇಳಿಕೆ ಕೊಟ್ಟ ಮರುದಿನವೇ ಉಪಮುಖ್ಯಮಂತ್ರಿ ಅಧೀನದ ನೀರಾವರಿ ಇಲಾಖೆ ತಮಿಳುನಾಡಿಗೆ ನೀರು ಬಿಟ್ಟಿದೆ. ರಾಜ್ಯದಲ್ಲಿ ಕಾವೇರಿ ನೀರು ನಿರ್ವಹಣೆಯಲ್ಲಿಯೂ ಒಮ್ಮತವಿಲ್ಲ. ರಾಜ್ಯದ ನೀರಿನ ಪಾಲನ್ನು ರಕ್ಷಣೆ ಮಾಡುವ ಛಲವೂ ಸರ್ಕಾರದಲ್ಲಿ ಕಾಣಿಸುತ್ತಿಲ್ಲ’ ಎಂದು ಬೊಮ್ಮಾಯಿ ಅವರು ಟೀಕಿಸಿದ್ದಾರೆ.

ಕೆಆರ್‌ಎಸ್ ಬೀಗ ಕೇಂದ್ರದ ಕೈಯಲ್ಲಿದೆ: ಡಿಕೆಶಿ

‘ಕೆಆರ್‌ಎಸ್ ಅಣೆಕಟ್ಟಿನ ಬೀಗ ನಮ್ಮ ಕೈಯಲ್ಲಿ ಇಲ್ಲ. ಅದು ಕೇಂದ್ರ ಸರ್ಕಾರದಲ್ಲಿದೆ. ಬೊಮ್ಮಾಯಿ ಅವರಿಗೆ ಇದು ಗೊತ್ತಿಲ್ಲವೆ? ರಾಜಕಾರಣ ಯಾವ ವಿಚಾರದಲ್ಲಿ ಮಾಡಬೇಕೊ ಅದರಲ್ಲಿ ಮಾಡಬೇಕು, ಎಲ್ಲ ವಿಚಾರದಲ್ಲಿ ಅಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯದ ರೈತರ ಹಿತ ಮರೆತು ತಮಿಳುನಾಡಿಗೆ ಸರ್ಕಾರ ಕಾವೇರಿ ನೀರು ಹರಿಸಿದೆ’ ಎಂಬ ಬೊಮ್ಮಾಯಿ ಮತ್ತು ಬಿಜೆಪಿ ನಾಯಕರ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯದ ರೈತರ ಹಿತ ಕಾಪಾಡಲು ನಮ್ಮ ಸರ್ಕಾರ ಬದ್ಧವಾಗಿದೆ’ ಎಂದರು.

‘ತಮಿಳುನಾಡಿನವರು 27 ಟಿಎಂಸಿ ಅಡಿ ನೀರು ಕೇಳಿದ್ದಾರೆ. ಅವರು ಕೇಳಿದಷ್ಟು ನೀರು ಕೊಟ್ಟಿಲ್ಲ. ನಾವು ಇಚ್ಛೆ ಬಂದಂತೆ ವರ್ತಿಸಿದರೆ ಕೋರ್ಟ್ ಕೇಳಬೇಕಲ್ಲವೇ. ನಾವು ಕಾನೂನು ತಜ್ಞರ ಸಲಹೆ ಕೇಳಿ ಅದರಂತೆ ಹೆಜ್ಜೆ ಇಡಬೇಕಿದೆ. ಇಲ್ಲದಿದ್ದರೆ ಇನ್ನಷ್ಟು ದೊಡ್ಡ ನಷ್ಟ ಅನುಭವಿಸಬೇಕಾಗುತ್ತದೆ’ ಎಂದು ಅವರು ಹೇಳಿದರು.

ಕಾವೇರಿ ನದಿ ನೀರಿಗಿಳಿದು ಪ್ರತಿಭಟನೆ

ಶ್ರೀರಂಗಪಟ್ಟಣ/ಮದ್ದೂರು: ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ಹೆಚ್ಚಿಸಲಾಗುತ್ತಿದೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಬುಧವಾರ ಪಟ್ಟಣದ ಸೋಪಾನ ಕಟ್ಟೆ ಬಳಿ ಕಾವೇರಿ ನದಿಗಿಳಿದು ಪ್ರತಿಭಟಿಸಿದರು. ಮದ್ದೂರಿನಲ್ಲಿ ಮೈಸೂರು - ಬೆಂಗಳೂರು ಎಕ್ಸ್‌ಪ್ರೆಸ್ ವೇ ತಡೆದು ಪ್ರತಿಭಟಿಸಿದರು.

ರೈತರ ಸಂಘಟನೆಗಳ ಒಕ್ಕೂಟ ಟೀಕೆ: ‘ರಾಜ್ಯದ ರೈತರ ಹಿತಾಸಕ್ತಿ ಬಲಿಗೊಟ್ಟು ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದು ರೈತ ದ್ರೋಹಿ ಕೆಲಸ’ ಎಂದು ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಟೀಕಿಸಿದ್ದಾರೆ.

‘ಪ್ರತಿ ಪಂಚಾಯಿತಿಗೂ 3 ಹೊಸ ಶಾಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್ಆರ್) ಬಳಸಿಕೊಂಡು ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲೂ ಮೂರು ನೂತನ ಶಾಲೆಗಳ ನಿರ್ಮಾಣ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯಲ್ಲಿ ಬುಧವಾರ ಆಯೋಜಿಸಿದ್ದ ಸಭೆಯ ನಂತರ ಅವರು ಮಾತನಾಡಿದರು.

‘ಸಿಎಸ್ಆರ್ ನಿಧಿಯನ್ನು ಸದ್ಬಳಕೆ ಮಾಡಲು ಸರ್ಕಾರ ಸೂಕ್ತ ಯೋಜನೆ ರೂಪಿಸುತ್ತಿದೆ. ಇದುವರೆಗೂ ಹಣ ನಗರ ಪ್ರದೇಶಗಳಿಗೆ ಬಳಕೆಯಾಗುತ್ತಿತ್ತು. ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣಕ್ಕೆ ಬಳಕೆ ಮಾಡಲು ಸರ್ಕಾರ ನಿರ್ಧರಿಸಿದೆ. ಪ್ರತಿ ಪಂಚಾಯಿತಿಯಲ್ಲಿ ಮೂರು ಶಾಲೆಗಳನ್ನು ಹೊಸದಾಗಿ ನಿರ್ಮಾಣ ಮಾಡಬೇಕು ಎಂಬುದು ನಮ್ಮ ಕನಸಾಗಿದೆ. ನಾನೂ ಸಹ ಪಂಚಾಯಿತಿ ವ್ಯಾಪ್ತಿಯ ಮೂರು ಶಾಲೆಗಳನ್ನು ದತ್ತು ತೆಗೆದುಕೊಳ್ಳುವೆ’ ಎಂದರು.

ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳಬೇಕು. ಅವರ ಶಾಲೆಯ ಶಿಕ್ಷಕರನ್ನೇ ಗ್ರಾಮೀಣ ಭಾಗದ ಶಾಲೆಗಳಿಗೆ ಕಳುಹಿಸಬೇಕು. ಅಂತರ ರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ನಮ್ಮ ಕರ್ನಾಟಕದ ಪ್ರತಿ ಗ್ರಾಮೀಣ ಮಕ್ಕಳಿಗೂ ದೊರೆಯಬೇಕು. ಇಂತಹ ಆಶಯಗಳಿಗಾಗಿಯೇ ಯೋಜನೆ ರೂಪಿಸಲಾಗುತ್ತಿದೆ ಎಂದು ಹೇಳಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಸಂಸದ ಡಿ.ಕೆ. ಸುರೇಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಆಯುಕ್ತೆ ಬಿ.ಬಿ. ಕಾವೇರಿ ಭಾಗವಹಿಸಿದ್ದರು.

‘ರವಿ ಹುಚ್ಚ, ಎಚ್‌ಡಿಕೆ ಹಾವಾಡಿಗ’

ತುಮಕೂರು: ‘ಬಿಜೆಪಿ ನಾಯಕ ಸಿ.ಟಿ. ರವಿ ಒಬ್ಬ ಹುಚ್ಚ ಮತ್ತು ಜೆಡಿಎಸ್ ಶಾಸಕ ಎಚ್.ಡಿ. ಕುಮಾರಸ್ವಾಮಿ ಅವರು ಹಾವಾಡಿಗ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಟೀಕಿಸಿದ್ದಾರೆ.

‘ಸರ್ಕಾರ ಆರು ತಿಂಗಳಿಗೆ ಬೀಳುತ್ತದೆ ಎಂಬುವುದು ಸಿ.ಟಿ.ರವಿ ಅವರ ಅಭಿಪ್ರಾಯ ಇರಬಹುದು. ಹುಚ್ಚರ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಆಗುವುದಿಲ್ಲ. ಎಲ್ಲ ಹೇಳಿಕೆಗಳಿಗೆ ಕಿಮ್ಮತ್ತು ಕೊಡುವ ಅವಶ್ಯಕತೆ ಇಲ್ಲ’ ಎಂದು ರಾಜಣ್ಣ ಖಾರವಾಗಿ ಪ್ರತಿಕ್ರಿಯೆ ನೀಡಿದರು. ‘ಕುಮಾರಸ್ವಾಮಿ ಅವರು ಸುಮ್ಮನೆ ಪೆನ್‌ಡ್ರೈವ್ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದರು.

‘ಹಾವಾಡಿಗರು ಒಂದು ಬುಟ್ಟಿ ತಂದಿಟ್ಟು, ಇದರಲ್ಲಿ ಆ ಹಾವಿದೆ, ಹಾವಿದೆ... ಬಿಡುತ್ತೇನೆ ಅಂತ ತೋರಿಸಿದ್ದನ್ನು ನೋಡಿದ್ದೇವೆ. ಅದಕ್ಕೂ ಕುಮಾರಸ್ವಾಮಿ ಅವರಿಗೂ ಹೆಚ್ಚಿನ ವ್ಯತ್ಯಾಸ ಇಲ್ಲ. ತಾಕತ್ತಿದ್ದರೆ ದಾಖಲೆ ಬಿಡುಗಡೆ ಮಾಡಲಿ’ ಎಂದು ಸವಾಲು ಹಾಕಿದರು.

ಮಾದರಿ ಪ್ರಶ್ನೆ ಪತ್ರಿಕೆಯಲ್ಲೇ ದೋಷ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಬಿಡುಗಡೆ ಮಾಡಿದ ದ್ವಿತೀಯ ಪಿಯು ಮಾದರಿ ಪ್ರಶ್ನೆ ಪತ್ರಿಕೆ ಹಲವು ದೋಷಗಳಿಂದ ಕೂಡಿದೆ ಎಂದು ಉಪನ್ಯಾಸಕರು ದೂರಿದ್ದಾರೆ.

ಇಲಾಖೆ ಈಗಾಗಲೇ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿದ್ದು, ಕಾಲೇಜುಗಳಿಗೆ ವಿತರಿಸಲು ಸಿದ್ಧತೆ ನಡೆಸಿದೆ. ಪತ್ರಿಕೆಯ ಪ್ರತಿ ವಾಕ್ಯದಲ್ಲೂ ದೋಷಗಳೇ ತುಂಬಿವೆ. ಇಂತಹ ಕಾರ್ಯಗಳಿಂದ ಅನುಭವಿ ಶಿಕ್ಷಕರನ್ನು ಹೊರಗಿಟ್ಟು, ಅನುಭವವಿಲ್ಲದ ಉಪನ್ಯಾಸಕರಿಂದ ಸಿದ್ಧಪಡಿಸಿರುವ ಶಂಕೆ ಇದೆ. ಈ ಕುರಿತು ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಪರೀಕ್ಷಾ ಮಂಡಳಿಗೆ ಇಮೇಲ್ ಮೂಲಕ ದೂರು ಸಲ್ಲಿಸಲಾಗಿದೆ ಎಂದು ಉಪನ್ಯಾಸಕರೊಬ್ಬರು ಮಾಹಿತಿ ನೀಡಿದರು.

‘ಕೆಲವು ಪ್ರಶ್ನೆಗಳನ್ನು ಸರಿಯಾಗಿ ರೂಪಿಸಿಲ್ಲ. ಕೆಲವು ಪ್ರಶ್ನೆಗಳಿಗೆ ನೀಡಲಾದ ಆಯ್ಕೆಗಳೂ ಸರಿ ಇಲ್ಲ. ಇಂತಹ ಮಾದರಿ ಪ್ರಶ್ನೆಪತ್ರಿಕೆಗಳನ್ನು ಕಾಲೇಜುಗಳಿಗೆ ಸರಬರಾಜು ಮಾಡಬಾರದು’ ಎಂದು ಸಲಹೆ ನೀಡಿದ್ದಾರೆ.

₹25 ಕೋಟಿ ಮೌಲ್ಯದ ಬಿಯರ್ ವಶ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿರುವ ಯುನೈಟೆಡ್ ಬ್ರಿವರಿಸ್ ಕಂಪನಿಯು ತಯಾರಿಸಿದ ಬಿಯರ್‌ನಲ್ಲಿ ಸೆಡಿಮೆಂಟ್ ಅಂಶ ಪತ್ತೆಯಾಗಿದ್ದರಿಂದ ₹ 25 ಕೋಟಿ ಮೌಲ್ಯದ 78,678 ಬಿಯರ್ ಬಾಕ್ಸ್‌ಗಳನ್ನು ಅಬಕಾರಿ ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಜುಲೈ 15ರಂದು ತಯಾರಾದ ‘7ಇ’ ಮತ್ತು ‘7ಸಿ’ ಬ್ಯಾಚ್‌ನ ಕಿಂಗ್ ಫಿಶರ್ ಸ್ಟ್ರಾಂಗ್ ಮತ್ತು ಅಲ್ಟ್ರಾ ಲ್ಯಾಗರ್ ಬಿಯರ್‌ಗಳಲ್ಲಿ ಸೆಡಿಮೆಂಟ್ ಪತ್ತೆಯಾಗಿತ್ತು. ಈ ಬಗ್ಗೆ ನಂಜನಗೂಡಿನ ಅಬಕಾರಿ ಅಧೀಕ್ಷಕರು ಜು.27ರಂದು ಇಲಾಖೆಯ ಉಪ ಆಯುಕ್ತ ರವಿಶಂಕರ್ ಅವರಿಗೆ ಪತ್ರ ಬರೆದು ‘ಪರಿಶೀಲನೆಗಾಗಿ ಬಿಯರ್‌ಗಳನ್ನು ಲ್ಯಾಬ್‌ಗೆ ಕಳುಹಿಸುತ್ತೇವೆ. ವರದಿ ಬರುವವರೆಗೆ ಡಿಪೊಗೆ ಪೂರೈಕೆಯಾಗಿರುವ ಬಿಯರ್ ಮಾರಾಟ ತಡೆಹಿಡಿಯಬೇಕು’ ಎಂದು ತಿಳಿಸಿದ್ದರು.

ಆ.2 ರಂದು ಬೆಂಗಳೂರಿನ ರಾಸಾಯನಿಕ ಪರೀಕ್ಷಕರು ಎರಡೂ ಬ್ಯಾಚ್‌ನ ಬಿಯರ್‌ಗಳಲ್ಲಿ ಸೆಡಿಮೆಂಟ್ ಅಂಶ ಇರುವ ಬಗ್ಗೆ ವರದಿ ನೀಡಿ, ‘ಇದು ಮಾನವನ ಆರೋಗ್ಯಕ್ಕೆ ಹಾನಿಕಾರಕ ರಾಸಾಯನಿಕ’ ಎಂದು ತಿಳಿಸಿದ್ದರು. ಎಲ್ಲಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರಿಗೆ ಪತ್ರ ಬರೆದು ತಡೆ ಹಿಡಿಯಲಾದ ಬಿಯರ್‌ಗಳನ್ನು ನಾಶಪಡಿಸಲು ಸೂಚನೆ ನೀಡಿದ್ದೇವೆ’ ಎಂದು ಇಲಾಖೆಯ ಗ್ರಾಮಾಂತರ ಉಪ ಆಯುಕ್ತ ರವಿಶಂಕರ್ ತಿಳಿಸಿದರು.

‘ದೂರು ನೀಡಲು ಪ್ರತ್ಯೇಕ ‘ಆ್ಯಪ್’

ಬೆಳಗಾವಿ: ‘ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ದೂರು ನೀಡಲು ಪ್ರತ್ಯೇಕ ‘ಆ್ಯಪ್’ ಸಿದ್ಧಪಡಿಸಲಾಗುತ್ತಿದೆ. ಇನ್ನೊಂದು ವಾರದಲ್ಲಿ ಇದಕ್ಕೆ ಪೂರ್ಣರೂಪ ಸಿಗಲಿದೆ’ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

‘ಜನರಿಗೆ ದೂರು ಸಲ್ಲಿಸಲು ಸುಲಭವಾಗಲಿ ಎಂಬ ಉದ್ದೇಶದಿಂದ ‘ಆ್ಯಪ್’ ಸಿದ್ಧಪಡಿಸಲಾಗುತ್ತಿದೆ. ಈಗಾಗಲೇ ಎಲ್ಲ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ’ ಎಂದರು.

ಬಿಜೆಪಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದ ಹಾಜಬ್ಬ

ಪ್ರಜಾವಾಣಿ ವಾರ್ತೆ



ಮಂಗಳೂರು: ಭಾರತೀಯ ಜನತಾ ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದಿಂದ ಬೆಂಗಳೂರಿನಲ್ಲಿ ಆಗಸ್ಟ್ 14ರಂದು ಹಮ್ಮಿಕೊಂಡಿದ್ದ ‘ದೇಶ ವಿಭಜನೆ ಒಂದು ದುರಂತ ಕಥೆ ಸ್ಮೃತಿ ಕಾರ್ಯಕ್ರಮ’ದಲ್ಲಿ ಪಾಲ್ಗೊಳ್ಳದೇ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರು ತಮ್ಮೂರಿಗೆ ವಾಪಸಾಗಿದ್ದಾರೆ.

‘ಬೆಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಿಜೆಪಿ ನಾಯಕರೊಬ್ಬರ ಆಹ್ವಾನದ ಮೇರೆಗೆ ತೆರಳಿದ್ದೆ. ಅದು ಸ್ವಾತಂತ್ರ್ಯೋತ್ಸವದ ಸರ್ಕಾರಿ ಕಾರ್ಯಕ್ರಮ ಎಂದು ಭಾವಿಸಿ ಹೋಗಿದ್ದೆ. ಅಲ್ಲಿ ಹೋದ ಬಳಿಕ ಪಕ್ಷದ ಕಾರ್ಯಕ್ರಮ ಎಂದು ಗೊತ್ತಾಯಿತು. ನನಗೆ ಯಾವುದೇ ವಿವಾದಗಳಲ್ಲಿ ಸಿಲುಕಲು ಇಷ್ಟವಿಲ್ಲದ ಕಾರಣ ಅದರಲ್ಲಿ ಪಾಲ್ಗೊಳ್ಳದೆ ಮರಳಿದ್ದೇನೆ. ದಯವಿಟ್ಟು ಇದನ್ನು ವಿವಾದ ಮಾಡಬೇಡಿ. ನನ್ನ ಸಾಮಾಜಿಕ ಕೆಲಸದಲ್ಲಿ ಎಲ್ಲ ಪಕ್ಷದವರೂ ಸಹಾಯ ಮಾಡಿದ್ದಾರೆ’ ಎಂದು ಹಾಜಬ್ಬ ತಿಳಿಸಿದ್ದಾರೆ.

‘ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರಿದವನಲ್ಲ. ನನಗೆ ರಾಜಕೀಯ ಆಕಾಂಕ್ಷೆಗಳೂ ಇಲ್ಲ. ಶಿಕ್ಷಣ ಕ್ಷೇತ್ರದಲ್ಲಿ ನನ್ನ ಊರಿನ ಬಡಮಕ್ಕಳ ಸಲುವಾಗಿ ಕೆಲಸ ಮಾಡುತ್ತಿದ್ದೇನೆ. ದಯವಿಟ್ಟು ನನ್ನನ್ನು ರಾಜಕೀಯ ಕಾರ್ಯಕ್ರಮಗಳಿಗೆ ಕರೆಯಬೇಡಿ’ ಎಂದು ಮನವಿ ಮಾಡಿದ್ದಾರೆ.

‘ತಾಂತ್ರಿಕ ಸಮಸ್ಯೆ ಡಿಬಿಟಿ ತಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಂತ್ರಿಕ ಸಮಸ್ಯೆಯಿಂದ ಅಕ್ಕಿ ಬದಲಿಗೆ ಹಣ ಪಾವತಿ (ಡಿಬಿಟಿ) ತಡವಾಗಿದೆ. ಇನ್ನು ಒಂದು ವಾರದಲ್ಲಿ ಫಲಾನುಭವಿಗಳ ಖಾತೆಗಳಿಗೆ ಹಣ ಪಾವತಿ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಮುನಿಯಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜುಲೈನಿಂದ ಡಿಬಿಟಿ ಮಾಡಲಾಗುತ್ತಿದೆ. ಅಕ್ಕಿಯನ್ನು ಪ್ರತಿ ತಿಂಗಳು 10 ಅಥವಾ 11 ರಂದು ಕೊಡುತ್ತಿದ್ದೆವು. ಈ ಬಾರಿ ಡಿಬಿಟಿ ತಡವಾಗಿದೆ ಎಂದು ಹೇಳಿದರು.

‘ತಾಂತ್ರಿಕ ವ್ಯವಸ್ಥೆ ಸರಿಯಾಗಿ ಇರಲಿಲ್ಲ. ಅದನ್ನು ಸರಿಪಡಿಸಲಾಗಿದೆ. ಒಂದು ಬಟನ್ ಒತ್ತಿದರೆ ಸಾಕು ಎಲ್ಲ ಫಲಾನುಭವಿಗಳಿಗೂ ಹಣ ಪಾವತಿ ಆಗುತ್ತದೆ’ ಎಂದು ತಿಳಿಸಿದರು.

‘ಹೊಸದಾಗಿ ಅರ್ಜಿ ಸಲ್ಲಿಸುವವರಿಗೆ ಆದ್ಯತೆ ಮೇಲೆ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುವುದು’ ಎಂದರು.

ಎಫ್‌ಐಆರ್ ದಾಖಲಿಸಲು ಕಾನೂನು ತಜ್ಞರ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಹೇಳನಕಾರಿ ಪದ ಬಳಸಿ ಜಾತಿ ನಿಂದನೆ ಮಾಡಿರುವ ಆರೋಪದಡಿ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಿರುದ್ಧ ರಾಜಾಜಿನಗರ ಹಾಗೂ ವಿಧಾನಸೌಧ ಠಾಣೆಗೆ ಎರಡು ಪ್ರತ್ಯೇಕ ದೂರು ಸಲ್ಲಿಕೆಯಾಗಿದ್ದು, ಎಫ್‌ಐಆರ್ ದಾಖಲಿಸುವ ಸಂಬಂಧ ವಿಧಾನಸೌಧ ಠಾಣೆ ಪೊಲೀಸರು ಕಾನೂನು ತಜ್ಞರ ಸಲಹೆ ಕೇಳಿದ್ದಾರೆ.

‘ಸಚಿವರು ಜಾತಿ ನಿಂದನೆ ಮಾಡಿದ್ದಾರೆ. ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿ ದಿವಾಕರ್, ರಾಜಾಜಿನಗರ ಠಾಣೆಗೆ ದೂರು ನೀಡಿದ್ದರು. ಆ ದೂರನ್ನು ವಿಧಾನಸೌಧ ಠಾಣೆಗೆ ವರ್ಗಾಯಿಸಲಾಗಿದೆ. ಅಲ್ಲದೇ ಬನ್ನೇರುಘಟ್ಟ ರಸ್ತೆಯ ನಿವಾಸಿ ಯಶೋಧ ಅವರೂ ಸಚಿವರ ವಿರುದ್ಧ ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಇದು ಸೂಕ್ಷ್ಮ ಪ್ರಕರಣ ಆಗಿರುವ ಕಾರಣಕ್ಕೆ ಎರಡೂ ದೂರು ಆಧರಿಸಿ ಕಾನೂನು ತಜ್ಞರ ಸಲಹೆ ಕೇಳಲಾಗಿದೆ. ಅವರ ಅಭಿಪ್ರಾಯದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ಶಾಸಕ ಚವಾಣ್ ವಿರುದ್ಧ ಎಸ್ಪಿಗೆ ಪತ್ರ ಬರೆದ ಕೇಂದ್ರ ಸಚಿವ ಖೂಬಾ

‘ಅಹಿತಕರ ಘಟನೆ ನಡೆದರೆ ಹೊಣೆಗಾರನಲ್ಲ’

ಪ್ರಜಾವಾಣಿ ವಾರ್ತೆ



ಭಗವಂತ ಖೂಬಾ

ಬೀದರ್: ‘ಔರಾದ್‌ನ ಬಿಜೆಪಿ ಶಾಸಕ ಪ್ರಭು ಚವಾಣ್ ಅವರು ನನ್ನ ವಿರುದ್ಧ ಮಾಡಿರುವ ಗಂಭೀರ ಸ್ವರೂಪದ ಆರೋಪಗಳೆಲ್ಲ ಸುಳ್ಳು. ನನಗೆ ಅವರ ಮೇಲೆ ಯಾವುದೇ ದ್ವೇಷ, ಅಸೂಯೆ ಇಲ್ಲ. ಈ ಸುಳ್ಳು ಆರೋಪಗಳ ಕುರಿತು ತನಿಖೆ ನಡೆಸಬೇಕು. ಭವಿಷ್ಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆದರೆ ಅದಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ಅದಕ್ಕೆ ನಾನು ಹೊಣೆಗಾರನಲ್ಲ’ ಎಂದು ಕೇಂದ್ರ ಸಚಿವ ಭಗವಂತ ಖೂಬಾ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ಅವರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಬುಧವಾರ ಈ ಕುರಿತು ಪ್ರಕಟಣೆ ಮೂಲಕ ಮಾಹಿತಿ ಹಂಚಿಕೊಂಡಿರುವ ಖೂಬಾ, ‘ಚವಾಣ್ ಅವರು ನನ್ನ ವಿರುದ್ಧ ಸುಳ್ಳು ಆರೋಪ ಮಾಡಿರುವುದು ಅಕ್ಷಮ್ಯ ಅಪರಾಧ. ಯಾವುದೇ ಕಾರಣಕ್ಕೂ ನನ್ನ ಚಾರಿತ್ರ್ಯ ತೇಜೋವಧೆ ಮಾಡುವುದು ಸಲ್ಲದು. ಈ ರೀತಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಎಸ್ಪಿ ಕೂಡ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದೇನೆ’ ಎಂದು ತಿಳಿಸಿದ್ದಾರೆ.

‘ನನ್ನ 55 ವರ್ಷಗಳ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಬರದ ಹಾಗೆ ಬದುಕಿದ್ದೇನೆ. ಚವಾಣ್ ಮಾಡಿರುವ ಗಂಭೀರ ಆರೋಪಗಳಿಂದ ನನಗೆ ದಿಗ್ಭ್ರಮೆ ಆಗಿದೆ. ಒಂದು ವಾರದಿಂದ ಆಘಾತದಲ್ಲಿದ್ದೇನೆ. ನನ್ನ ಪರಿವಾರದವರು, ಕಾರ್ಯಕರ್ತರ ಮನಸ್ಸಿಗೆ ಬಹಳ ನೋವಾಗಿದೆ. ಚವಾಣ್ ನನ್ನ ವಿರುದ್ಧ ಮಾಡಿರುವ ಆರೋಪಗಳ ಕುರಿತು ಪಕ್ಷದ ರಾಷ್ಟ್ರೀಯ, ರಾಜ್ಯ ಅಧ್ಯಕ್ಷರು, ಇತರೆ ನಾಯಕರ ಗಮನಕ್ಕೆ ತಂದಿದ್ದೇನೆ. ಇಂತಹ ಆರೋಪಗಳಿಂದ ಧೃತಿಗೆಡದೆ ಇರಬೇಕು ಎಂದು ಅವರು ನನಗೆ ತಿಳಿಸಿದ್ದಾರೆ’ ಎಂದು ಖೂಬಾ ಹೇಳಿದ್ದಾರೆ. ಕೇಂದ್ರ ಸಚಿವರು ಆಗಸ್ಟ್ 15ರಂದು ಪತ್ರ ಬರೆದಿರುವುದನ್ನು ಎಸ್ಪಿ ಚನ್ನಬಸವಣ್ಣ ಅವರು ‘ಪ್ರಜಾವಾಣಿ’ಗೆ ಖಚಿತಪಡಿಸಿದ್ದಾರೆ.

ಆರಾಧನಾ ಮಹೋತ್ಸವಕ್ಕೆ ಪ್ರಧಾನಿ ಮೋದಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ



ಮಂತ್ರಾಲಯ (ರಾಯಚೂರು): ‘ಶ್ರೀ ರಾಘವೇಂದ್ರ ತೀರ್ಥರ 352ನೇ ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿಕೊಳ್ಳಲಾಗಿದೆ’ ಎಂದು ಮಂತ್ರಾಲಯದ ಮಠ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ತಿಳಿಸಿದರು.

‘ಮಂತ್ರಾಲಯದಲ್ಲಿ ಆಗಸ್ಟ್ 29ರಿಂದ ಸೆಪ್ಟೆಂಬರ್ 4ರವರೆಗೆ ನಡೆಯಲಿರುವ ಆರಾಧನಾ ಮಹೋತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. 7 ದಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಸಾವಿರಾರು ಭಕ್ತರು ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಅವರು ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

‘ತುಂಗಾನದಿಯಲ್ಲಿ ನೀರಿನ ಹರಿವು ಕಡಿಮೆ ಇದೆ. ನದಿಗೆ ನೀರು ಬಿಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಲಾಗುವುದು’ ಎಂದು ತಿಳಿಸಿದರು.


‘ಅಯೋಧ್ಯೆಯಲ್ಲಿ ಮಂತ್ರಾಲಯದ ಶಾಖಾಮಠ ಸ್ಥಾಪನೆಗೆ ಅಲ್ಲಿನ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಸೂಕ್ತ ಜಾಗ ಖರೀದಿಗೆ ಸ್ಪಂದಿಸುತ್ತಿಲ್ಲ. ದೂರದ ಪ್ರದೇಶದಲ್ಲಿ ಜಾಗ ತೋರಿಸಲಾಗುತ್ತಿದೆ. ಮಠದಿಂದಲೇ ಜಾಗ ಖರೀದಿಸಿ ನಿರ್ಮಾಣ ಮಾಡಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	110.60	2,933	15,939
ಹಾರಂಗಿ	2,859	2,858.57	1,464	1,745
ಕಬಿನಿ	2284.00	2,280.29	2,022	6,025
ಹೇಮಾವತಿ	2,922	2,915.02	1,184	5,360
ಲಿಂಗನಮಕ್ಕಿ	1,819	1,790.50	3,965	6,265.70
ಸೂಪಾ (ಮೀ)	564	546.50	3,025	5,156
ಮಾಣಿ	595	580.94	401	644
ತುಂಗಭದ್ರಾ	1,633	1,628.42	4,950	9,797
ಮಲಪ್ರಭಾ	2079.50	2,067.10	194	194
ಘಟಪ್ರಭಾ	2175	2,165.80	3,019	3,892
ಭದ್ರಾ	186	166.90	3,225	196
ಆಲಮಟ್ಟಿ (ಮೀ)	519.60	519.60	5,011	2,153
ನಾರಾಯಣಪುರ (ಮೀ)	492.25	491.58	00	9,507

* ನೆಲಮಟ್ಟದಿಂದ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in



ಸುಭಾಷಿತ

ಪ್ರತಿಯೊಂದು ಸುಳ್ಳೂ ವಿಷವಿದ್ದಂತೆ. ತೊಂದರೆರಹಿತ ಸುಳ್ಳು ಎಂಬುದಿಲ್ಲ. ಸತ್ಯವಷ್ಟೇ ಸುರಕ್ಷಿತ.

–ಲಿಯೊ ಟಾಲ್‌ಸ್ಟಾಯ್

ಅಪರಾಧ ಕಾನೂನಿಗೆ ಸಂಬಂಧಿಸಿದ ಮಸೂದೆ: ವಿಸ್ತೃತ ನೆಲೆಯ ಚರ್ಚೆ ಅಗತ್ಯ

ಭಾರತೀಯ ದಂಡ ಸಂಹಿತೆ (ಐಪಿಸಿ)– 1860, ಅಪರಾಧ ದಂಡಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಹಾಗೂ ಇಂಡಿಯನ್ ಎವಿಡೆನ್ಸ್ ಆ್ಯಕ್ಟ್‌ನ ಬದಲಾಗಿ ಹೊಸ ಕಾನೂನುಗಳನ್ನು ಜಾರಿಗೆ ತರುವ ಉದ್ದೇಶದ ಮೂರು ಮಸೂದೆಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಕಳೆದ ವಾರ ಮಂಡಿಸಿದ್ದಾರೆ. ಈಗ ಜಾರಿಯಲ್ಲಿರುವ ಸಿಆರ್‌ಪಿಸಿ 1973ರಲ್ಲಿ ರೂಪುಗೊಂಡಿರುವುದಾದರೂ, ಅದರ ಮೂಲ ಇರುವುದು 1898ರಲ್ಲಿ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನೋಟು ರದ್ದತಿಯನ್ನು, ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ತೀರ್ಮಾನವನ್ನು ಹೇಗೆ ದಿಢೀರ್ ಎಂದು ಪ್ರಕಟಿಸಿತ್ತೋ, ಅದೇ ರೀತಿಯಲ್ಲಿ ಈ ಮಸೂದೆಗಳನ್ನು ಕೂಡ ದಿಢೀರನೆ ಮಂಡಿಸಿದೆ. ಈ ಮೂರು ಮಸೂದೆಗಳ ಕರಡು ಸಿದ್ಧಪಡಿಸುವ ಸಮಿತಿಯು ಎರಡು ವರ್ಷಗಳಿಗೂ ಹಿಂದೆ ಕೆಲಸ ಶುರು ಮಾಡಿರಬಹುದಾದರೂ, ಆ ಕೆಲಸಗಳು ಪಾರದರ್ಶಕವಾಗಿ ಇರಲಿಲ್ಲ. ಸಮಿತಿಯಲ್ಲಿ ಪ್ರಾತಿನಿಧ್ಯ ಸರಿಯಾಗಿ ಇಲ್ಲ ಎಂಬ ಟೀಕೆಗಳು ಇವೆ. ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಮಸೂದೆಯನ್ನು ಈಗ ಸಂಸತ್ತಿನ ಸ್ಥಾಯಿ ಸಮಿತಿಯೊಂದರ ಪರಿಶೀಲನೆಗೆ ಒಪ್ಪಿಸಲಾಗಿದೆ.



ಈ ಮಸೂದೆಗಳ ವಿಚಾರವಾಗಿ ಸಾರ್ವಜನಿಕ ವೇದಿಕೆಗಳಲ್ಲಿ ನಡೆಯುವ ಚರ್ಚೆಗಳಲ್ಲಿನ ಒಳ್ಳೆಯ ಅಂಶಗಳನ್ನು ಪರಿಗಣಿಸಲು ಸರ್ಕಾರವು ಹಿಂದೇಟು ಹಾಕಬಾರದು

ದೇಶದ ಅಪರಾಧ ನ್ಯಾಯದಾನ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆಗಳು ಬೇಕಿವೆ ಎಂಬುದರಲ್ಲಿ ಅನುಮಾನ ಇಲ್ಲ. ಬದಲಾವಣೆಗಳು ಆಗಬೇಕು ಎಂದಾದರೆ ಅಪರಾಧ ನ್ಯಾಯದಾನ ವ್ಯವಸ್ಥೆಗೆ ಸಂಬಂಧಿಸಿದ ಕಾನೂನುಗಳಲ್ಲಿ ಬದಲಾವಣೆ ಬೇಕಿದೆ. ಈ ಬೇಡಿಕೆಯು ಬಹುಕಾಲದಿಂದ ಇದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಈ ಕಾನೂನುಗಳನ್ನು ಉಳಿಸಿಕೊಳ್ಳುವ ತೀರ್ಮಾನ ಕೈಗೊಂಡಾಗಿನಿಂದಲೂ, ಇವುಗಳಲ್ಲಿ ಬದಲಾವಣೆಗಳು ಆಗಬೇಕು ಎಂಬ ಬೇಡಿಕೆ ಇದೆ. ನ್ಯಾಯಾಲಯಗಳ ತೀರ್ಪು ಹಾಗೂ ಶಾಸಕಾಂಗ ತಂದ ತಿದ್ದುಪಡಿಗಳ ಕಾರಣದಿಂದಾಗಿ ಈ ಕಾನೂನುಗಳಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ ಕೂಡ. ಆದರೆ, ಕೇಂದ್ರ ಸರ್ಕಾರವು ಈಗ ತರಲು ಉದ್ದೇಶಿಸಿರುವ ಬದಲಾವಣೆಗಳಿಗೆ ವಿಸ್ತೃತ ಸಮಾಲೋಚನೆ ಮೂಲಕ ರೂಪ ನೀಡಬೇಕಿತ್ತು. ಎಲ್ಲ ರಾಜ್ಯಗಳ ಜೊತೆ, ವಕೀಲರ ಸಂಘಗಳ ಜೊತೆ, ನ್ಯಾಯಶಾಸ್ತ್ರ ಪರಿಣತರ ಜೊತೆ, ನಿವೃತ್ತ ಪೊಲೀಸ್ ಅಧಿಕಾರಿಗಳ ಜೊತೆ, ಕಾನೂನು ಆಯೋಗ ಹಾಗೂ ನಾಗರಿಕ ಸಂಘಟನೆಗಳ ಪ್ರತಿನಿಧಿಗಳ ಜೊತೆ ಸಮಾಲೋಚನೆ ನಡೆಯಬೇಕಿತ್ತು. ಈ ಮಸೂದೆಗಳ ವಿಚಾರದಲ್ಲಿ ರಾಜ್ಯಗಳ ಹಿತಾಸಕ್ತಿ ಬಹಳ ದೊಡ್ಡದು. ಏಕೆಂದರೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಿರುವುದು ರಾಜ್ಯಗಳ ಹೊಣೆ. ವಿಸ್ತೃತ ನೆಲೆಯಲ್ಲಿ ಸಮಾಲೋಚನೆ ನಡೆಸಿ ಮಸೂದೆ ರೂಪಿಸಿದ್ದಿದ್ದರೆ, ಅವುಗಳಿಗೆ ಹೆಚ್ಚಿನ ಸ್ವೀಕಾರಾರ್ಹತೆ ಸಿಗುತ್ತಿತ್ತು. ಈ ಕಾನೂನುಗಳು ದೇಶದ ಪ್ರತಿ ನಾಗರಿಕನಿಗೆ ಸಂಬಂಧಿಸಿದವು. ನಾಗರಿಕರ ನಡುವೆ ಪರಸ್ಪರ ಸಂಬಂಧ ಹೇಗಿರುತ್ತದೆ ಎಂಬುದನ್ನು, ನಾಗರಿಕರು ಸಮಾಜದ ಭಾಗವಾಗಿ ಹೇಗೆ ಬಾಳ್ವೆ ನಡೆಸಬೇಕು ಎಂಬುದನ್ನು ಹಾಗೂ ನಿರ್ದಿಷ್ಟ ಕ್ರಿಯೆಗಳಿಗೆ ಪ್ರಭುತ್ವವು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಈ ಕಾನೂನುಗಳು ತೀರ್ಮಾನಿಸುತ್ತವೆ. ಈಗ ಈ ಮಸೂದೆಗಳನ್ನು ಸ್ಥಾಯಿ ಸಮಿತಿಯು ಪರಿಶೀಲಿಸಲಿರುವುದು ಸ್ವಾಗತಾರ್ಹ. ಸಮಿತಿಯು ಮಸೂದೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಿದೆ ಎಂಬ ನಿರೀಕ್ಷೆ ಹೊಂದಬಹುದು. ಇನ್ನು ಮುಂದೆ ಈ ಮಸೂದೆಗಳ ವಿಚಾರವಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಕೂಡ ಚರ್ಚೆಗಳು ನಡೆಯುತ್ತವೆ. ಈ ಚರ್ಚೆಗಳಲ್ಲಿ ವ್ಯಕ್ತವಾಗುವ ಅನಿಸಿಕೆಗಳಿಂದಲೂ ಮಸೂದೆಗಳು ಒಂದಿಷ್ಟು ಒಳ್ಳೆಯ ಅಂಶಗಳನ್ನು ಎತ್ತಿಕೊಳ್ಳಬಹುದು. ಒಳ್ಳೆಯ ಅಂಶಗಳನ್ನು ಎತ್ತಿಕೊಳ್ಳಲು ಸರ್ಕಾರವು ಹಿಂದೇಟು ಹಾಕಬಾರದು.

ಹೊಸದಾಗಿ ರೂಪಿಸಿರುವ ಸಂಹಿತೆಗಳು ಈಗ ಜಾರಿಯಲ್ಲಿ ಇರುವ ಕಾನೂನುಗಳಿಗಿಂತ ಹೆಚ್ಚು ವಿಸ್ತಾರವಾಗಿವೆ. ಇದು ಸಹಜ. ಏಕೆಂದರೆ ಸಮಾಜದಲ್ಲಿ ಬದಲಾವಣೆಗಳು ಆದಂತೆಲ್ಲ, ಕಾನೂನು ಅವುಗಳನ್ನು ಗುರುತಿಸಬೇಕಾಗುತ್ತದೆ. ಹೊಸ ಬಗೆಯ ಅಪರಾಧಗಳನ್ನು ವ್ಯಾಖ್ಯಾನಿಸಿ, ಅವುಗಳಿಗೆ ಶಿಕ್ಷೆ ಏನು ಎಂಬುದನ್ನು ಹೇಳಬೇಕಾಗುತ್ತದೆ. ನ್ಯಾಯದಾನ ಪ್ರಕ್ರಿಯೆಯನ್ನು ಇನ್ನಷ್ಟು ಉತ್ತಮವಾಗಿ ಮಾಡುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕಾಗುತ್ತದೆ. ಭಾರತೀಯ ನ್ಯಾಯ ಸಂಹಿತೆಯು ಗಂಭೀರ ಸ್ವರೂಪದ್ದಲ್ಲದ ಅಪರಾಧಗಳಿಗೆ ಸಮುದಾಯ ಸೇವೆಯನ್ನು ಶಿಕ್ಷೆಯ ರೂಪದಲ್ಲಿ ನೀಡುವ ಪ್ರಸ್ತಾವ ಹೊಂದಿದೆ. ಆದರೆ, ತೀವ್ರ ಟೀಕೆಗಳಿಗೆ ಗುರಿಯಾಗಿರುವ ಅಂಶಗಳೂ ಈ ಸಂಹಿತೆಯಲ್ಲಿ ಇವೆ. 'ದೇಶದ್ರೋಹ'ವನ್ನು ಅಪರಾಧಗಳ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಕೇಂದ್ರ ಹೇಳಿದೆ. ಆದರೆ, ಅದನ್ನು ಇನ್ನೊಂದು ಹೆಸರು ಹಾಗೂ ಇನ್ನೊಂದು ರೂಪದಲ್ಲಿ ಸಂಹಿತೆಯಲ್ಲಿ ಸೇರಿಸಿದೆ. ಮೂರೂ ಮಸೂದೆಗಳಲ್ಲಿ ಇರುವ ಅಂಶಗಳು ಮುಂದಿನ ದಿನಗಳಲ್ಲಿ ದೇಶದಲ್ಲಿ ವ್ಯಾಪಕ ಚರ್ಚೆಗಳಿಗೆ ಒಳಗಾಗಲಿವೆ.

ಅರಣ್ಯ, ಜೀವವೈವಿಧ್ಯ, ಕಂದಾಯ ಕಾನೂನುಗಳಿಗೆ ಇತ್ತೀಚಿನ ತಿದ್ದುಪಡಿ ಅಗತ್ಯವಿತ್ತೇ?

ಕುದಿಯುವ ಕಾಲದಿ ಬೇಯುವ ಬದುಕು!



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಹಿಂದಿನ ಬೇಸಿಗೆಯಲ್ಲಿ ಧಗೆ ಅದೆಷ್ಟು ತೀವ್ರವಾಗಿತ್ತಲ್ಲವೇ? ಇಲ್ಲಷ್ಟೇ ಅಲ್ಲ, ಬಹುಪಾಲು ದೇಶಗಳಲ್ಲಿ ಏಪ್ರಿಲ್- ಮೇ ತಿಂಗಳುಗಳು ಅದೆಷ್ಟು ಬಿಸಿಯಾಗಿದ್ದವೆಂದರೆ, ಸರಾಸರಿ ತಾಪಮಾನವು ಹಲವೆಡೆ ಸಾರ್ವಕಾಲಿಕ ಏರಿಕೆ ದಾಖಲಿಸಿತು. ಬೆಚ್ಚಿಬಿದ್ದ ವಿಶ್ವಸಂಸ್ಥೆ ಮುಖ್ಯಸ್ಥರು, 'ಹವಾಮಾನ ಬದಲಾವಣೆ ಕಾಲ ಮುಗಿದಾಯ್ತು, ಇನ್ನೇನಿದ್ದರೂ ಹವಾಮಾನ ಕುದಿಯುವ ಕಾಲ!' ಎಂದು ಅಧಿಕೃತವಾಗಿ ಸಾರಿದರು. ಜಗತ್ತಿನೆಲ್ಲೆಡೆ ಸರ್ಕಾರಗಳು ಎದುರಿಸಲೇಬೇಕಾದ ಇಂದಿನ ಬೃಹತ್ ಸವಾಲಿದು.

ನಿಸರ್ಗದ ರಚನೆಯ ಮೂಲಭೂತ ಅಂಶಗಳೆಲ್ಲವೂ ಶಿಥಿಲವಾಗಿ ವಾತಾವರಣದ ತಾಪಮಾನ ಏರುತ್ತಿರುವುದು ಹಾಗೂ ಇದರಿಂದಾಗಿ ನೆಲ, ಜಲ, ಜನಜೀವನದ ಪರಿಸ್ಥಿತಿ ಬಿಗಡಾಯಿಸುತ್ತಿರುವ ಕುರಿತು ಸಂಶೋಧನೆ ಮತ್ತು ಸಾರ್ವಜನಿಕ ವಾಗ್ವಾದಗಳು ನಡೆಯತೊಡಗಿ ಹಲವು ದಶಕಗಳೇ ಸಂದಿವೆ. ಇದನ್ನು ಅರಿತ ಭಾರತ ಸರ್ಕಾರವು ಹವಾಮಾನ ಬದಲಾವಣೆ ಎದುರಿಸಲು ರಾಷ್ಟ್ರೀಯ ಕಾರ್ಯನೀತಿಯೊಂದನ್ನು 2008ರಲ್ಲೇ ರೂಪಿಸಿತು. ಕೃಷಿಮಣ್ಣಿನ ಪೋಷಣೆ, ಜಲಸಂವರ್ಧನೆ, ಸೌರಶಕ್ತಿ ಬಳಕೆಯಂತಹ ಎಂಟು ಪ್ರಮುಖ ಆದ್ಯತಾ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ 'ಸರ್ಕಾರಿ ಮಿಷನ್' ಸಹ ಘೋಷಣೆಯಾಯಿತು. ದೇಶವಿರಿಸಿದ ಈ ಮಹತ್ವದ ಹೆಜ್ಜೆಗಳು ಖಂಡಿತವಾಗಿಯೂ ಜಗತ್ತಿಗೇ ಮಾದರಿಯಾಗುವಂತೆ ಇದ್ದವು.

ಕರ್ನಾಟಕದಲ್ಲೂ ಈ ದಿಸೆಯಲ್ಲಿ ಆಗಲೇ ಗಂಭೀರ ಪ್ರಯತ್ನಗಳು ಆರಂಭವಾಗಿದ್ದವು. ಹವಾಮಾನ ಬದಲಾವಣೆಯ ಪರಿಣಾಮ ಎದುರಿಸಲು ರಾಜ್ಯವು ಸಾಗಬೇಕಾದ ದಾರಿ ಕಂಡುಕೊಳ್ಳಲು, ತಜ್ಞರ ಸ್ವತಂತ್ರ ಸಮಿತಿಯೊಂದು ವಿಧಾನಪರಿಷತ್ ಮಾಜಿ ಸಭಾಪತಿ ಪ್ರೊ. ಬಿ.ಕೆ.ಚಂದ್ರಶೇಖರ್ ಅವರ ಪ್ರಯತ್ನದಿಂದಾಗಿ 2008ರಲ್ಲೇ ಕಾರ್ಯಾರಂಭ ಮಾಡಿತ್ತು. 'ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕಾರ್ಯತಂತ್ರ ನೀತಿ' ಎಂಬ ವರದಿಯನ್ನು ಅದು 2011ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಇದರಿಂದಾಗಿ ಸರ್ಕಾರದ ಮಟ್ಟದಲ್ಲಿ ಈ ಚಿಂತನೆ ಮುನ್ನೆಲೆಗೆ ಬರುವಂತಾಯಿತು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಆ್ಯಂಡ್ ಎಕನಾಮಿಕ್ ಚೇಂಜ್ (ಐಸೆಕ್), ಏಟ್ರೀ ಸೇರಿದಂತೆ ರಾಜ್ಯದ ಹಲವು ಪ್ರಮುಖ ಸಂಶೋಧನಾ ಸಂಸ್ಥೆಗಳಲ್ಲಿ ಅದಾಗಲೇ ಜರುಗುತ್ತಿದ್ದ ಅಧ್ಯಯನಗಳ ಕಾಣ್ಕೆಗಳನ್ನು ಸರ್ಕಾರ ಗಮನಿಸುವಂತಾಯಿತು.

ವಿಶ್ವಸಂಸ್ಥೆಯು ರೂಪಿಸಿ ನಮ್ಮ ದೇಶವೂ ಒಪ್ಪಿ ಅನುಷ್ಠಾನಗೊಳಿಸುತ್ತಿರುವ 'ಹದಿನೇಳು ಸುಸ್ಥಿರ ಅಭಿವೃದ್ಧಿ ಗುರಿ'ಗಳ ಕಾರ್ಯಕ್ರಮದಲ್ಲಿ, ಹವಾಮಾನ ಬದಲಾವಣೆ ಸಂಗತಿಗಳನ್ನು ಅಡಕಗೊಳಿಸಲು ರಾಜ್ಯ ಯೋಜನಾ ಇಲಾಖೆ ಮಾಡಿರುವ ಪ್ರಯತ್ನಗಳಂತೂ ದೇಶಕ್ಕೇ ಮಾದರಿಯಾದವು.

ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆಯ ಆಧಾರದಲ್ಲಿ ರೂಪಿತವಾಗಿದ್ದ ಈ ಬಗೆಯ ಮಹತ್ವದ ಅಂಶಗಳನ್ನೆಲ್ಲ ಸರ್ಕಾರಿ ಯೋಜನೆಗಳಲ್ಲಿ ಅಳವಡಿಸುವ 'ಹಸಿರು ಬಜೆಟ್' ಮಾದರಿಯೊಂದನ್ನು ರಾಜ್ಯ ಜೀವವೈವಿಧ್ಯ ಮಂಡಳಿಯು 2020ರಲ್ಲಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತು. ಈ ತೆರನ ಹಲವಾರು ದಾರಿಗಳನ್ನು ಒಳಗೊಂಡ 'ಕರ್ನಾಟಕ ಹವಾಮಾನ ಬದಲಾವಣೆ ಕಾರ್ಯತಂತ್ರ' ಎಂಬ ಸಮಗ್ರ ವರದಿಯನ್ನು, ರಾಜ್ಯ ಸರ್ಕಾರದ ಪರಿಸರ ನಿರ್ವಹಣೆ ಮತ್ತು ನೀತಿ ನಿರೂಪಣೆಗೆ ಸಂಬಂಧಿಸಿದ ಸಂಶೋಧನಾ ಸಂಸ್ಥೆಯು (ಎಂಪ್ರಿ) 2021ರಲ್ಲಿ ಸರ್ಕಾರಕ್ಕೆ ಸಲ್ಲಿಸಿದೆ.

ಹಿಂದಿನ ಒಂದೂವರೆ ದಶಕದಲ್ಲಿ ಸರ್ಕಾರದ ಮಟ್ಟದಲ್ಲಿ ಜರುಗಿದ ಈ ಎಲ್ಲ ನೀತಿ ನಿರೂಪಣಾ ಪ್ರಯತ್ನಗಳು, ಇಡೀ ದೇಶಕ್ಕೇ ಮಾದರಿಯಾಗುವಂಥವು ಎಂಬುದರಲ್ಲಿ ಸಂಶಯವೇ ಇಲ್ಲ.

ಆದರೆ, ತಳಮಟ್ಟದಲ್ಲಿ ಈ ಯಾವ ನೀತಿಯೂ ಜಾರಿಯಾಗದಿರುವುದರಿಂದ ನಾಡಿನ ಪರಿಸರ ಹಾಗೂ ಜನಜೀವನದ ಪರಿಸ್ಥಿತಿ ಮಾತ್ರ ಬಿಗಡಾಯಿಸುತ್ತಲೇ ಇದೆ! ಕರಾವಳಿಯಲ್ಲಿ ಮಾಲಿನ್ಯ, ಸಮುದ್ರದಂಡೆ ಕೊರೆತ, ಅಳಿವೆಗಳ ನಾಶ ಹೆಚ್ಚುತ್ತಿವೆ. ಸಮುದ್ರಉತ್ಪನ್ನ ಇಳುವರಿ ಶೇ 50ಕ್ಕೂ ಮೀರಿ ಕುಸಿಯುತ್ತಿದ್ದು ಮೀನುಗಾರರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಮಲೆನಾಡಿನಲ್ಲಿ ಅರಣ್ಯವು ಒತ್ತುವರಿ ಹಾಗೂ ಅಸಂಗತ ಅಭಿವೃದ್ಧಿ ಯೋಜನೆಗಳಿಗೆ ಬಲಿಯಾಗಿ ನೆರೆ-ಬರ ಹೆಚ್ಚುತ್ತಿವೆ. ಅವೈಜ್ಞಾನಿಕ ಭೂಸ್ವರೂಪ ಬದಲಾವಣೆಯಿಂದ ಭಾರಿ ಭೂಕುಸಿತ ಹೆಚ್ಚುತ್ತಿದ್ದು, ಹಲವೆಡೆ ಸಂಪೂರ್ಣ ಹಳ್ಳಿಗಳೇ ಮಣ್ಣಿನಡಿ ಹುಗಿದುಹೋಗುತ್ತಿವೆ!

ತೊರೆ, ಝರಿ, ಕೆರೆಗಳೆಲ್ಲ ಒಣಗಿ ಕೃಷ್ಣಾ, ಕಾವೇರಿ, ನೇತ್ರಾವತಿ, ಬೇಡ್ತಿ, ಕಾಳಿಯಂಥ ಪ್ರಮುಖ ನದಿಗಳ ಜಲಾನಯನ ಪ್ರದೇಶಗಳ ಹೃದಯಭಾಗವೇ ಬರಡಾಗುತ್ತಿದೆ, ನಾಡಿನ ಜಲಸುರಕ್ಷತೆ ಅಪಾಯಕ್ಕೆ ಸಿಲುಕುತ್ತಿದೆ. ಹವಾಮಾನ ಏರುಪೇರಿನಿಂದಾಗಿ ಹೊಸ ಹೊಸ ವೈರಸ್ ಹಾಗೂ ಶಿಲೀಂಧ್ರ ರೋಗಗಳು ತೋಟಗಾರಿಕಾ ಬೆಳೆಗಳಲ್ಲಿ ವ್ಯಾಪಿಸುತ್ತಿವೆ. ಈ ಸಂಕಷ್ಟಕ್ಕೆ ಹೆಚ್ಚುತ್ತಿರುವ ಕಾಡುಪ್ರಾಣಿ ಹಾವಳಿಯೂ ಜೊತೆಯಾಗಿ, ರೈತರು ಕಂಗಾಲಾಗುತ್ತಿದ್ದಾರೆ.

ಆಹಾರಧಾನ್ಯಗಳ ಅಂಗಳವಾದ ಒಳನಾಡಿನ



ಪರಿಸ್ಥಿತಿಯೂ ಅಷ್ಟೇ ಕಳವಳಕಾರಿ. ಕೊಳವೆಬಾವಿಗಳ ಬಳಕೆ ಮಿತಿಮೀರಿ, ಅಂತರ್ಜಲ ಮಟ್ಟ ಅಪಾಯಕಾರಿಯಾಗಿ ಕೆಳಗಿಳಿಯುತ್ತಿದೆ. ಕೃಷಿಯಲ್ಲಿ ಕೃತಕ ರಾಸಾಯನಿಕಗಳ ಬಳಕೆಗೆ ಲಗಾಮು ತಪ್ಪಿ, ನೆಲ-ಜಲ ಗುಣಮಟ್ಟ ಕರಗುತ್ತಿದೆ. ರೋಗವಾಹಕ ಕೀಟಗಳ ಸಂಕುಲಗಳು ಹೆಚ್ಚಾಗಿ, ಮಲೇರಿಯಾ, ಡೆಂಗಿ, ಚಿಕೂನ್ ಗುನ್ಯ ತರಹದ ಸಾಂಕ್ರಾಮಿಕ ರೋಗಗಳು ಅಕಾಲದಲ್ಲೂ ಪಸರಿಸುತ್ತಿವೆ. ಮಣ್ಣಿನ ಸಾವಯವ ಇಂಗಾಲದ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆಯಾಗಿ, ಕೃಷಿಭೂಮಿ ಫಲವತ್ತತೆ ತೀರಾ ನಾಶವಾಗುತ್ತಿದೆ. ಹವಾಮಾನ ಬದಲಾವಣೆಯ ಈ ಕಾಲಘಟ್ಟದಲ್ಲಿ, ಈ ಸವಾಲುಗಳನ್ನೆಲ್ಲ ಎದುರಿಸುವ ವಿವೇಕದ ಮತ್ತು ದೂರದೃಷ್ಟಿಯ ಕಾರ್ಯವಿಧಾನ ಆಡಳಿತದ್ದಾಗಬೇಕಿತ್ತು. ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಅಳಿದುಳಿದಿರುವ ನೈಸರ್ಗಿಕ ಪರಿಸರವನ್ನೂ ಕಳೆದುಕೊಳ್ಳುವ ಆತ್ಮಾಹುತಿ ದಾರಿಯನ್ನು ತುಳಿಯುತ್ತಿರುವಂತಿದೆಯಲ್ಲ!

ಇತ್ತೀಚಿನ ಕೆಲವು ಸರ್ಕಾರಿ ನಿರ್ಧಾರಗಳನ್ನೇ ಗಮನಿಸೋಣ. ದಕ್ಷಿಣ ಭಾರತದ ಹವಾಮಾನ ಹಾಗೂ ನೀರಿನ ಸುರಕ್ಷತೆಯ ಮೂಲಾಧಾರವಾದ ಪಶ್ಚಿಮಘಟ್ಟದ ಸಂರಕ್ಷಣೆಗೆ ಕಾನೂನು ಚೌಕಟ್ಟು ರೂಪಿಸಲು ಎರಡು ದಶಕಗಳಿಂದ ಪ್ರಯತ್ನ ನಡೆದಿತ್ತು. ಆದರೆ, ಪರಿಸರಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ರಕ್ಷಿಸುವ ಆ ಕಾನೂನು ಪ್ರಕ್ರಿಯೆಯನ್ನೇ ಮರುಪರಿಶೀಲಿಸುವುದಾಗಿ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವರು ಇತ್ತೀಚೆಗೆ ಹೇಳಿದ್ದಾರೆ. ಹಿಂದಿನ ಸಂಸತ್ ಅಧಿವೇಶನದಲ್ಲಿ 'ಅರಣ್ಯ ಸಂರಕ್ಷಣಾ ಕಾಯ್ದೆ'ಗೆ (1980) ಮಾಡಿದ ಭಾರಿ ತಿದ್ದುಪಡಿಗಳು, ಅರಣ್ಯ ಇಲಾಖೆ ಸುಪರ್ದಿಯಲ್ಲಿರದ ಅಗಾಧ ವ್ಯಾಪ್ತಿಯ ಕಾಡನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ತೆರೆದಿಟ್ಟಿವೆ. ಇದರಿಂದಾಗಿ ರಾಜ್ಯದ ಸಹ್ಯಾದ್ರಿ ಪ್ರದೇಶವೊಂದರಲ್ಲೇ ಐದು ಲಕ್ಷ ಹೆಕ್ಟೇರಿಗೂ ಮೀರಿ ಡೀಮ್ಡ್ ಅರಣ್ಯ ಅಪಾಯದಂಚಿಗೆ ಜಾರಿದೆ. ಕಾಡಿನ ಒತ್ತುವರಿ, ಅನಧಿಕೃತ ಗಣಿಗಾರಿಕೆಯಂಥ ದ್ದಕ್ಕೆಲ್ಲ ಹೆಬ್ಬಾಗಿಲು ತೆರೆದಂತಾಗಿದೆ!

ಹಿಂದಿನ ಸಂಸತ್ ಅಧಿವೇಶನದಲ್ಲಿ 'ಜೀವವೈವಿಧ್ಯ ಕಾಯ್ದೆ'–2002 ಸಹ ತಿದ್ದುಪಡಿಯಾಗಿ, ವಾಣಿಜ್ಯೋದ್ಯಮಗಳು ನೈಸರ್ಗಿಕ ಗಿಡಮೂಲಿಕಾ ಸಂಪತ್ತನ್ನು ಯಾವ ವೆಚ್ಚ, ನೀತಿ, ನಿಬಂಧನೆಗಳಿಲ್ಲದೆ ಬಳಸುವ ಮುಕ್ತ ಉದ್ಯಮಕ್ಕೆ ದಾರಿಮಾಡಿಕೊಟ್ಟಿದೆ. ಸಹ್ಯಾದ್ರಿಯ ನದಿಕಣಿವೆಗಳಲ್ಲಿ ಅಳಿದುಳಿದಿರುವ ಜೀವವೈವಿಧ್ಯವೂ ಇದರಿಂದಾಗಿ ಕರಗಿಹೋದೀತು.

ಇತ್ತ ರಾಜ್ಯ ಸರ್ಕಾರವು ಕರ್ನಾಟಕ ಭೂಕಂದಾಯ ಕಾಯ್ದೆ– 1964ಕ್ಕೆ ತಿದ್ದುಪಡಿ ಮಾಡಿ, ಯಾರು ಬೇಕಾದರೂ ಕೃಷಿಭೂಮಿಯನ್ನು ಕೊಂಡುಕೊಂಡು ಸುಲಭವಾಗಿ ಭೂಪರಿವರ್ತನೆ ಮಾಡಿ ಕೃಷಿಯೇತರ ಉದ್ದೇಶಕ್ಕೆ ಬಳಸಲು ಅವಕಾಶ ಮಾಡಿಕೊಟ್ಟಿದೆ. ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ಮಲೆನಾಡಿನ ಸೂಕ್ಷ್ಮ ಪ್ರದೇಶಗಳೆಲ್ಲ ಈಗಾಗಲೇ ರೆಸಾರ್ಟ್ ಸಂಸ್ಕೃತಿಗೆ ಬಲಿಯಾಗುತ್ತಿರುವಾಗ, ಸಹ್ಯಾದ್ರಿ ಶ್ರೇಣಿಯನ್ನೇ ಇದು ದಿಕ್ಕುದೆಸೆ ಇಲ್ಲದ ಮುಕ್ತಮಾರುಕಟ್ಟೆಗೆ ಈಗ ತೆರೆದಿಡುತ್ತಿದೆ!

ಹವಾಮಾನ ಬದಲಾವಣೆ ಎಂಬುದು ಭೂಮಿಯ ಭವಿಷ್ಯವನ್ನೇ ಬುಡಮೇಲು ಮಾಡುತ್ತಿರುವ ದೊಡ್ಡ ಅಪಾಯ. ಇದನ್ನು ನಿಭಾಯಿಸಬಲ್ಲ ಪಾರಂಪರಿಕ ವಿವೇಕ ಹಾಗೂ ವಿಜ್ಞಾನದ ಕಿವಿಮಾತು-ಎರಡನ್ನೂ ಧಿಕ್ಕರಿಸಿ ಸರ್ಕಾರಗಳು ಈಗ ಸಾಗುತ್ತಿವೆ! ಇದರಿಂದಾಗಿ ವಾತಾವರಣ ಕುದಿಯುವ ಸ್ಥಿತಿಗೆ ತಲುಪುತ್ತಿದ್ದು, ಭವಿಷ್ಯದ ಬದುಕು ಬೇಯದೆ ಇನ್ನೇನಾದೀತು?

ಚುರುಮುರಿ



'ಲವ್ ಡ್ರಾಪ್' ಲಂಚ!

• ಚಂದ್ರಕಾಂತ ವಡ್ಡು

ಸಾರಕ್ಕಿ ಕೆರೆದಂಡೆಯಲ್ಲಿ ವಾರದ ನಂತರ ಸಿಕ್ಕ, ತಿಂಗಳೇಶನ ವಾಕಿಂಗ್ ಸಂಗಾತಿ ಸಂಪು. ಪೂರ್ತಿ ಹೆಸರು ಸಂಪತ್ ಕುಮಾರ್. ಆತನ ಬೇರೆ ಸಂಪತ್ತು ಗೊತ್ತಿಲ್ಲ, ಆದರೆ ಜ್ಞಾನಸಂಪತ್ತು ಮಾತ್ರ ಸದಾ ತುಂಬಿ ತುಳುಕುತ್ತಿರುತ್ತದೆ. ಕೇಳುಗರು ಸಂಪು ಜೊತೆಗೆ ಕೆರೆಯನ್ನು ಎರಡು ರೌಂಡ್ ಹಾಕುವಷ್ಟರಲ್ಲಿ ಬಾರಿನಲ್ಲಿ ಆರು ರೌಂಡ್ ಹಾಕಿದಷ್ಟು ಕಿಕ್ ಅನುಭವಿಸುತ್ತಾರೆ. ಎಷ್ಟೊತ್ತು ಪಂಪು ಮಾಡಿದರೂ ಖಾಲಿಯಾಗದ ಮಾತಿನ ಸಂಪು ಅದು.

'ಏನೂ... ಬಹಳ ದಿನಗಳಿಂದ ಕಾಣಲಿಲ್ಲ?'

'ಥ್ರೋಟ್ ಇನ್‌ಫೆಕ್ಷನ್ ಆಗಿತ್ತು ಗುರೂ. ಆ ಅರವಿಂದ ಡಾಕ್ಟ್ರು ನಾಲ್ಕು ದಿನ ಮಾತಾಡಬಾರದು ಅಂತ ಕಂಡೀಷನ್ ಹಾಕೋದಾ!'

'ಹೌದು ಬಿಡು, 'ವಾಕ್' ಸ್ವಾತಂತ್ರ್ಯ ಇಲ್ಲದಮೇಲೆ ಬರೀ 'ವಾಕಿಂಗ್' ಮಾಡಿ ಏನು ಪ್ರಯೋಜನ?'

'ಇವೊತ್ತೂ ಬರುವಂತಿರಲಿಲ್ಲ... ನನ್ನ ಗೃಹಲಕ್ಷ್ಮಿ ಮೊಬೈಲಿನಲ್ಲಿ ಐದೂವರೆಗೇ 'ವಾಕಪ್ ಕಾಲ್' ಸೆಟ್ ಮಾಡಿಟ್ಟದ್ದಳು. ಅದಕ್ಕೇ ಎದ್ದು ಬಂದೆ'.

'ನಿನಗೇಕೆ ಥ್ರೋಟ್ ಇನ್‌ಫೆಕ್ಷನ್ ಆಯ್ತು ಮಾರಾಯ?'

'ಅದೇ ಆ ಕಾಂತಪ್ಪನಿಗೆ ಅರವತ್ತು ವರ್ಷ ಆದುವಂತೆ. ಸಿಕ್ಸ್‌ಟಿ ಕೊಡುಸ್ತೀನಿ ಬಾ ಅಂತ ಕರೆದೊಯ್ದ. 'ಸಿಕ್ಸ್‌ಟಿ ಸಾಕೇ, ನೈನ್ಟಿ ಓಕೆ' ಎಂದು ಹುರಿದುಂಬಿಸಿದೆ. ಕೊನೆಗದು ಒನ್ ಎಯ್ಟಿಗೆ ಎಳೆಯಬೇಕೇ?'

'ತಪ್ಪೇನಿಲ್ಲ... ಅಧಿಕಾರಸ್ಥರ ಪರ್ಸೆಂಟೇಜ್ ಮತ್ತು 'ಮದ್ಯಸ್ಥರ' ಪೆಗ್ ಲೆಕ್ಕ ಎಲ್ಲಿಗೆ ಮುಟ್ಟುತ್ತೋ ಹೇಳೋಕ್ಕಾಗಲ್ಲ'.

'ನೀನೇನೇ ಹೇಳು, ಅಧಿಕಾರಸ್ಥರ ಲೆಕ್ಕದಲ್ಲಿ ಒಂದು ಶಿಸ್ತೇ ಇಲ್ಲ. ಮೊದಲು ಫಾರ್ಟಿ ಪರ್ಸೆಂಟ್ ಅಂದ್ರು ನಂತರ ಫಿಫ್ಟಿಗೆ ಏರಿಸಿದರು. ನಮ್ಮ ಮದ್ಯಸ್ಥರ ನಡುವೆ ಲೆಕ್ಕಾಚಾರದ ಶಿಸ್ತು ತಪ್ಪುವುದೇ ಇಲ್ಲ. ಥರ್ಟಿ ಅಥವಾ ಸಿಕ್ಸ್‌ಟಿ ಇಂದ ಆರಂಭವಾಗಿ, ಅದೇ ಗುಣಾಕಾರದಲ್ಲಿ ಮುಂದುವರಿಯುತ್ತದೆ. ಕೊನೆಗೆ ಲವ್ ಡ್ರಾಪ್ ಹೆಸರಿನಲ್ಲಿ ಹದಿನೈದು ಎಂಎಲ್ ಎಕ್ಸ್‌ಟ್ರಾ ಬೀಳಬಹುದಷ್ಟೇ!'

'ಈಗ ವಿವಾದ ಹುಟ್ಟಿರೋದು ಆ 'ಲವ್ ಡ್ರಾಪ್' ಲಂಚದ ಪ್ರಮಾಣದಲ್ಲೇ...' ತಿಂಗಳೇಶ 'ವಾಕ್' ಮುಗಿಸಿದ!

ದಿನದ ಟ್ವೀಟ್

ಹೃದಯದ ಆರೋಗ್ಯ: ಬೇಕು ಎಚ್ಚರ



ಹೃದಯ ಸ್ತಂಭನದ ಪ್ರಕರಣಗಳು ಹಿಂದೆಂದಿಗಿಂತ ಈಗ ಹೆಚ್ಚು ಸಾಮಾನ್ಯ ಎಂಬಂತಾಗಿವೆ. ಈ ಕೆಳಗಿನವುಗಳಿಗೆ ಅಂತ್ಯ ಹೇಳಬೇಕಾದ ಸಮಯ ಬಂದಿದೆ: –ಅದು ಯಾರಿಗೋ ಸಂಭವಿಸುತ್ತದೆ ಎಂದುಕೊಳ್ಳುವುದು –ಧೂಮಪಾನದಂತಹ ದುರಭ್ಯಾಸಗಳ ಜೀವನಶೈಲಿಯನ್ನು ಮುಂದುವರಿಸುತ್ತಾ ಹೋಗುವುದು –ಆರೋಗ್ಯ ತಪಾಸಣೆ ನಡೆಸಬೇಕಾದುದು ವೃದ್ಧರಿಗೆ ಮಾತ್ರ ಅಂದುಕೊಳ್ಳುವುದು. ಅಂದಹಾಗೆ, ನಿಮ್ಮ ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ನಿಮಗಷ್ಟೇ ಸಾಧ್ಯ.

ಡಾ. ದೇವಶಿಶ್ ಪಾಲ್ಕರ್, ಮನೋವೈದ್ಯ

ಕಿಡಿನುಡಿ



ಪಾಕಿಸ್ತಾನ ಕ್ರಿಕೆಟ್ ತಂಡದ ಪರಂಪರೆಗೆ ಸಂಬಂಧಿಸಿದ ವಿಡಿಯೊದಿಂದ ಇಮ್ರಾನ್ ಖಾನ್ ಅವರನ್ನು ಹೊರಗಿಟ್ಟಿರುವುದು ಹಾಸ್ಯಾಸ್ಪದ. ಭಾರತದ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಕಪಿಲ್ ಅಥವಾ ಧೋನಿ ಅವರಿಲ್ಲದ ಸಾಕ್ಷ್ಯಚಿತ್ರವನ್ನು ಕಲ್ಪಿಸಿಕೊಳ್ಳಿ!

ಜಾಯ್ ಭಟ್ಟಾಚಾರ್ಯ, ಕ್ರೀಡಾ ಲೇಖಕ

25 ವರ್ಷಗಳ ಹಿಂದೆ

ಸೋಮವಾರ, 17-8-1998

● **ಲಂಚ: ಜಯಲಲಿತಾ ಆರೋಪ ಪ್ರಧಾನಿ ಕಾರ್ಯಾಲಯ ನಿರಾಕರಣೆ**

ನವದೆಹಲಿ, ಆ. 16 (ಪಿಟಿಐ, ಯುಎನ್‌ಐ)– ಜಾರಿ ನಿರ್ದೇಶನಾಲಯದ ನಿರ್ದೇಶಕ ಎಂ.ಕೆ. ಬೆಜ್ ಬರುವಾ ಅವರ ವರ್ಗಾವಣೆಗಾಗಿ ಪ್ರಧಾನಿಯವರಿಗೆ ಬಹಳ ಹತ್ತಿರವಾದ ವ್ಯಕ್ತಿಗಳಿಗೆ ಭಾರಿ ಮೊತ್ತದ ಲಂಚ ನೀಡಲಾಗಿದೆ ಎಂಬ, ಅಣ್ಣಾ ಡಿಎಂಕೆ ನಾಯಕಿ ಜಯಲಲಿತಾ ಅವರ ಆಪಾದನೆಯನ್ನು ಪ್ರಧಾನಿ ಕಾರ್ಯಾಲಯ ಅಲ್ಲಗಳೆದಿದೆ.

ಇತ್ತೀಚಿನ ವರ್ಗಾವಣೆ ಕೇವಲ ಸಾಮಾನ್ಯ ಸ್ವರೂಪದ ಆಡಳಿತಾತ್ಮಕ ಕ್ರಮ. 'ಯಾರನ್ನೋ ಬಲಿಪಶು ಮಾಡುವ ಅಥವಾ ಇನ್ನಾರದೋ ಮನವೊಲಿಸಲು' ಕೈಗೊಂಡ ಕ್ರಮವಲ್ಲ ಎಂದು ಪ್ರಧಾನಿ ಕಾರ್ಯಾಲಯದ ಮೂಲಗಳು ಹೇಳಿವೆ.

'ಇದರ ಹಿಂದೆ ಮುಚ್ಚಿಡುವಂತಹದು ಏನೇನೂ ಇಲ್ಲ. ಸಾಮಾನ್ಯವಾದ ಕ್ರಮ. ಜಯಲಲಿತಾ ಅವರ ಆರೋಪ ದುರದೃಷ್ಟಕರ ಹಾಗೂ ಆಧಾರರಹಿತ' ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 17-8-1973

● **ರಾಜ್ಯ ರಾಜಕೀಯ ಸಮಸ್ಯೆ ಪ್ರಧಾನಿವರೆಗೆ ಒಯ್ಯದೆ ಇಲ್ಲೇ ಪರಿಹರಿಸಲು ಯತ್ನ**

ಬೆಂಗಳೂರು, ಆ. 16– ಉದ್ಭವವಾಗಬಹುದಾದ ರಾಜಕೀಯ ಸಮಸ್ಯೆಗಳನ್ನು ರಾಜ್ಯ ಮಟ್ಟದಲ್ಲೇ ಪರಿಹರಿಸಲು ಪ್ರಯತ್ನಿಸಿ ಪ್ರಧಾನಿಗೆ ತೊಂದರೆ ಕೊಡದಿರುವ ನೀತಿಯನ್ನು ಮುಖ್ಯಮಂತ್ರಿ ಶ್ರೀ ಅರಸು ಅವರು ಅನುಸರಿಸಿಕೊಂಡು ಬಂದಿದ್ದಾರೆ.

'ರಾಜ್ಯದ ರಾಜಕೀಯ ಸಮಸ್ಯೆಗಳನ್ನು ತಮಗೆ ಒಡ್ಡದಿರುವವರು ನೀವು ಒಬ್ಬರೆ ಎಂದು ಪ್ರಧಾನಿ ನಿಮಗೆ ಮೆಚ್ಚುಗೆ ವ್ಯಕ್ತಪಡಿಸಿದರೇ?' ಎಂದು ವರದಿಗಾರರೊಬ್ಬರು ಕೇಳಿದಾಗ, ಪ್ರಧಾನಿ ಅವರನ್ನು ಕಂಡು ಬೆಳಿಗ್ಗೆ ನಗರಕ್ಕೆ ಹಿಂದಿರುಗಿದ ಮುಖ್ಯಮಂತ್ರಿಗಳು 'ಸಾಮಾನ್ಯವಾಗಿ ರಾಜ್ಯದ ಸಮಸ್ಯೆಗಳನ್ನು ಪ್ರಧಾನಿಗೆ ಒಡ್ಡುವುದಿಲ್ಲ. ಇಲ್ಲೇ ಪರಿಹರಿಸಲು ಪ್ರಯತ್ನಿಸುತ್ತೇನೆ. ಅಗತ್ಯಬಿದ್ದರೆ ಮಾತ್ರ ಹೈಕಮಾಂಡಿನ ಸಹಾಯವನ್ನು ಪಡೆಯುತ್ತೇನೆ. ಸಾಮಾನ್ಯವಾಗಿ ಇಲ್ಲೇ ನಾವೇ ಪರಿಹರಿಸಲು ಪ್ರಯತ್ನಿಸುತ್ತೇವೆ' ಎಂದರು.

● **ಮಲ ಹೊರುವ ಹೇಯ ಪದ್ಧತಿ ರಾಜ್ಯದಲ್ಲಿ ಅಂತ್ಯ**

ಬೆಂಗಳೂರು, ಆ. 16– ಶತಮಾನಗಳಿಂದ ಮಾನವ ಗೌರವಕ್ಕೆ ಕಳಂಕವಾಗಿದ್ದ ಮಲ ಹೊರುವ ಪದ್ಧತಿ ಆಗಸ್ಟ್ 15ರಿಂದ ರದ್ದಾಗಿ, ಮೈಸೂರು ರಾಜ್ಯ ಒಂದು ಐತಿಹಾಸಿಕ ಹಾಗೂ ಸ್ಮರಣೀಯ ಹೆಜ್ಜೆಯನ್ನಿಟ್ಟಿದೆ.

ಈ ಅನಾಗರಿಕ ಪದ್ಧತಿಯ ನಿರ್ಮೂಲನಕ್ಕಾಗಿ ಕ್ರಮ ಕೈಗೊಂಡುದು ಇಡೀ ಭಾರತದಲ್ಲಿ ರಾಜ್ಯ ಸರ್ಕಾರ ಪ್ರಥಮವಾದುದು.

ಜಾಡಮಾಲಿಗೆ ಬದಲಾಗಿ 'ಪೌರ ಕಾರ್ಮಿಕ' ಎಂಬ ಹೊಸ ಗೌರವಾನ್ವಿತ ನಾಮಕರಣ ಹೊಂದಿರುವ ಇವರು ನಿನ್ನೆಯಿಂದ ಮಲ ತೆಗೆಯುವ ಕೆಲಸಕ್ಕೆ ಹೋಗುತ್ತಿಲ್ಲ. ಈ ಪದ್ಧತಿಯ ನಿರ್ಮೂಲನದ ಜೊತೆಗೆ ಎಲ್ಲ ನಗರಗಳಲ್ಲೂ ಫ್ಲಷ್‌ಔಟ್ ಕಕ್ಕಸುಗಳನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗುತ್ತಿದೆ.

ಸಂಗತ

ಗಾದೆಗೆ ಬೇಕಲ್ಲವೇ ಕಾಲನ ತಗಾದೆ?

ವಿನಾಕಾರಣ ಒಂದು ಜಾತಿ, ಧರ್ಮ, ಪಂಥ, ಪಂಗಡ, ವರ್ಗವನ್ನು ಕೀಳಾಗಿ ಕಾಣುವಂತಹ ಪದಗಳಿದ್ದರೆ ನಿಘಂಟಿನಿಂದ ಹಾಗೂ ಗಾದೆಗಳಿಂದ ತೆಗೆಯುವ ಕಾರ್ಯ ಆಗಬೇಕು

• ಯೋಗಾನಂದ

ಸಿನಿಮಾ ನಟರೊಬ್ಬರು ಇತ್ತೀಚೆಗೆ ಬಳಸಿದ ಗಾದೆಯೊಂದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ. ನಮಗೆ ಷೇಕ್ಸ್‌ಪಿಯರ್ ನಾಟಕಗಳನ್ನು ಬೋಧಿಸುತ್ತಿದ್ದ ಪ್ರೊ. ಎಸ್.ಎನ್.ಶಂಕರ್, ಶತಮಾನದಿಂದ ಶತಮಾನಕ್ಕೆ ಪದಗಳ ಅರ್ಥ ಬದಲಾಗಬಹುದು ಎಂದು ಆಗಿಂದಾಗ್ಗೆ ಹೇಳುತ್ತಿದ್ದರು. ನಾಲ್ಕು ಶತಮಾನಗಳ ಹಿಂದೆ 'suiter' ಅಂದರೆ ಭಿಕ್ಷುಕ, ಇಂದು ವಧುವಿಗೆ ತಕ್ಕ ವರ!

'ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು' ಎನ್ನುವ ಗಾದೆಯೇ ಇದೆ. ಪದಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸದಿದ್ದರೆ ಅಥವಾ ಉತ್ಪ್ರೇಕ್ಷಿತವಾಗಿ ಬಳಸಿದರೆ ರಂಪಕ್ಕೆ ಆಹ್ವಾನವಾಗುತ್ತದೆ. ಅರೆಬಿಯಾದ ಗಾದೆಯೊಂದು ನಾಲಗೆಯನ್ನು ಕುದುರೆಗೆ ಹೋಲಿಸುತ್ತದೆ. ನಾಲಗೆಯನ್ನು ಚೆನ್ನಾಗಿ ನೋಡಿಕೊಂಡರೆ ಅದು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತದೆ. ಪದಗಳೇ ಹೀಗೆ ಕಾಲಘಟ್ಟಕ್ಕೆ ರಾಜಿಯಾದರೆ ಗಾದೆಗಳ ಬಗ್ಗೆ ಹೇಳಬೇಕಿಲ್ಲ. ಹಾಗಾಗಿ ಕಾಲಧರ್ಮವನ್ನು ಅರಿತೇ ಮಾತನಾಡುವುದು ಜಾಣ್ಮೆ.

ಗಾದೆ ಅಂದಮಾತ್ರಕ್ಕೆ ಅದು ಸರ್ವವ್ಯಾಪಿ, ಸಾರ್ವಕಾಲಿಕ ಎಂದೇನಲ್ಲ. ಅದು ಎಲ್ಲ ಕಾಲಕ್ಕೂ ನಿಜವೂ ಆಗಬೇಕಿಲ್ಲ. ಅದು ಭವಿಷ್ಯವಾಣಿಯೂ ಅಲ್ಲ, ಮಾಯಾಸೂತ್ರವೂ ಅಲ್ಲ. ಸ್ವಾರಸ್ಯವೆಂದರೆ, ಗಾದೆಗಳೇ ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಗಾದೆಗಳಲ್ಲಿ ಅಲ್ಲಲ್ಲಿ ವೈರುಧ್ಯಗಳೂ ಕಾಣಸಿಗುತ್ತವೆ. ಒಂದು ನಿದರ್ಶನ ಗಮನಿಸಿ. ಹತ್ತು ಕೈಗಳು ಸೇರಿದರೆ ಕೆಲಸ ಕಾರ್ಯ ಸರಾಗ ಎನ್ನುತ್ತದೆ ಒಂದು ಗಾದೆ. ಹಲವು ಬಾಣಸಿಗರಿದ್ದರೆ ಅಡುಗೆ ಕೆಡುತ್ತದೆ ಅಂತ ಹೇಳುತ್ತದೆ ಇನ್ನೊಂದು ಗಾದೆ! ಮೌಢ್ಯ, ಅಂಧಾಚರಣೆ ಬಿತ್ತುವ ನುಡಿಗಟ್ಟುಗಳು ಧಾರಾಳ ಇವೆ. ಅವನ್ನು ಅನುಸಂಧಾನಿಸುವ ತಿಳಿವಳಿಕೆ ನಮಗಿರಬೇಕು. ಸಿಂಹಗಳು ಇತಿಹಾಸಕಾರರನ್ನು ಹೊಂದುವತನಕ ಬೇಟೆಗಾರರ ಸಾಹಸಗಳು ರಂಗುರಂಗಾಗಿರುತ್ತವೆ ಎಂದು ಒಂದು ಗಾದೆಯಿದೆ. ಸಾರ್ವಕಾಲಿಕ ಸತ್ಯವಾದ ಗಾದೆಗೆ ಇದೊಂದು ಉದಾಹರಣೆ.

ಸರ್ವದಾ ಭಾಷಿಕ, ಭೌಗೋಳಿಕ ಹಾಗೂ ಬಹುಸಂಸ್ಕೃತಿಯ ಅನುಭವಗಳು ನುಡಿಗಟ್ಟುಗಳನ್ನು ಪ್ರಭಾವಿಸಿರುತ್ತವೆ. ಒಂದೇ ಗಾದೆ ಬೇರೆ ಬೇರೆ ಭಾಷೆಗಳಲ್ಲಿ ಒಂದೇ ಅರ್ಥ, ಭಾವ ಅಭಿವ್ಯಕ್ತಿಸುತ್ತದೆ ಎಂದು ಭಾವಿಸಿದರೆ ಅದು ತಪ್ಪು ತಿಳಿವಳಿಕೆ ಆಗುತ್ತದೆ. 'ತಂತ್ರಜ್ಞಾನವು ಬದುಕನ್ನು ಸುಧಾರಿಸಬೇಕು, ಬದುಕೇ ತಂತ್ರಜ್ಞಾನ ಆಗಬಾರದು', 'ಮೊಬೈಲ್ ನಮ್ರ ಸೇವಕ, ಆದರೆ ಅಪಾಯಕಾರಿ ನಾಯಕ', 'ತಾಸಿಗೊಂದು ಸೆಲ್ಫಿಯಿದ್ರೆ ಮಿತ್ರರು ದೂರ'- ಇವು ಬದುಕನ್ನು ಪ್ರತಿನಿಧಿಸಬಲ್ಲ ನಗರ ನುಡಿಗಟ್ಟುಗಳು ಎನ್ನಬಹುದಲ್ಲ? ಮಾತು ಮನೆಯನ್ನು ಕಟ್ಟಬಹುದು, ಕೆಡಿಸಲೂ ಬಹುದು. ಆಡುವವರನ್ನು ಅದು ಅವಲಂಬಿಸಿದೆ. ಯಾರೊಬ್ಬರ ಸ್ವತ್ತೂ ಅಲ್ಲದ ಬುದ್ಧಿವಂತಿಕೆಯ ಮೌಖಿಕ ಪ್ರಕಾರವಾದ ಗಾದೆ ಜಾಗತಿಕ ಜನನಿರ್ಮಿತಿ.

ಆಡು ಮುಟ್ಟದ ಸೊಪ್ಪಿಲ್ಲ, ಗಾದೆಗಳು ಒಳಗೊಳ್ಳದ ವಿಷಯವಿಲ್ಲ. ಸುಖ, ದುಃಖ ಪ್ರಶಂಸೆ, ದೌರ್ಬಲ್ಯ, ಎಚ್ಚರಿಕೆ, ಆರೋಗ್ಯ, ಉಳಿತಾಯ, ಬೀಗು, ಪರಿಸರ, ಕೋಪ, ಸೌಂದರ್ಯ... ಒಂದೇ? ಎರಡೇ? ಹಾಸ್ಯವಂತೂ ಪ್ರತಿಯೊಂದು ಗಾದೆಯಲ್ಲೂ ಮೇಲ್ಮೈಸಿಯೇ ಇರುತ್ತದೆ. ಆಯಾ ಸಾಮಾಜಿಕ ಸಂದರ್ಭ ಗಮನದಲ್ಲಿ ಇಟ್ಟುಕೊಂಡು ಗಾದೆಗಳ ಬಳಕೆಯಾದರಷ್ಟೇ ಅವುಗಳ ಮೊನಚು ಸಾರ್ಥಕ. ಊಟಕ್ಕೆ ಕೂತವರೊಬ್ಬರು ಅದೇಕೊ ಚಡಪಡಿಸುತ್ತಾರೆ. ಆತಿಥೇಯರ ಬಳಿ ಕೊರತೆ ಹೇಳಲು ಸಂಕೋಚ. ಕಡೆಗೆ ಯೋಚಿಸಿಯೇ ಹೇಳಿದ್ದೇನು? ಪಲ್ಯ ಕೊಂಚ ಸಮುದ್ರಕ್ಕೆ ಹತ್ತಿರವಾಗಿದೆ ಎಂದು! ಅಪ್ರಿಯವಾದರೂ ನಯವಾದ ಮಾತಿನಲ್ಲಿ ಹೇಳುವುದೆಂದರೆ ಇದೇ ಅಲ್ಲವೆ?

ದೊರೆ ಸಾಲೊಮನ್ ಒಟ್ಟು 3,000 ಗಾದೆಗಳನ್ನು ಉಪಯೋಗಿಸಿ ಬದುಕಿನ ಸಂಗತಿಗಳನ್ನು ಪ್ರಸ್ತಾಪಿಸುತ್ತಿದ್ದುದಕ್ಕೆ ಪುರಾವೆಯಿದೆ. ಲಿಖಿತ ಸಾಹಿತ್ಯವಿಲ್ಲದ ಸಂಸ್ಕೃತಿಗಳಲ್ಲಿ ಗಾದೆಗಳು ಜ್ಞಾನ, ಮೌಲ್ಯಗಳನ್ನು ಒದಗಿಸುತ್ತವೆ. 'ಸಾರಯುಕ್ತವೂ ಸಂಕ್ಷಿಪ್ತವೂ ಆದ ವಿವೇಕದ ಗುಳಿಗೆಗಳು', 'ಅರಿವಿನ ಜೀವಂತ ಪಳೆಯುಳಿಕೆಗಳು', 'ಮಾತಿಗೊಂದು ಗಾದೆ' ಮುಂತಾಗಿ ಸಾಗುತ್ತವೆ ಗಾದೆಗಳ ಕುರಿತ ಹೊಗಳಿಕೆಗಳು. ಗಾದೆಗಳ ಈ ವಿಶೇಷಣಗಳಿಗೆ ಭಂಗವಾಗಬಾರದು, ಯಾರನ್ನೂ ಅವು ನೋಯಿಸಬಾರದು, ನಿರ್ಭಯವಾಗಿ, ನಿರಾತಂಕವಾಗಿ ಅವನ್ನು ಬಳಸುವಂತಿರಬೇಕು, ಈ ಮೂರು ಅಂಶಗಳನ್ನೂ ದೃಷ್ಟಿಯಲ್ಲಿ ಇರಿಸಿಕೊಂಡು ಒಟ್ಟಂದದಲ್ಲಿ ಗಾದೆಗಳನ್ನು ಪರಿಷ್ಕರಿಸುವ ಅಗತ್ಯವಿದೆ.



ಇಂದು ಬಳಕೆಯಲ್ಲಿಲ್ಲದ, ವಿನಾಕಾರಣ ಒಂದು ಜಾತಿ, ಧರ್ಮ, ಪಂಥ, ಪಂಗಡ, ವರ್ಗವನ್ನು ಕೀಳಾಗಿ ಕಾಣುವಂತಹ ಪದಗಳಿದ್ದರೆ ನಿಘಂಟಿನಿಂದ ಹಾಗೂ ಗಾದೆಗಳಿಂದ ತೆಗೆಯುವ ಕಾರ್ಯ ಆಗಬೇಕು. ಹೇಗೂ ಗಾದೆಗಳು ಜನರಿಂದ ಜನರಿಗಾಗಿ ನಿರ್ಮಿಸಿದ ಆಡುಮಾತುಗಳು. ಅವು ನಿಯಮವೂ ಅಲ್ಲ, ಕಟ್ಟಲೆಯೂ ಅಲ್ಲ, ಜನರ ವರ್ತನೆಗಳು ತಲುಪಬಹುದಾದ ಅತಿರೇಕ, ಎಸಗುವ ಪ್ರಮಾದಗಳನ್ನು, ತೋರುವ ಆತುರ ಕಾತರವನ್ನು ವಿಮರ್ಶಿಸುವ ಲಘು ನುಡಿಗಳು.

ಆಡುಮಾತು ಆಡಿಕೊಳ್ಳುವ ಮಾತಾಗದಂತೆ, ಬಹು ಜಾಗರೂಕತೆ ವಹಿಸಬೇಕು. ಚೆನ್ನಾಗಿ ಆಲೋಚಿಸುವ ಭಾಗವೆಂದರೆ, ಆಡುವ ಮೊದಲು ಆಲೋಚಿಸುವುದೇ. ಇದರಿಂದ ನಾವು ಉಪಯೋಗಿಸುವ ಪದ, ಒಕ್ಕಣೆಗಳ ಪರಿಣಾಮಗಳನ್ನು ವಿಚಾರ ಮಾಡಲು ಸಮಯ ದೊರೆಯುವುದು. ಬಳಸುವ ಉಕ್ತಿಗಳು ನಮ್ಮ ಅಸ್ಮಿತೆ, ಮನೋಭಾವ, ಸೂಕ್ಷ್ಮತೆಯನ್ನು ನಿರ್ವಚಿಸುತ್ತವೆ. ಪದಗಳ ಆಯ್ಕೆ ನಮ್ಮ ವಿವೇಕ ಅಥವಾ ಅಜ್ಞಾನದ ಸೂಚಕವೂ ಹೌದು.

ಮಾತನಾಡಲು ಹೊರಟಿದ್ದೇನಲ್ಲ, ಅದು ಮೌನಕ್ಕಿಂತ ಉತ್ತಮ ಎಂದು ಖಾತರಿಪಡಿಸಿಕೊಂಡೇ ಮಾತಿಗೆ ಮುಂದಾಗುವುದು ರಾಜಮಾರ್ಗ. ಬಡಿಸುವ ಮುನ್ನ ಪರಮಾನ್ನ, ಪಾಯಸದ ರುಚಿ ನೋಡುವುದಕ್ಕೆ ಈ ಜೋಕೆಯನ್ನು ಹೋಲಿಸಬಹುದೆನ್ನಿ.

ವಾಚಕರ ವಾಣಿ

ಈಗೇಕೆ ಉರುಳಿಸುವ ಮಾತು?

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಇನ್ನೂ ನೂರು ದಿನ ಆಗಿಲ್ಲ. ಆಗಲೇ 'ಸರ್ಕಾರ ಉರುಳಲಿದೆ' ಎಂಬ ಮಾತು ಹರಿದಾಡತೊಡಗಿದೆ. ಸಾಂವಿಧಾನಿಕವಾಗಿ ಆರಿಸಿ ಬಂದಿರುವ ಸರ್ಕಾರವನ್ನು ಉರುಳಿಸುವ ಪ್ರಯತ್ನ ಅಸಾಂವಿಧಾನಿಕ ಆಗುತ್ತದೆ. ಪ್ರಜಾಪ್ರಭುತ್ವದ ಹತ್ಯೆ ಎಂದು ಕೂಡ ಹೇಳಬಹುದು. ವಿರೋಧ ಪಕ್ಷಗಳು ರಚನಾತ್ಮಕ ನೆಲೆಯಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸರ್ಕಾರ ಉರುಳಿಸುವ ಮಾತುಗಳು ತರವಲ್ಲ.

ಸಾಂವಿಧಾನಿಕವಾಗಿ ಆಯ್ಕೆಯಾದ ಸರ್ಕಾರವನ್ನು ಆಡಳಿತ ನಡೆಸಲು ಬಿಡಬೇಕು. ಪಕ್ಷಾಂತರ, ಮರು ಚುನಾವಣೆ, ಭ್ರಷ್ಟಾಚಾರ, ಸರ್ಕಾರದ ಕೆಲಸ ಕುಂಠಿತ, ಜನತೆಯ ನೋವು, ನಿರಾಶೆ, ಅರಾಜಕತೆಯಂತಹ ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ಯೋಚಿಸದಿದ್ದರೆ ಪ್ರಜಾಪ್ರಭುತ್ವ ಅರ್ಥ ಕಳೆದುಕೊಳ್ಳುತ್ತದೆ. ಬಿಜೆಪಿಯವರಿಗೆ 'ಆಪರೇಷನ್ ಕಮಲ' ಒಂದು ದುರಭ್ಯಾಸವಾಗಿದೆ. ಈ ಪ್ರವೃತ್ತಿ ರಾಜ್ಯಕ್ಕೆ ಮಾರಕ. ಪ್ರಜಾಪ್ರಭುತ್ವ, ಅಭಿವೃದ್ಧಿ ಎಂಬ ಪದಗಳು ಸವಕಲಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಎಂ.ಕೆ.ವಾಸುದೇವರಾಜು, ಬೆಂಗಳೂರು

ಸುಲಭವಾಗಿ ಲಭ್ಯವಾಗಲಿ 'ಶುಚಿ' ನ್ಯಾಪ್ಕಿನ್

ವಿದ್ಯಾರ್ಥಿನಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್ಕಿನ್ ವಿತರಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಪುನರಾರಂಭಿಸಲಿರುವುದು ಶ್ಲಾಘನೀಯ. ಆದರೆ ಶಾಲಾ ಕಾಲೇಜುಗಳಲ್ಲಿ ನ್ಯಾಪ್ಕಿನ್ ಕಿಟ್ ಅನ್ನು ಹಾಳೆಯಲ್ಲಿ ಸುತ್ತಿಕೊಟ್ಟರೂ ಇವುಗಳನ್ನು ತೆಗೆದುಕೊಳ್ಳಲು ಕೆಲವು ವಿದ್ಯಾರ್ಥಿನಿಯರು ಮುಜುಗರಪಡುವ ಸಂಭವ ಇರುತ್ತದೆ. ಕಾಲೇಜುಗಳಲ್ಲಿ ಶುಚಿ ಯೂನಿಟ್ ವಿತರಿಸುವುದರೊಂದಿಗೆ ಸರ್ಕಾರಿ ಆಸ್ಪತ್ರೆಯ ಮಹಿಳಾ ವಾರ್ಡ್ ಅಥವಾ ಗರ್ಭಿಣಿಯರ ತಪಾಸಣೆ ಮಾಡುವ ಕೋಣೆ, ಅಂಗನವಾಡಿ ಕೇಂದ್ರ, ಸ್ತ್ರೀ ಶಕ್ತಿ ಸಂಘಗಳ ಸದಸ್ಯರು ಸೇರುವ ಸ್ಥಳ, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿರುವ ಮಹಿಳಾ ವಿಶ್ರಾಂತಿ ಕೊಠಡಿಗಳಲ್ಲೂ ನ್ಯಾಪ್ಕಿನ್‌ಗಳು ದೊರೆಯುವಂತೆ ಮಾಡಬೇಕು. ಇದರಿಂದ ಹೆಚ್ಚಿನ ಮಟ್ಟದಲ್ಲಿ ಈ ಯೋಜನೆಯು ಹೆಣ್ಣುಮಕ್ಕಳಿಗೆ ತಲುಪಿ ಅವರ ಆರೋಗ್ಯ ಸುಧಾರಣೆಗೆ ಸಹಕಾರಿಯಾಗಬಲ್ಲದು.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಬೇಕಾಗಿದೆ ಸಾಂಸ್ಕೃತಿಕ ಯುವ ಬ್ರಿಗೇಡ್

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯ ವೇಳೆ ಧ್ವಜಾರೋಹಣ ಮಾಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಹಳಷ್ಟು ಜನಪರ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ಪ್ರಯತ್ನಿಸುವುದಾಗಿ ತಿಳಿಸಿದ್ದಾರೆ. ಅವರ ಆಶಯವನ್ನು ಸ್ವಾಗತಿಸುತ್ತಲೇ, ಕರ್ನಾಟಕ ಸಾಂಸ್ಕೃತಿಕ ಯುವ ಬ್ರಿಗೇಡ್ ಸ್ಥಾಪನೆಗೆ ಒತ್ತಾಯಿಸಬೇಕಿದೆ. ಕಾರಣವಿಷ್ಟೇ, ಕೆ.ಎಂ.ಮುನಿಕೃಷ್ಣಪ್ಪ ರಚನೆಯ 'ದೇಶಪ್ರೇಮಿ ಸುರಪುರದ ವೆಂಕಟಪ್ಪ ನಾಯಕ' ನಾಟಕವನ್ನು ಸಿ.ಜಿ.ಕೆ. ನಿರ್ದೇಶನ ಮಾಡಿದ್ದರು. ದೇಸಿ ರಾಜರು, ಆಳ್ವಿಕೆ ನಡೆಸಿದ ಪಾಳೇಗಾರರು, ತಮ್ಮ ಸಂಸ್ಥಾನ ಉಳಿಸಿಕೊಳ್ಳಲು ಹೋರಾಟ ನಡೆಸಿದ ಸ್ಥಳೀಯ ವೀರರನ್ನು ಕರ್ನಾಟಕ ಸೇರಿದಂತೆ ಅದರ ಗಡಿಯಾಚೆಗೆ ಪ್ರದರ್ಶಿಸಿ ಪರಿಚಯಿಸುವುದೇ ಈ ನಾಟಕವನ್ನು ರೂಪಿಸಿದ ಸಿ.ಜಿ.ಕೆ. ಅವರ ಮುಖ್ಯ ಉದ್ದೇಶ ಆಗಿತ್ತು. ಈ ಹಿನ್ನೆಲೆಯಲ್ಲಿ ಈ ಪ್ರಯೋಗ ಗಮನ ಸೆಳೆಯಿತು.

ವರ್ತಮಾನದಲ್ಲಿ ಸಿ.ಜಿ.ಕೆ. ಅವರ ಕಲ್ಪನೆಯು ವಿಸ್ತೃತ ರೂಪ ಪಡೆಯಬೇಕಿದೆ. ಸಂಗೊಳ್ಳಿ ರಾಯಣ್ಣ, ಮದಕರಿ ನಾಯಕರಂತಹ ವೀರರನ್ನು ರಾಜ್ಯದ ಒಳಗೆ ಹಾಗೂ ಹೊರಗೆ ಪರಿಚಯಿಸಲು 'ಕರ್ನಾಟಕ ಸಾಂಸ್ಕೃತಿಕ ಯುವ ಬ್ರಿಗೇಡ್' ಸ್ಥಾಪನೆಗೆ ಸರ್ಕಾರ ಮುಂದಾಗಬೇಕಿದೆ. ಇದರಿಂದ ಸ್ಥಳೀಯ ಸ್ವಾತಂತ್ರ್ಯ ಸಂಗ್ರಾಮವು ದೇಶದ ಭೂಪಟದಲ್ಲಿ ಮಾನ್ಯತೆ ಪಡೆಯಲು ಅವಕಾಶವಾಗುತ್ತದೆ.

ಆರ್.ವೆಂಕಟರಾಜು, ಬೆಂಗಳೂರು

ದಾರಿದೀಪವಾಗಬೇಕಿದೆ ಪಾಠಕ್ ಆದರ್ಶ

ಭಾರತದಲ್ಲಿ ಸುಲಭ್ ಶೌಚಾಲಯಗಳ ನಿರ್ಮಾಣದ ಮೂಲಕ ನೈರ್ಮಲ್ಯ ಕಾಪಾಡುವಲ್ಲಿ ಮತ್ತು ಶುಚಿಯಾದ ಪರಿಸರ ನಿರ್ಮಾಣ ಮಾಡುವಲ್ಲಿ ಕ್ರಾಂತಿಕಾರಕ ಹೆಜ್ಜೆಯಿಟ್ಟಿದ್ದ 'ಸುಲಭ್ ಇಂಟರ್‌ನ್ಯಾಷನಲ್' ಸಾಮಾಜಿಕ ಸೇವಾ ಸಂಸ್ಥೆಯ ಸಂಸ್ಥಾಪಕ ಹಾಗೂ ಸಾಮಾಜಿಕ ಕಾರ್ಯಕರ್ತ ಬಿಂದೇಶ್ವರ್ ಪಾಠಕ್ ಅವರು ನಮ್ಮನ್ನು ಅಗಲಿರುವುದು ನೋವಿನ ಸಂಗತಿ. ಮಲ ಹೊರುವ ಪದ್ಧತಿಯು ಮಾನವ ಘನತೆಗೆ ತಕ್ಕುದಲ್ಲ ಎಂಬುದನ್ನು ಮನಗಂಡ ಪಾಠಕ್ ಅವರು, ಅದನ್ನು ನಿರ್ಮೂಲಗೊಳಿಸಲು ಹಾಗೂ ಭಂಗಿಗಳ ಬಗ್ಗೆ ಇದ್ದ ಸಾಮಾಜಿಕ ತಿರಸ್ಕಾರಗಳನ್ನು ತೊಡೆದುಹಾಕಲು ಜೀವನದುದ್ದಕ್ಕೂ ಶ್ರಮಿಸಿದರು. ಶೌಚಕ್ಕೆ ಸಂಬಂಧಿಸಿ ಅವರು ನಡೆಸಿದ ವಿವಿಧ ಪ್ರಯೋಗಗಳು ಹಾಗೂ ಮಲ ಹೊರುವ ಪದ್ಧತಿಯ ವಿರುದ್ಧ ನಡೆಸಿದ್ದ ಹೋರಾಟ ದೇಶದ ಗಮನ ಸೆಳೆದಿತ್ತು.

ಟೂ ಪಿಟ್ ತಂತ್ರಜ್ಞಾನವನ್ನು ಬಳಸಿಕೊಂಡು ದೇಶದಾದ್ಯಂತ ಕಡಿಮೆ ಬೆಲೆಯಲ್ಲಿ ಲಕ್ಷಾಂತರ ಶೌಚಾಲಯಗಳನ್ನು ಸುಲಭ್ ನಿರ್ಮಿಸಿದೆ. ವಿಶೇಷವೆಂದರೆ, 2016ರಲ್ಲಿ ಅಮೆರಿಕದ ನ್ಯೂಯಾರ್ಕ್‌ನ ಮೇಯರ್ ಅವರು ಪಾಠಕ್ ಗೌರವಾರ್ಥವಾಗಿ 'ಏಪ್ರಿಲ್ 14' ಅನ್ನು ಬಿಂದೇಶ್ವರ್ ಪಾಠಕ್ ದಿನವನ್ನಾಗಿ ಘೋಷಿಸಿದ್ದರು. ಮಾನವ ಹಕ್ಕುಗಳು, ಪರಿಸರ ನೈರ್ಮಲ್ಯ, ಅಸಾಂಪ್ರದಾಯಿಕ ಇಂಧನ ಮೂಲಗಳ ಮಹತ್ವ, ತ್ಯಾಜ್ಯ ನಿರ್ವಹಣೆ ಕುರಿತು ವಿವಿಧ ಕಾರ್ಯಕ್ರಮಗಳ ಮುಖಾಂತರ ಪಾಠಕ್ ಅವರು ಜನರಿಗೆ ಮಾಹಿತಿ ನೀಡುತ್ತಿದ್ದರು. ಅಮೆರಿಕದಲ್ಲಿ ಕಪ್ಪು ವರ್ಣದವರಿಗಾಗಿ ಅಬ್ರಹಾಂ ಲಿಂಕನ್ ಏನು ಮಾಡಿದರೋ ಭಾರತದ ಭಂಗಿಗಳಿಗೆ ಪಾಠಕ್ ಅದನ್ನೇ ಮಾಡಿದರು. ಈ ದಿಸೆಯಲ್ಲಿ ಬಿಂದೇಶ್ವರ್ ಪಾಠಕ್ ಅವರಂತಹ ಆದರ್ಶ ವ್ಯಕ್ತಿಗಳ ಆಲೋಚನೆಗಳು ನಮ್ಮ ಬದುಕಿಗೆ ಇಂದು ಅವಶ್ಯವಾದ ದಾರಿದೀಪಗಳು.

ಬಾಬು ಶಿರಮೋಜಿ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

31 ರಾಷ್ಟ್ರೀಯ ಹೆದ್ದಾರಿಗಳ 41 ಟೋಲ್ ಘಟಕಗಳನ್ನು ಪರಿಶೀಲಿಸಿದ ಸಿಎಜಿ

ನಿಲ್ಲದ ಹಣ ವಸೂಲಿ ನೀಡದ ಮೂಲಸೌಲಭ್ಯ



• ಸುಕೃತ ಎಸ್.

ಮುರಿದು ಬಿದ್ದಿರುವ ಕಮೋಡ್‌ಗಳು. ಕೆಲವು ಕಡೆ ಶೌಚಾಲಯವೇ ಇಲ್ಲ. ಒಂದು ವೇಳೆ ಇವೆರಡೂ ಇದೆ ಎಂದಿಟ್ಟುಕೊಳ್ಳೋಣ. ಶೌಚಾಲಯದ ಬಾಗಿಲು ತೆರೆಯದೆಯೇ ಹಲವು ವರ್ಷಗಳಾಗಿವೆ. ಇದು ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಘಟಕಗಳಲ್ಲಿ ಇರುವ ಶೌಚಾಲಯಗಳ ಸ್ಥಿತಿ. ಎಲ್ಲ ಟೋಲ್ ಘಟಕಗಳಲ್ಲೂ 'ಹೈವೇ ನೆಸ್ಟ್ ಮಿನಿ' ಇರಬೇಕು ಎಂಬ ನಿಯಮ ಇದೆ ನಿಜ. ಆದರೆ, ಕೆಲವು ಕಡೆಗಳಲ್ಲಂತೂ ನಿಜದಲ್ಲಿ 'ನೆಸ್ಟ್' ರೀತಿಯಲ್ಲಿಯೇ ವ್ಯವಸ್ಥೆ ಇದೆ. ಕೆಲವು ಕಡೆ 'ನೆಸ್ಟ್'ನ ಚಾವಣಿ ಬಿದ್ದೇ ಹೋಗಿದೆ.


ಟೋಲ್‌ಗಳಲ್ಲಿ ಕಡ್ಡಾಯವಾಗಿ ಆಂಬುಲೆನ್ಸ್ ವ್ಯವಸ್ಥೆ ಇರಬೇಕು. ಆದರೆ, ಈ ಸೌಲಭ್ಯವೂ ಉಪಯೋಗಕ್ಕೆ ಇಲ್ಲ. ಅದು ಕೇವಲ ಲಭ್ಯವಿದೆಯಷ್ಟೇ. ಅಪಘಾತಗಳು ಸಂಭವಿಸಿದರೆ ಅಥವಾ ಮತ್ಯಾವುದೋ ತುರ್ತು ಕಾರ್ಯಕ್ಕಾಗಿ ಇರಬೇಕಾದ ಗಸ್ತು ವಾಹನದ ಸ್ಥಿತಿ ನೋಡಿದರೆ, ಸುಸ್ತು ಆಗುವಂತಿದೆ. ವಾಹನದ ಸೀಟುಗಳು ಕಿತ್ತು ಹೋಗಿವೆ. ನಮಗೊಂದೇ ಅಲ್ಲ, ಗಸ್ತು ವಾಹನಕ್ಕೂ ತಿರುಗಾಡಿ ತಿರುಗಾಡಿ ಸುಸ್ತು ಆದಂತಿದೆ.

ಸಿಎಜಿ ಸಿದ್ಧಪಡಿಸಿರುವ 'ದಕ್ಷಿಣ ಭಾರತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಘಟಕಗಳ ನಿರ್ವಹಣೆ' ವರದಿಯಲ್ಲಿ ಹೀಗೆ ಕೊರತೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಉತ್ತಮವಾದ ಹೆದ್ದಾರಿ, ತಲುಪಬೇಕಿರುವ ಊರುಗಳಿಗೆ ವೇಗವಾಗಿ ತಲುಪುವ ಅನುಕೂಲವೇನೋ ಆಗಿದೆ. ಆದರೆ, ರಸ್ತೆಯೊಂದನ್ನು ನಿರ್ವಹಿಸಿದರೆ ಸಾಕೆ? ಎಂಬ ಪ್ರಶ್ನೆ ಉದ್ಭವಿಸದೇ ಇರದು. ಸರ್ಕಾರವೇ ನೀಡಿರುವ ಮಾರ್ಗಸೂಚಿ ಅನ್ವಯ ರಸ್ತೆಯನ್ನು ನಿರ್ವಹಿಸಿದರೆ ಸಾಲುವುದಿಲ್ಲ. ಜನರಿಗೆ ಅಗತ್ಯ ಇರುವ ಶೌಚಾಲಯ, ವಿಶ್ರಾಂತಿ ಕೊಠಡಿ ಸೇರಿದಂತೆ ಹಲವು ಸೌಲಭ್ಯಗಳನ್ನು ಆಗುಮಾಡುವುದೂ ಇದೇ ಕಂಪೆನಿಗಳ ಕರ್ತವ್ಯ. ಟೋಲ್ ಸಂಗ್ರಹ ಮಾಡುವಾಗ ಮಾತ್ರ ನಿರ್ವಹಣೆ ಸೇವೆಯನ್ನು ಸೇರಿ ಹಣ ವಸೂಲಿ ಮಾಡಲಾಗುತ್ತದೆ. ಆದರೆ, ಸೌಲಭ್ಯಗಳು ಮಾತ್ರ ಮರೀಚಿಕೆಯಾಗಿವೆ. ಜನರಿಗೆ ನೀಡಲೇಬೇಕಿರುವ ಕೆಲವು ಮೂಲಸೌಲಭ್ಯಗಳ ಕುರಿತು ದಕ್ಷಿಣ ಭಾರತದ 37 ರಾಷ್ಟ್ರೀಯ ಹೆದ್ದಾರಿಗಳ, ಒಟ್ಟು 41 ಟೋಲ್ ಘಟಕಗಳನ್ನು ಪರಿಶೀಲಿಸಿ ಸಿಎಜಿ ವರದಿ ಮಾಡಿದ್ದು, ಇಂಥ ಮೂಲಸೌಲಭ್ಯಗಳು ಇಲ್ಲದಿರುವ ಬಗ್ಗೆ ಬೆಳಕು ಚೆಲ್ಲಿದೆ.

ಉತ್ತರಿಸದ ಪ್ರಾಧಿಕಾರ ಮತ್ತು ಸಚಿವಾಲಯ: ಟೋಲ್ ಘಟಕಗಳಲ್ಲಿ ಮೂಲಸೌಕರ್ಯ ಇಲ್ಲದ ಕುರಿತು ಸಿಎಜಿ, ಹಲವು ಸ್ಪಷ್ಟೀಕರಣಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವನ್ನು ಕೇಳಿತ್ತು. ಆದರೆ, ಪ್ರಾಧಿಕಾರ ಮತ್ತು ಸಚಿವಾಲಯ ಸಿಎಜಿ ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಿಲ್ಲ.

'ಸ್ವಚ್ಛ ಭಾರತ ಅಭಿಯಾನ'ದ ಅಡಿ ಶೌಚಾಲಯ ನಿರ್ಮಾಣ ಇಲ್ಲ



ಟೋಲ್ ಘಟಕದ ರಸ್ತೆಯ ಎರಡೂ ಬದಿಗಳಲ್ಲಿ ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ಶೌಚಾಲಯ ನಿರ್ಮಾಣ ಮಾಡುವುದು ಕಡ್ಡಾಯ. ಟೋಲ್ ಘಟಕಗಳಲ್ಲಿ ಇರುವ ಆಡಳಿತ ಬ್ಲಾಕ್‌ಗಳಲ್ಲಿರುವ ಶೌಚಾಲಯವನ್ನು ಈ ಪಟ್ಟಿಗೆ ಸೇರಿಸುವಂತಿಲ್ಲ. ಅವೇ ಬೇರೆ, 'ಸ್ವಚ್ಛ ಭಾರತ ಅಭಿಯಾನ'ದ ಅಡಿ ನಿರ್ಮಿಸಬೇಕಾಗಿರುವ ಶೌಚಾಲಯದ ಕಟ್ಟಡಗಳೇ ಬೇರೆ. ಹೀಗೆಂದು ಸಚಿವಾಲಯ ಹಾಗೂ ಪ್ರಾಧಿಕಾರ ಹೇಳಿವೆ. ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ನಿರ್ಮಿಸಲಾಗಿರುವ ಶೌಚಾಲಯವನ್ನು ನಿರ್ವಹಿಸುವುದು, ಅವುಗಳು 24 ಗಂಟೆಯೂ ಕೆಲಸ ಮಾಡುವಂತೆ ನೋಡಿಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ.

41 ಪರಿಶೀಲಿಸಿದ ಟೋಲ್ ಘಟಕಗಳು

5 ಟೋಲ್ ಘಟಕಗಳ ಬಳಿ ಶೌಚಾಲಯಗಳು ಇಲ್ಲ. ರಾಜ್ಯದ ನೆಲಮಂಗಲದಲ್ಲಿರುವ ಎರಡು ಟೋಲ್ ಘಟಕಗಳೂ ಇದರಲ್ಲಿ ಸೇರಿವೆ

13 ಕೇವಲ ಒಂದು ಬದಿಯಲ್ಲಿ ಮಾತ್ರ ಶೌಚಾಲಯ ಸೌಲಭ್ಯ ಇರುವ ಘಟಕಗಳು

3 ಶೌಚಾಲಯ ಇದ್ದರೂ ಬಾಗಿಲು ಮುಚ್ಚಿರುವ ಟೋಲ್ ಘಟಕಗಳ ಸಂಖ್ಯೆ

ಜಾಗದ ಸಮಸ್ಯೆ: ಕೆಲವು ಟೋಲ್ ಘಟಕಗಳಲ್ಲಿ ಜಾಗದ ಸಮಸ್ಯೆ ಇದೆ. ಆ ಕಾರಣದಿಂದಾಗಿ ಶೌಚಾಲಯದ ನಿರ್ಮಾಣ ಸಾಧ್ಯವಾಗಿಲ್ಲ. ಕೆಲವು ಟೋಲ್ ಘಟಕಗಳಲ್ಲಿ ಶೌಚಾಲಯ ನಿರ್ಮಿಸಲು ಕಂಪೆನಿಗಳಿಗೆ ಸೂಚಿಸಲಾಗಿದೆ ಎಂದು ಪ್ರಾಧಿಕಾರ ಹಾಗೂ ಸಚಿವಾಲಯ ಉತ್ತರಿಸಿದೆ. ಆದರೆ, ಈ ಉತ್ತರವನ್ನು ಸಿಎಜಿ ಒಪ್ಪಿಕೊಂಡಿಲ್ಲ. ಜೊತೆಗೆ, 14 ಟೋಲ್ ಘಟಕಗಳಲ್ಲಿ ಇರುವ ಸಮಸ್ಯೆಗಳ ಬಗ್ಗೆ ಪ್ರಾಧಿಕಾರ ಹಾಗೂ ಸಚಿವಾಲಯ ಉತ್ತರಿಸಿಲ್ಲ. ಪ್ರಾಧಿಕಾರದ ಯೋಜನೆ ಜಾರಿ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಿಎಜಿ ಅಭಿಪ್ರಾಯಪಟ್ಟಿದೆ.

ಶಿಫಾರಸು: ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ, ನಿರ್ಮಾಣದ ಗತಿ, ಗುತ್ತಿಗೆ ನೀಡುವ ಕುರಿತು ಪ್ರಾಧಿಕಾರವು ಗಮನಹರಿಸಬೇಕು. ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ಶೌಚಾಲಯ ನಿರ್ಮಿಸಿ ಸಾರ್ವಜನಿಕರಿಗೆ ಅದರ ಉಪಯೋಗ ದೊರೆಯುವಂತೆ ನೋಡಿಕೊಳ್ಳಬೇಕು.



ಆಂಬುಲೆನ್ಸ್



ಇಲ್ಲದ ತುರ್ತು ಸೇವೆಗಳು

ಹೆದ್ದಾರಿಗಳಲ್ಲಿ ಸಂಚರಿಸುವ ಸಾರ್ವಜನಿಕರು ಸುರಕ್ಷತೆಯ ಕಾರಣಕ್ಕಾಗಿ ಅಪಘಾತದ ವೇಳೆಯ ಪರಿಣಾಮಕಾರಿ ನಿರ್ವಹಣೆಗಾಗಿ ಆಂಬುಲೆನ್ಸ್, ಗಸ್ತು ವಾಹನಗಳು ಹಾಗೂ ಕ್ರೇನ್‌ಗಳ ವ್ಯವಸ್ಥೆ ಮಾಡುವುದು ಪ್ರಾಧಿಕಾರ ವಿಧಿಸಿರುವ ನಿಮಯ. ಇದಕ್ಕಾಗಿ ಪ್ರಾಧಿಕಾರವು ಮಾರ್ಗಸೂಚಿಯನ್ನೂ ಬಿಡುಗಡೆ ಮಾಡಿದೆ. 41 ಟೋಲ್ ಘಟಕಗಳಲ್ಲಿನ ಆಂಬುಲೆನ್ಸ್ ಹಾಗೂ ಗಸ್ತು ವಾಹನಗಳ ಪರಿಶೀಲನೆ ನಡೆಸಿದ ಸಿಎಜಿ, 14 ಟೋಲ್ ಘಟಕಗಳಲ್ಲಿ ಪ್ರಾಧಿಕಾರ ನೀಡಿರುವ ಮಾರ್ಗಸೂಚಿಯನ್ನು ಪಾಲಿಸಲಾಗಿಲ್ಲ ಎಂದಿದೆ.

ಟೋಲ್ ಘಟಕಗಳಲ್ಲಿ ಇರುವ ಆಂಬುಲೆನ್ಸ್‌ನಲ್ಲಿ ಕನಿಷ್ಠ ಇಬ್ಬರು ರೋಗಿಯನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಇರಬೇಕು ಎಂದು ಪ್ರಾಧಿಕಾರದ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಆದರೆ, ಇಷ್ಟೊಂದು ದೊಡ್ಡ ಸಾಮರ್ಥ್ಯ ಇರುವ ಆಂಬುಲೆನ್ಸ್‌ಗಳು ಯಾವ ಘಟಕದಲ್ಲೂ ಇಲ್ಲ ಎಂದು ಸಿಎಜಿ ಪರಿಶೀಲನೆಯಲ್ಲಿ ತಿಳಿದುಬಂದಿದೆ.

ಇನ್ನು ಗಸ್ತು ವಾಹನಗಳಲ್ಲಿ ವೆಹಿಕಲ್ ಟ್ರ್ಯಾಕಿಂಗ್ ವ್ಯವಸ್ಥೆ ಇರಬೇಕು. ಜೊತೆಗೆ ಪ್ರಥಮ ಚಿಕಿತ್ಸೆ ನೀಡಲು ಬೇಕಾಗಿರುವ ಔಷಧ ಸೌಲಭ್ಯ ಇರಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಆದರೆ, ಈ ಯಾವ ವ್ಯವಸ್ಥೆಯೂ ಗಸ್ತು ವಾಹನಗಳಲ್ಲಿ ಇಲ್ಲ. ಜೊತೆಗೆ, ಈ ವಾಹನಗಳು ಹಳೆಯದಾಗಿವೆ, ಬಳಸಲು ಯೋಗ್ಯವಾಗಿಲ್ಲ ಎಂದು ಸಿಎಜಿ ಹೇಳಿದೆ.

ಅಗತ್ಯ ಕ್ರಮ ವಹಿಸಲಾಗುವುದು: ಗಸ್ತು ವಾಹನ ಹಾಗೂ ಆಂಬುಲೆನ್ಸ್‌ಗಳ ಸುಸ್ಥಿತಿ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಧಿಕಾರ ಹಾಗೂ ಸಚಿವಾಲಯ ತಿಳಿಸಿದೆ. ಆದರೂ, ಒಂಬತ್ತು ಟೋಲ್ ಘಟಕಗಳ ಕುರಿತು ಪ್ರಾಧಿಕಾರ ಮತ್ತು ಸಚಿವಾಲಯ ಮಾಹಿತಿ ನೀಡಿಲ್ಲ.

ಶಿಫಾರಸು: ತನ್ನದೇ ಮಾರ್ಗಸೂಚಿಯ ಅನ್ವಯ ಪ್ರಾಧಿಕಾರವು ಆಂಬುಲೆನ್ಸ್ ಹಾಗೂ ಗಸ್ತು ವಾಹನಗಳ ಸುಸ್ಥಿತಿಯ ಬಗ್ಗೆ ಗಮನ ಹರಿಸಬೇಕು.

ಕಾರ್ಯ ನಿರ್ವಹಿಸದ ಹೈವೇ ನೆಸ್ಟ್ ಮಿನಿ



ಟೋಲ್ ಘಟಕಗಳ ಇಕ್ಕೆಲಗಳಲ್ಲಿ ಹೈವೇ ನೆಸ್ಟ್ ಮಿನಿಯನ್ನು ನಿರ್ಮಿಸಬೇಕು ಎಂದು ಪ್ರಾಧಿಕಾರವು 2017ರಲ್ಲಿ ನಿಯಮ ರೂಪಿಸಿತ್ತು. ಈ ನೆಸ್ಟ್‌ಗಳಲ್ಲಿ ಶೌಚಾಲಯ, ದುಡ್ಡು ಹಾಕಿ ನೀರು ಪಡೆಯುವ ಸೌಲಭ್ಯ (ವಾಟರ್ ಎಟಿಎಂ), ಪ್ಯಾಕ್ ಮಾಡಿದ ಆಹಾರ, ತಂಪು ಪಾನೀಯಗಳ ವ್ಯವಸ್ಥೆ ಇರಬೇಕು. 2018ರ ಹೊತ್ತಿಗೆ ಎಲ್ಲಾ ಟೋಲ್ ಘಟಕಗಳಲ್ಲೂ ಇಂಥ ನೆಸ್ಟ್‌ಗಳನ್ನು ನಿರ್ಮಿಸಬೇಕು ಎಂದೂ ಹೇಳಿತ್ತು. ಆದರೆ, ಸುಮಾರು 11 ಟೋಲ್ ಘಟಕಗಳಲ್ಲಿ ಹೈವೇ ನೆಸ್ಟ್ ಮಿನಿಗಳ ನಿರ್ಮಾಣವೇ ಆಗಿಲ್ಲ.

41 ಪರಿಶೀಲಿಸಿದ ಟೋಲ್ ಘಟಕಗಳು

11 ಹೈವೇ ನೆಸ್ಟ್ ಮಿನಿಗಳ ಲಭ್ಯತೆ ಇಲ್ಲದ ಘಟಕಗಳು

2 ಒಂದು ಬದಿಯಲ್ಲಿ ಮಾತ್ರವೇ ಹೈವೇ ನೆಸ್ಟ್ ಮಿನಿ ಕಾರ್ಯನಿರ್ವಹಿಸುತ್ತಿರುವ ಟೋಲ್ ಘಟಕಗಳು

11 ಹೈವೇ ನೆಸ್ಟ್ ಮಿನಿ ಇದ್ದರೂ, ಕಾರ್ಯನಿರ್ವಹಿಸದೇ ಇರುವ ಟೋಲ್ ಘಟಕಗಳು

ಜಾಗದ ಕೊರತೆ: ರಾಜ್ಯದ ನೆಲಮಂಗಲ ಟೋಲ್ ಘಟಕದಲ್ಲಿ ಹೈವೇ ನೆಸ್ಟ್ ಮಿನಿ ಅನ್ನು ನಿರ್ಮಿಸಲಾಗಿದೆ. ಆದರೆ, ಜಾಗದ ಕೊರತೆಯಿಂದ ಇದು ಕಾರ್ಯನಿರ್ವಹಿಸುತ್ತಿಲ್ಲ ಎಂದು ಪ್ರಾಧಿಕಾರ ಉತ್ತರಿಸಿದೆ. ಕಟ್ಟಡ ನಿರ್ಮಾಣವಾದ ಮೇಲೂ ಜಾಗದ ಕೊರತೆ ಯಾಕಾಗಬೇಕು ಎಂಬ ವಿವರಣೆಯನ್ನು ವರದಿಯಲ್ಲಿ ನೀಡಲಾಗಿಲ್ಲ.

'ಕೆಲವು ಕಡೆಗಳಲ್ಲಿ ಹೈವೇ ನೆಸ್ಟ್ ಮಿನಿಗಳ ನಿರ್ಮಾಣಕ್ಕೆ ಸೂಚಿಸಲಾಗಿದೆ. ಕಲುಷಿತ ನೀರಿನ ಸಮಸ್ಯೆ ಇರುವ ಕಾರಣಕ್ಕಾಗಿ ಒಂದು ಘಟಕದಲ್ಲಿ ಹೈವೇ ನೆಸ್ಟ್ ಮಿನಿಯನ್ನು ನಿರ್ಮಿಸಲಾಗಿಲ್ಲ' ಎಂದು ಪ್ರಾಧಿಕಾರ ಉತ್ತರಿಸಿದೆ. ಯಾಕಾಗಿ ಹೈವೇ ನೆಸ್ಟ್ ಮಿನಿ ನಿರ್ಮಾಣವಾಗಿಲ್ಲ ಎಂಬ ಪ್ರಶ್ನೆಗೆ ಕೆಲವು ಟೋಲ್‌ಗಳ ಬಗ್ಗೆ ಮಾತ್ರವೇ ಉತ್ತರಿಸಿರುವ ಪ್ರಾಧಿಕಾರವು ಆರು ಟೋಲ್ ಘಟಕಗಳ ಬಗ್ಗೆ ಮಾಹಿತಿ ನೀಡಿಲ್ಲ.

ಶಿಫಾರಸು: ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ, ನಿರ್ಮಾಣದ ಗತಿ, ಗುತ್ತಿಗೆ ನೀಡುವ ಕುರಿತು ಪ್ರಾಧಿಕಾರವು ಗಮನಹರಿಸಬೇಕು. ಹೈವೇ ನೆಸ್ಟ್ ಮಿನಿಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಅದರ ಉಪಯೋಗ ದೊರೆಯುವಂತೆ ನೋಡಿಕೊಳ್ಳಬೇಕು.

ಆಧಾರ: ಸಿಎಜಿಯ 'ದಕ್ಷಿಣ ಭಾರತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಘಟಕಗಳ ನಿರ್ವಹಣೆ' ವರದಿ

'ಇಂಡಸ್ಟ್ರಿ ಒಂದು ಗುಂಪಲ್ಲ'

ಸ್ಯಾಂಡಲ್‌ವುಡ್‌ನಲ್ಲಿ ನಟನೊಬ್ಬನ ಸಿನಿಮಾವನ್ನು ಇತರೆ ನಟರು ಪ್ರೋತ್ಸಾಹಿಸುವ ಪರಿಪಾಟ ಕ್ರಮೇಣ ಹೆಚ್ಚುತ್ತಿದೆ. ಇದಕ್ಕೆ ಸಾಕ್ಷ್ಯವೆಂಬಂತೆ ಇತ್ತೀಚೆಗೆ ನಡೆದ ನವೀನ್ ಶಂಕರ್ ನಟನೆಯ 'ಕ್ಷೇತ್ರಪತಿ' ಸಿನಿಮಾ ಟ್ರೈಲರ್ ಅನಾವರಣ ಕಾರ್ಯಕ್ರಮವಿತ್ತು.

ನಟರಾದ ಧನಂಜಯ, ವಸಿಷ್ಠ ಸಿಂಹ, ನೀನಾಸಂ ಸತೀಶ್, ನಾಗಭೂಷಣ್ ವೇದಿಕೆ ಏರಿ ನವೀನ್ ಶಂಕರ್ ಅವರ ಪ್ರಾಜೆಕ್ಟ್‌ಗೆ ಸಾಥ್ ನೀಡಿದರು. 'ಎಲ್ಲ ಸಿನಿಮಾಗಳು ಕೋಟಿ ಕೋಟಿ ಬಾಚಬೇಕೆಂದಿಲ್ಲ. ಸಿನಿಮಾಗಳು ಗೆಲ್ಲಬೇಕು. ಇನ್ನೊಬ್ಬನ ಏಳಿಗೆಯನ್ನು ತಡೆಯೋಕೆ, ತುಳಿಯೋಕೆ ಯೋಚನೆ ಮಾಡುವ ಬದಲು ಆದಷ್ಟು ತಬ್ಬಿಕೊಂಡು, ಕೈಹಿಡಿದುಕೊಂಡು ಹೋದರೆ ಬಹಳಷ್ಟು ಸಾಧನೆ ಮಾಡಬಹುದು. ಇಂಡಸ್ಟ್ರಿ ಒಂದು ಗುಂಪಲ್ಲ, ಯಾರೊಬ್ಬರದೂ ಅಲ್ಲ. ಅದು ಎಲ್ಲರದ್ದು. ಮುಂದಿನ ಐದು ವರ್ಷಗಳಲ್ಲಿ ಬಹಳಷ್ಟು ಹೊಸ ನಿರ್ದೇಶಕರು, ಹೀರೊಗಳು ಬರುತ್ತಾರೆ. ಯಾರನ್ನಾದರೂ ದ್ವೇಷಿಸುವ ಮುಂಚೆ ಒಮ್ಮೆ ಯೋಚನೆ ಮಾಡಿ, ಅವರೂ ಯಾವುದೋ ತಂದೆ ತಾಯಿ ಮಕ್ಕಳೆಂದು. ಸಾಧ್ಯವಾದರೆ ಬೆಂಬಲ ಕೊಡಿ ಇಲ್ಲವಾದರೆ ಸುಮ್ಮನೆ ಇದ್ದುಬಿಡಿ' ಎನ್ನುವ ಮೂಲಕ ನವೀನ್ ಸಿನಿಮಾಗೆ ಬೆಂಬಲ ನೀಡಿದರು.



ಕ್ಷೇತ್ರಪತಿ ಟ್ರೈಲರ್ ಅನಾವರಣ ಕಾರ್ಯಕ್ರಮದಲ್ಲಿ ವಸಿಷ್ಠ ಸಿಂಹ, ನೀನಾಸಂ ಸತೀಶ್, ಧನಂಜಯ, ನಾಗಭೂಷಣ್ ಹಾಗೂ ನವೀನ್ ಶಂಕರ್

''ಗುಲ್ಟು ಸಿನಿಮಾ ಬಂದ ಮೇಲೆ ಕಥೆಗಳು ಬರುತ್ತಿವೆ ಆದರೆ ಯಾವುದೂ ಇಷ್ಟ ಆಗುತ್ತಿಲ್ಲ. ಒಂದು ಸಿನಿಮಾಗೆ ಒಂದೂವರೆ ವರ್ಷ ಪ್ರಿಪೇರ್ ಆದೆ. ಆದರೆ ಆ ಸಿನಿಮಾ ಕೂಡಾ ಆಗ್ತಿಲ್ಲ' ಎಂದು ನವೀನ್ ಹೇಳಿದ್ದಾಗ ಒಂದು ಕ್ಷಣ ಗಾಬರಿ ಆಯಿತು. ಇರುವುದರಲ್ಲಿ ಒಳ್ಳೆಯ ತಂಡ ಆಯ್ಕೆ ಮಾಡಿಕೊಂಡು ನಿರಂತರವಾಗಿ ಸಿನಿಮಾ ಮಾಡು ಎಂದಿದ್ದೆ. ಹೀಗಾಗಿ 2023ರಲ್ಲಿ ನವೀನ್‌ನ ಸಾಲು ಸಾಲು ಸಿನಿಮಾ ಬಂದವು' ಎನ್ನುವುದನ್ನು ಧನಂಜಯ ನೆನಪಿಸಿಕೊಂಡರು. 'ಉತ್ತರ ಕರ್ನಾಟಕ ಕಡೆಗೆ ಹೋದಾಗ ನಮ್ಮ ಭಾಷೆಯ ಸಿನಿಮಾ ಯಾವಾಗ ಮಾಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳುತ್ತಾ ಇರುತ್ತಾರೆ. 'ಹುಲಿಯಾ' ರೀತಿ ಸಿನಿಮಾ ಮಾಡಬೇಕು ಎಂಬ ಆಸೆ ನಮಗೂ ಇತ್ತು. ಈ ಸಿನಿಮಾ ಮೂಲಕ ಅಂತಹ ಪ್ರಯತ್ನವನ್ನು ಬೆನ್ನುತಟ್ಟೋಣ' ಎಂದರು ನೀನಾಸಂ ಸತೀಶ್.

ಹೊಸಬರ 'ಪರಿಮಳ ಡಿಸೋಜಾ'

ಹೊಸಬರ 'ಪರಿಮಳ ಡಿಸೋಜಾ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿನೋದ್ ಶೇಷಾದ್ರಿ ಚಿತ್ರದ 'ವಿಲೇಜ್ ರೋಡ್ ಫಿಲಂಸ್' ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಗಿರಿಧರ್ ಎಚ್.ಟಿ ನಿರ್ದೇಶಕರು.



ಭವ್ಯ

'ಈ ಚಿತ್ರ ನಿರ್ಮಾಣ ಮಾಡುವ ಪ್ರಮುಖ ಪಾತ್ರ ಕೂಡ ಮಾಡಿದ್ದೇನೆ. ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥಾ ಹಂದರ ಒಳಗೊಂಡ ಆ್ಯಕ್ಷನ್, ಸೆಂಟಿಮೆಂಟ್, ಮನರಂಜನೆ ಇರುವ ಕೌಟುಂಬಿಕ ಚಿತ್ರ. ನಟಿ ಭವ್ಯ ಸೇರಿದಂತೆ ಚಿತ್ರದಲ್ಲಿ ಒಟ್ಟು 107 ಕಲಾವಿದರು ನಟಿಸಿದ್ದಾರೆ' ಎಂದು ವಿನೋದ್ ಶೇಷಾದ್ರಿ ಹೇಳಿದರು.

'ಹಿಂದೂ ಕುಟುಂಬದ ಮನೆಗೆ ಕ್ರಿಶ್ಚಿಯನ್ ಹುಡುಗಿ ಸೊಸೆಯಾಗಿ ಬರುತ್ತಾರೆ. ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ ಒಂದು ಘಟನೆ ನಡೆಯುತ್ತದೆ ಆ ಘಟನೆ ಏನು? ಅದರಿಂದ ಏನೆಲ್ಲಾ ಆಗುತ್ತದೆ ಎಂಬುದೇ ಈ ಚಿತ್ರದ ಕಥಾವಸ್ತು' ಎಂದರು ನಿರ್ದೇಶಕರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇತ್ತೀಚೆಗೆ ನಡೆದ ಸಂಸತ್ತಿನ ಅಧಿವೇಶನದಲ್ಲಿ ರಾಹುಲ್ ಗಾಂಧಿ ಅವರು ರಾಮಾಯಣದ ಕೆಲವು ಘಟನೆಗಳ ಕುರಿತು ಮಾತನಾಡಿದ್ದರು. ಈ ಬಗ್ಗೆ ಕೆಲವು ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ಅಣ್ಣಂದಿರೇ, ತಂಗಿಯರೇ..' ಸಂಸತ್ತಿನಲ್ಲಿ ಉದ್ದೇಶಿಸುವ ವಿಧಾನವೇ ಇದು? ಜೊತೆಗೆ, 'ಲಂಕೆಗೆ ಹನುಮಂತ ಬೆಂಕಿ ಇಡಲಿಲ್ಲ' ಎಂದೂ ಹೇಳಿದ್ದಾರೆ. ರಾಮಾಯಣ ವರ್ಷನ್ 2 ಬರುತ್ತಿದೆ' ಎಂದು ಪೋಸ್ಟ್ ಮಾಡಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರು ಈ ರೀತಿ ಮಾತನಾಡಿಲ್ಲ.



ಸಂಸತ್ತಿನಲ್ಲಿ ಮಾತನಾಡಿದ ರಾಹುಲ್ ಗಾಂಧಿ ಅವರು 'ಲಂಕೆಗೆ ಹನುಮಂತ ಬೆಂಕಿ ಇಡಲಿಲ್ಲ. ಬದಲಿಗೆ ರಾವಣನ ಅಹಂಕಾರವೇ ಬೆಂಕಿ ಇಟ್ಟಿದೆ' ಎಂದು ಹೇಳಿದ್ದರು. ಆದರೆ, ಅವರ ಮಾತಿನ ಅರ್ಧ ಭಾಗವನ್ನಷ್ಟೇ ಇಟ್ಟುಕೊಂಡು ತಪ್ಪು ಮಾಹಿತಿಯೊಂದಿಗೆ ಪೋಸ್ಟ್ ಹಂಚಿಕೊಳ್ಳಲಾಗುತ್ತಿದೆ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪ್ರತಿಪದ್ ಗಂ. 17-36 ನಕ್ಷತ್ರ: ಮಘ ಗಂ. 19-58 ಯೋಗ: ಪರಿಘ ಗಂ. 19-29 ಕರಣ: ಬವ ಗಂ. 17-36, ಕರ್ಕಾಟಕ ಮಾಸದ 31 ನೇ ದಿನ, ಮಳೆನಕ್ಷತ್ರ: ಮಘಾ 1. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-22 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 28 ಮೊಹರಮ್
ದಿನ ವಿಶೇಷ : ಮಾನಸ ಪೂಜಾ ಮುಕ್ತಾಯ (ಬಂಗಾಳ)
ಅದೃಷ್ಟ ಸಂಖ್ಯೆ : 7, 4

ಮೇಷ: ಕೆಲಸದ ಒತ್ತಡವನ್ನು ಅಥವಾ ಒಂದು ಸಂಘ ಸಂಸ್ಥೆಯ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುವಂತಾಗುವುದು. ರಾಜಕೀಯ ವರ್ಗದವರಿಗೆ ಶತ್ರುಪೀಡೆ ಕಂಡುಬರಲಿದೆ. ಉಡುಗೊರೆ ದೊರಕಬಹುದು.

ವೃಷಭ: ವ್ಯವಹಾರದಲ್ಲಿ ಸೋದರರನ್ನು ಸೇರಿಸಿಕೊಂಡು ನೂತನ ಘಟಕ ಆರಂಭಿಸುವಿರಿ. ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ನೀವು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ಆರೋಗ್ಯವು ಸುಧಾರಿಸುವುದು.

ಮಿಥುನ: ಅಪರಿಚಿತ ವ್ಯಕ್ತಿಯೊಬ್ಬರು ಉಪಾಯಗಳನ್ನು ಮತ್ತು ಅವರ ಅನುಭವಗಳನ್ನು ನೀಡುವುದಾಗಿ ಹೇಳಿ ದಾರಿ ತಪ್ಪಿಸಲಿದ್ದಾರೆ. ಆದಾಯ ವೃದ್ಧಿಯಾದರೂ ವ್ಯಯವು ಸಮತೋಲನ ಸಾಧಿಸುತ್ತದೆ.

ಕರ್ಕಾಟಕ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆಯಲ್ಲಿ ಇತರರ ದುರ್ಬುದ್ಧಿಯಿಂದ ವ್ಯತ್ಯಾಸಗಳಾಗುತ್ತದೆ. ವ್ಯವಹಾರಗಳಲ್ಲಿ ನುರಿತವರ ಸಲಹೆ ಪಡೆದುಕೊಂಡಲ್ಲಿ ಯಶಸ್ವಿಯಾಗುವಿರಿ.

ಸಿಂಹ: ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುವಿರಿ. ಸ್ವಂತ ಉದ್ಯೋಗ ಮಾಡುವವರಿಗೆ ವರಮಾನದಲ್ಲಿ ಉತ್ತಮ ಸುಧಾರಣೆಯು ಕಂಡುಬರುವುದು. ವಸ್ತ್ರಾಭರಣ ಖರೀದಿ ಯೋಗವಿದೆ.

ಕನ್ಯಾ: ವಿದ್ಯಾಭ್ಯಾಸಕ್ಕಾಗಿ ದೂರ ಪ್ರಯಾಣ ಮಾಡಬೇಕಾಗುವುದು. ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಅವಿಶ್ವಾಸವನ್ನು ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು.

ತುಲಾ: ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬನ್ನಿರಿ. ರಾಜಕೀಯ ಸನ್ನಿವೇಶಗಳು ಅನುಕೂಲವಾಗಿರುವುದು. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ವೃಶ್ಚಿಕ: ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ತಂದೆಯವರಲ್ಲಿ ಮಾತನಾಡಿ. ನಂಬಿಕಸ್ಥರಿಂದ ಮೋಸ ಕೃತ್ಯಗಳು ನಡೆಯುವ ಸಂದರ್ಭಗಳು ಕಾಣುವುದು. ಕಬ್ಬಿಣ ಅಥವಾ ಗ್ಲಾಸ್‌ದ ಗಾಯಗಳಾಗುವ ಲಕ್ಷಣಗಳಿವೆ.

ಧನು: ಸ್ನೇಹಿತರೊಂದಿಗೆ ಅಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸಾಗುವುದು. ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ.

ಮಕರ: ವೈಯಕ್ತಿಕ ವಿಚಾರಗಳನ್ನು ಆಪ್ತಮಿತ್ರರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಇತರರೊಂದಿಗಿನ ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆ ವಹಿಸಿರಿ.

ಕುಂಭ: ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಹೆಚ್ಚಿನ ಪ್ರಶಂಸೆ ದೊರೆತು ಬಡ್ತಿ ಸಿಗುವುದು. ಹಾಲು ಅಥವಾ ಹಾಲಿನ ಪದಾರ್ಥ ಮಾರಾಟಗಾರರಿಗೆ ಲಾಭವಾಗುವುದು. ಇಂದಿನ ಆಫೀಸಿನ ಕೆಲಸಗಳು ಬೇಗ ಮುಗಿಯುವುದು.

ಮೀನ: ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ. ಎಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನಿಮಗೆ ಅನಿಸಲಿದೆ.

ನುಡಿ ಬೆಳಗು

ನೀರಿನಂತಿರು ಗೆಳೆಯ...



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

'ನಿನ್ನ ಮನಸ್ಸನ್ನು ಖಾಲಿಯಾಗಿಟ್ಟುಕೊ, ನೀರಿನಂತೆ ಯಾವುದೇ ಆಕಾರ ಹೊಂದದೇ ಇರು! ನೀರನ್ನು ಲೋಟದಲ್ಲಿ ಹಾಕಿದಾಗ ಅದು ಲೋಟದಂತಾಗುತ್ತದೆ, ಬಾಟಲಿಗೆ ಹಾಕಿದಾಗ ಬಾಟಲಿಯಂತಾಗುತ್ತದೆ, ಟೀ ಕಪ್ಪಿನಲ್ಲಿ ಹಾಕಿದರೆ ಅದೇ ಆಗುತ್ತದೆ. ನೀರು ಹರಿಯಬಲ್ಲದು, ಅಪ್ಪಳಿಸಬಲ್ಲುದು. ನೀರಿನಂತಿರು ಗೆಳೆಯ...'

ಖ್ಯಾತ ನಟ ಬ್ರೂಸ್ ಲೀಯ 'ನೀರಿನಂತಿರು ಗೆಳೆಯ' ಎಂಬ ಈ ಪ್ರಖ್ಯಾತ ಮಾತುಗಳ ಹಿಂದೆ ಅವರದ್ದೇ ಬದುಕಿನ ಘಟನೆಯೊಂದಿದೆ. ಬ್ರೂಸ್ ಲೀ ಹದಿನೆಂಟರ ಹುಡುಗನಾಗಿದ್ದಾಗ ಕುಂಗ್ ಫು ಅಭ್ಯಾಸ ಮಾಡುತ್ತಿದ್ದ. ಹದಿಹರಯದ ಬಿಸಿರಕ್ತದ ಹುಡುಗನಿಗೆ ತಾನು ಭಾಗವಹಿಸುವ ಎಲ್ಲ ಪಂದ್ಯಾವಳಿಗಳಲ್ಲೂ ಗೆಲ್ಲುವ ಹುಚ್ಚು! ತಾನೇ ಅತ್ಯುತ್ತಮವಾದ ಕುಂಗ್ ಫು ಪಟು ಎಂಬುದನ್ನು ಜಗತ್ತಿಗೆ ಸದಾ ತೋರಿಸುವ ಹಂಬಲ! ಆತನ ಗುರುಗಳಿಗೆ ಶಿಷ್ಯನ ಈ ಮನೋಭಾವ ಮುಂದೆ ತೊಂದರೆ ತರುತ್ತದೆ ಎಂಬುದು ಅರಿವಾಯಿತು. 'ಮಗೂ ತಣ್ಣಗಿರುವುದನ್ನು ಕಲಿ, ಸಂಗತಿಗಳಿಗೆ ಅಂಟಿಕೊಳ್ಳಬೇಡ' ಎಂದರು.


ಬ್ರೂಸ್ ಲೀಗೆ ಅದು ಹೇಗೆಂದು ಅರ್ಥವಾಗಲಿಲ್ಲ. ಗುರುಗಳು ಹೇಳಿದಂತೆ ಕೆಲದಿನಗಳು ಮನೆಗೆ ಬಂದು ಧ್ಯಾನ, ಪ್ರಾರ್ಥನೆ ಎಲ್ಲ ಮಾಡಿದ. ಆದರೂ ತಳಮಳ! ನದಿಯಲ್ಲೊಮ್ಮೆ ದೋಣಿಯಲ್ಲಿ ಪಯಣಿಸುವಾಗ ಅದೇ ಗೊಂದಲದಲ್ಲಿ ಕೋಪದಿಂದ ಮುಷ್ಟಿ ಕಟ್ಟಿ ನೀರಿಗೆ ಗುದ್ದಿದ. ಆ ಕ್ಷಣ ಬ್ರೂಸ್ ಲೀಯ ಜೀವನದ ಅತ್ಯಂತ ಪ್ರಮುಖ ತಿರುವಾಯಿತು. ಮತ್ತೂ ಜೋರಾಗಿ ನೀರಿಗೆ ಗುದ್ದಿದ, ನೀರಿಗೆ ಏನೂ ಆಗಲಿಲ್ಲ! ನೀರನ್ನು ಗಟ್ಟಿಯಾಗಿ ಹಿಂಡಲು ಹೋದ, ಚಿವುಟಿದ, ಚುಚ್ಚಿದ, ನೀರು ತನ್ನಷ್ಟಕ್ಕೆ ತಾನು ಹರಿಯುತ್ತಿತ್ತು ಅಷ್ಟೆ. ಬ್ರೂಸ್ ಲೀಗೆ ತಾನು ಏನಾಗಬೇಕೆಂಬುದು ನಿಚ್ಚಳವಾಗಿತ್ತು! ಆತ ಅಂಗೈನಲ್ಲಿ ನೀರನ್ನೆತ್ತಿ ಹೇಳಿದ, 'ಹೌದು, ನಾನು ನೀರಿನಂತಾಗಬೇಕು'.

ಇದರರ್ಥ ಬಹಳ ಸರಳವಾದದ್ದು ಮತ್ತು ಅಷ್ಟೇ ಸಂಕೀರ್ಣವಾದದ್ದು. ಮನಸ್ಸು ಆಕಾರ ರಹಿತವಾಗಿರುವುದು ಎಂದರೆ ಯಾವುದೇ ನಿರ್ದಿಷ್ಟ, ಬಿಗು ಮನಃಸ್ಥಿತಿಯನ್ನು ಇಟ್ಟುಕೊಳ್ಳಬಾರದೆಂದು ಅರ್ಥ. ರಿಜಿಡ್ ಆಗಿರುವ ವ್ಯಕ್ತಿ ನೆಲಕ್ಕೆ ಬಿದ್ದ ಅಂಟಿನಂತೆ. ಯಾವ ಉಪಯೋಗಕ್ಕೂ ಬಾರದಂತಾಗಿಬಿಡುವ ಸಾಧ್ಯತೆ ಹೆಚ್ಚು. ಹೇಗೆ ನೀರು ತಾನು ಸೇರಿದ ಪಾತ್ರೆಯ ಆಕಾರವನ್ನು ತನ್ನದಾಗಿಸಿಕೊಳ್ಳುತ್ತದೆಯೋ ಅದೇ ನೀರಿನಂತೆ ತನ್ನನ್ನು ಸುತ್ತಲಿನ ನಿರೀಕ್ಷಿತ, ಅನಿರೀಕ್ಷಿತ ವಾತಾವರಣಕ್ಕೆ, ಪರಿಸ್ಥಿತಿಗೆ ಹೊಂದಿಸಿಕೊಳ್ಳುವ ವ್ಯಕ್ತಿ ಏನು ಬೇಕಾದರೂ ಮಾಡಬಲ್ಲ. ಇದರರ್ಥ ನಮ್ಮತನ ಕಳೆದುಕೊಳ್ಳುವುದಲ್ಲ, ಜೀವನಪೂರ್ತಿ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ಇರುವುದಲ್ಲ. ನಾವು ಇಷ್ಟ ಪಡದ, ಆದರೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಸಂಗತಿಗಳು ನಮ್ಮ ಬದುಕಿನಲ್ಲಿ ನಡೆದೇ ನಡೆಯುತ್ತವೆ. ಅಂತಹ ಸಂದರ್ಭ ಬಂದಾಗ ನೀರಿನಂತಾಗಬೇಕು. ಪರಿಸ್ಥಿತಿಗೆ ಹೊಂದಿಕೊಳ್ಳಬೇಕು, ಅಷ್ಟೆ.

ಪದಬಂಧ 5413 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಭೇದ ಭಾವವಿಲ್ಲದಿರುವುದು (5)
5. ಆ ಮೋದಕ ತಿನ್ನುವಾಗ ಆದ ಸಂತೋಷ! (3)
6. ಕಠೋರವಾದ ಕೈ (2)
8. ವಿವಿಧದಲ್ಲಿರುವ ರೀತಿ! (2)
11. ಕಮರಿಯೊಳಗೆ ಕಾಣಿಸಿದ ಆನೆ (2)
14. ತಿರುಗಿ ಹೂಡಿದ ಮುಷ್ಕರ! (2)
16. ಮರಳು ಇಲ್ಲಿದೆ (3)
17. ಆಕಾಶವನ್ನು ಮುಟ್ಟುವಂತಹ ಕಟ್ಟಡ (5)

ಮೇಲಿಂದ ಕೆಳಕ್ಕೆ
1. ಅಕ್ಷರಗಳನ್ನು ತಿಳಿದವನು (4)
2. ಹುಟ್ಟಿದ ಕಾಲದ ವೇಳೆತಿಥಿನಕ್ಷತ್ರಗಳನ್ನು ತಿಳಿಸುವ ಪತ್ರಿಕೆ (3)
3. ದರ್ಶನ ತೋರಿ ದೃಷ್ಟಾಂತವನ್ನು ನೀಡಿ! (4)
5. ಪೂಜೆ ಮಾಡುವವನು (4)
7. ಸೂರ್ಯನ ಇನ್ನೊಂದು ಹೆಸರು (2)
9. ಅಧಮನ ಹತ್ತಿರ ಸಿರಿವಂತ ಕಾಣುತ್ತಿದ್ದಾನೆಯೇ (4)
10. ಶಾಖದಿಂದ ಕೂಡಿದ ನೆತ್ತರು ಉಲ್ಟಾ ಕಾಣುತ್ತಿದೆ (4)
12. ಪುಢಾರಿ ಹತ್ತಿರವಿರುವ ಶತ್ರು (2)
13. ತೆಳ್ಳಗಿನ ಸೊಂಟ (4)
15. ಸಂಗಾತಿ ಹೇಳಿರುವ ವಿಷಯ (3)



5412ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆಗಮ 5.ವಾದಕ
6.ಮಡದಿ 8.ಆಟ
9.ನವ 11.ಹುರಿ
15.ಮಾರ 16.ಪೇಚಾಟ
17.ರಸನ 18.ಕಿಲಾಡಿ

ಮೇಲಿಂದ ಕೆಳಕ್ಕೆ:
1.ಕವಾಟ 2.ಆಕಳು
3.ಮಮತೆ 4.ಸುದಿನ
8.ಅಜಾನುಬಾಹು 10.ವರ್ಣವಿಕಾರ
12.ರಿಪೇರಿ 13.ಕಿಟಕಿ
14.ಕರಡಿ 15.ಮಾನವ

ಸುಡೊಕು 5799

	5		7		2		8	6
						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5798 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8


ಬ್ಯಾಂಕ್ ಪರಿಸ್ಥಿತಿ ಸುಧಾರಣೆ: ಫಿಚ್

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದಿಂದಾಗಿ ಎದುರಾಗಿದ್ದ ಆರ್ಥಿಕ ಅಪಾಯಗಳು ಕಡಿಮೆ ಆಗಿರುವ ಕಾರಣ, ಭಾರತದ ಬ್ಯಾಂಕ್‌ಗಳ ಕಾರ್ಯಾಚರಣೆ ಸ್ಥಿತಿಯು ಉತ್ತಮಗೊಂಡಿದೆ ಎಂದು ಫಿಚ್ ರೇಟಿಂಗ್ಸ್ ಸಂಸ್ಥೆ ಹೇಳಿದೆ.

ಕೋವಿಡ್‌ಗೂ ಮುಂಚಿನ ಸ್ಥಿತಿಗೆ ಹೋಲಿಸಿದರೆ, ವಲಯದ ಆರೋಗ್ಯವನ್ನು ಹೇಳುವ ಹಲವು ಸೂಚ್ಯಂಕಗಳು ಸುಧಾರಣೆ ಕಂಡಿವೆ. 'ದೇಶದ ಅರ್ಥ ವ್ಯವಸ್ಥೆಯ ಗಾತ್ರ ಬೃಹತ್ ಆಗಿರುವುದು ಹಾಗೂ ಇಲ್ಲಿನ ಜನಸಂಖ್ಯೆಯು ಬ್ಯಾಂಕ್‌ಗಳ ಪಾಲಿಗೆ ಲಾಭದಾಯಕ ವಹಿವಾಟನ್ನು ನಡೆಸಲು, ವರಮಾನ ಮೂಲವನ್ನು ವಿಸ್ತರಿಸಿಕೊಳ್ಳಲು ಅವಕಾಶಗಳನ್ನು ಒದಗಿಸುವಂತಿವೆ' ಎಂದು ಹೇಳಿದೆ.

ಕೋವಿಡ್ ಸಾಂಕ್ರಾಮಿಕವು ಭಾರತದ ಮೇಲೆ ಕೆಟ್ಟ ಪರಿಣಾಮ ಬೀರಿತು. ಆದರೆ ಈಗ ಅದಕ್ಕೆ ಸಂಬಂಧಿಸಿದ ಅಪಾಯಗಳು ತಗ್ಗಿವೆ ಎಂದು ಫಿಚ್ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,434
ಇಂದಿನ ಅಂತ್ಯ	19,465
▲	31
ದಿನದ ಗರಿಷ್ಠ	19,482

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹315-576
ದ್ವಿತಳಿ (ಬಿ.ವಿ)	₹356-686

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹121.50

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840 (1860)
ಸೋಯಾ (ರಿಫೈನ್ಡ್)	₹950 (937)
ಸೂರ್ಯಕಾಂತಿ (ರಿಫೈನ್ಡ್)	₹950 (960)
ಪಾಮೋಲಿನ್	₹855 (840)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹7000-9300

ಡಿಜಿಟಲ್ ಇಂಡಿಯಾ ಯೋಜನೆ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಸಂಪುಟವು ಡಿಜಿಟಲ್ ಇಂಡಿಯಾ ಯೋಜನೆಯನ್ನು ವಿಸ್ತರಿಸುವುದಕ್ಕೆ ಬುಧವಾರ ನಡೆದ ಸಭೆಯಲ್ಲಿ ಒಪ್ಪಿಗೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯು, ಈ ಉದ್ದೇಶಕ್ಕೆ ₹14,903 ಕೋಟಿ ನಿಗದಿ ಮಾಡಲು ಒಪ್ಪಿದೆ.

ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, 2021–22ರಿಂದ 2025–26ನೆಯ ಸಾಲಿನವರೆಗೆ ಈ ಮೊತ್ತವನ್ನು ನಿಗದಿ ಮಾಡಲಾಗಿದೆ ಎಂದಿದ್ದಾರೆ. ವಿಸ್ತರಣೆ ಕಂಡಿರುವ ಯೋಜನೆಯ ಭಾಗವಾಗಿ, ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ (ಎನ್‌ಸಿಎಂ) ಅಡಿಯಲ್ಲಿ ಇನ್ನೂ ಎಂಟು ಸೂಪರ್ ಕಂಪ್ಯೂಟರ್‌ಗಳನ್ನು ಸೇರಿಸಲಾಗುತ್ತದೆ.

ಎನ್‌ಸಿಎಂ ಅಡಿಯಲ್ಲಿ ಇದುವರೆಗೆ 18 ಸೂಪರ್ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. 2015ರಲ್ಲಿ ಕೇಂದ್ರವು ಒಟ್ಟು 70 ಸೂಪರ್ ಕಂಪ್ಯೂಟರ್‌ಗಳನ್ನು ಎನ್‌ಸಿಎಂ ಅಡಿಯಲ್ಲಿ ಅಳವಡಿಸಲು ಒಪ್ಪಿಗೆ ನೀಡಿತ್ತು.

ಮುಖ್ಯಾಂಶಗಳು

- ಡಿಜಿಟಲ್ ಇಂಡಿಯಾ ವಿಸ್ತರಣೆಗೆ ₹14,903 ಕೋಟಿ ನಿಗದಿಗೆ ಒಪ್ಪಿಗೆ
- ಎಂಎಸ್‌ಎಂಇಗಳಿಗೆ ಡಿಜಿಲಾಕರ್ ಸೌಲಭ್ಯ ವಿಸ್ತರಣೆ
- 6.25 ಲಕ್ಷ ಐ.ಟಿ. ಉದ್ಯೋಗಿಗಳಿಗೆ ಕೌಶಲ ತರಬೇತಿ

ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ, ಅವುಗಳಿಗೆ ಡಿಜಿಲಾಕರ್ ಸೌಲಭ್ಯವನ್ನು ವಿಸ್ತರಿಸಲಾಗುತ್ತದೆ ಎಂದು ವೈಷ್ಣವ್ ಹೇಳಿದ್ದಾರೆ.

ಈ ಸೌಲಭ್ಯವನ್ನು ಎಂಎಸ್‌ಎಂಇ ವಲಯದ ಉದ್ದಿಮೆಗಳು ಸಾಲ ಪಡೆಯಲು ಬಳಸಬಹುದು. ಅಲ್ಲದೆ, ತಮಗೆ ಸಂಬಂಧಿಸಿದ ದಾಖಲೆಗಳನ್ನು ಆ್ಯಪ್ ಮೂಲಕವೇ ದೃಢೀಕರಿಸಿ, ಇತರ ಸೇವೆಗಳನ್ನು ಕೂಡ ಪಡೆಯಬಹುದು. ಡಿಜಿಟಲ್ ಇಂಡಿಯಾ ಯೋಜನೆಯ ವಿಸ್ತರಣೆಯ ಅಡಿಯಲ್ಲಿ ಒಟ್ಟು 6.25 ಲಕ್ಷ ಐ.ಟಿ. ಉದ್ಯೋಗಿಗಳಿಗೆ ಕೌಶಲ ತರಬೇತಿ ನೀಡಲಾಗುತ್ತದೆ. ಮಾಹಿತಿ ಭದ್ರತೆ ವಿಭಾಗದಲ್ಲಿ ಒಟ್ಟು 2.65 ಲಕ್ಷ ಜನರಿಗೆ ತರಬೇತಿ ನೀಡಲಾಗುತ್ತದೆ.

2023ರ ಆರು ತಿಂಗಳಿಗೆ ನೈಟ್ ಫ್ರ್ಯಾಂಕ್ ಇಂಡಿಯಾ ವರದಿ

ಸಾಲದ ಬಡ್ಡಿ ಮನೆ ಖರೀದಿಗೆ ಅಡ್ಡಿ

ನವದೆಹಲಿ (ಪಿಟಿಐ): ಗೃಹ ಸಾಲಗಳ ಮೇಲಿನ ಬಡ್ಡಿ ದರವು ಹೆಚ್ಚಾಗಿರುವುದರಿಂದ ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ಎಂಟು ನಗರಗಳಲ್ಲಿ ಮನೆ ಖರೀದಿಸುವುದು ಹೊರೆಯಾಗುತ್ತಿದೆ ಎಂದು ಆಸ್ತಿ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ಇಂಡಿಯಾ ಹೇಳಿದೆ.

ಈ ನಗರಗಳಲ್ಲಿ ಪ್ರಸಕ್ತ ವರ್ಷದ ಮೊದಲ ಆರು ತಿಂಗಳಲ್ಲಿ ಮನೆಗಳು ಎಷ್ಟರಮಟ್ಟಿಗೆ ಕೈಗೆಟಕುವಂತಿವೆ ಎನ್ನುವುದನ್ನು ಹೇಳುವ ಸೂಚ್ಯಂಕವನ್ನು ಸಂಸ್ಥೆಯು ಬುಧವಾರ ಬಿಡುಗಡೆ ಮಾಡಿದೆ.

ಕುಟುಂಬವೊಂದರ ಆದಾಯ ಮತ್ತು ತಿಂಗಳ ಸಮಾನ ಮಾಸಿಕ ಕಂತನ್ನು (ಇಎಂಐ) ಈ ಸೂಚ್ಯಂಕವು ಪರಿಗಣಿಸುತ್ತದೆ. ಒಂದು ನಿರ್ದಿಷ್ಟ ನಗರದಲ್ಲಿ ಕುಟುಂಬವೊಂದು ಮನೆ ಖರೀದಿಸಲು ಆದಾಯದಲ್ಲಿ ಎಷ್ಟು ಪಾಲನ್ನು ಇಎಂಐಗೆ ನೀಡಬೇಕಿದೆ ಎನ್ನುವುದನ್ನು ಇದು ಸೂಚಿಸುತ್ತದೆ.

ಮುಖ್ಯಾಂಶಗಳು

- ಹಣದುಬ್ಬರ ನಿಯಂತ್ರಣಕ್ಕೆ ರೆಪೊ ದರ ಏರಿಕೆ ಪರಿಣಾಮ
- ಕೈಗೆಟಕುವ ವರ್ಗದ ಮನೆಗಳ ಮಾರುಕಟ್ಟೆಯಲ್ಲಿ ಅಹಮದಾಬಾದ್ ಮೊದಲು

ಕೈಗೆಟಕುವ ವರ್ಗದ ಮನೆಗಳ ಮಾರುಕಟ್ಟೆಯಲ್ಲಿ ಅಹಮದಾಬಾದ್ ನಗರವು ಮೊದಲ ಸ್ಥಾನದಲ್ಲಿದೆ. ಇಲ್ಲಿ ಕುಟುಂಬವೊಂದು ತನ್ನ ಆದಾಯದಲ್ಲಿ ಶೇ 23ರಷ್ಟನ್ನು ಇಎಂಐಗೆ ಪಾವತಿಸಿದೆ. ಪುಣೆ ಮತ್ತು ಕೋಲ್ಕತ್ತದಲ್ಲಿ ಈ ಪ್ರಮಾಣವು ತಲಾ ಶೇ 26ರಷ್ಟು, ಬೆಂಗಳೂರು ಮತ್ತು ಚೆನ್ನೈನಲ್ಲಿ ತಲಾ ಶೇ 28, ದೆಹಲಿ-ಎನ್‌ಸಿಆರ್‌ನಲ್ಲಿ ಶೇ 30, ಹೈದರಾಬಾದ್‌ನಲ್ಲಿ ಶೇ 31 ಮತ್ತು ಮುಂಬೈನಲ್ಲಿ ಶೇ 55ರಷ್ಟು ಇದೆ ಎಂದು ವರದಿಯಲ್ಲಿ ತಿಳಿಸಿದೆ.



ಸೂಚ್ಯಂಕದ ಮಟ್ಟವು ಶೇ 40ರಷ್ಟು ಇದೆ ಎಂದಾದರೆ, ಕುಟುಂಬವು ತನ್ನ ಒಟ್ಟು ಆದಾಯದಲ್ಲಿ ಶೇ 40ರಷ್ಟನ್ನು ಗೃಹ ಸಾಲದ ಇಎಂಐಗೆ ಕಟ್ಟಬೇಕಾಗುತ್ತದೆ. ಇಎಂಐ ಶೇ 50ಕ್ಕಿಂತ ಹೆಚ್ಚಿಗೆ ಇದ್ದರೆ ಕೈಗೆಟಕುವ ಮಟ್ಟ ಎಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ, ಆ ಪ್ರಮಾಣದ ಸಾಲವು ಬ್ಯಾಂಕ್‌ಗಳಿಂದ ಸಿಗುವುದೇ ವಿರಳ ಎಂದು ತಿಳಿಸಿದೆ.

ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ರೆಪೊ ದರವನ್ನು ಶೇ 6.50ಕ್ಕೆ ಹೆಚ್ಚಿಸಿದ್ದು, ಅದರಿಂದಾಗಿ ಮನೆಗಳ ಖರೀದಿಯ ಮೇಲೆ ಪರಿಣಾಮ ಉಂಟಾಗಿದೆ. ರೆಪೊ ದರದಲ್ಲಿನ ಹೆಚ್ಚಳದ ಪರಿಣಾಮವಾಗಿ, ಈ ಎಂಟು ನಗರಗಳಲ್ಲಿ ಮನೆಗಳು ಎಷ್ಟರಮಟ್ಟಿಗೆ ಕೈಗೆಟಕುವಂತಿವೆ ಎಂಬುದನ್ನು ಹೇಳುವ ಸೂಚ್ಯಂಕವು ಸರಾಸರಿ ಶೇ 2.5ರಷ್ಟು ಏರಿಕೆ ಕಂಡಿದೆ. ಅಲ್ಲದೆ, ಗೃಹಸಾಲ ಪಡೆದವರ ಇಎಂಐ ಶೇ 14.4ರಷ್ಟು ಹೆಚ್ಚಾಗಿದೆ ಎಂದು ಸಂಸ್ಥೆಯು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

16-8-2023

ಜಾವಾ 70/80(ಹೊಸ)	13300-13400
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	12900-13000
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1870)
ಒಂದು ವಾರದ ಡೆಲಿವರಿ	1845(1865)
ಸೋಯಾ ಕಚ್ಚಾ	915(885)
ಪಾಮ್ ವಾರದ ಡೆಲಿವರಿ	853(838)
ಸೂರ್ಯಕಾಂತಿ ಎಣ್ಣೆ ಕಚ್ಚಾ	880(875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,650 (58,600)
ಬೆಳ್ಳಿ ಕೆ.ಜಿ 70,250 (70,000)

ಆವರಣದಲ್ಲಿ ಸೋಮವಾರದ ಧಾರಣೆ

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹2000-2600
ಮಧ್ಯಮ	₹1600-2000
ಸಣ್ಣ	₹1000-1600

ಸುಧಾ, ಮಯೂರ ಓದಿರಿ

ಮೊಬೈಲ್ ತಯಾರಿಕೆಯಲ್ಲಿ ಭಾರತಕ್ಕೆ 2ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2014ರಿಂದ 2022ರ ನಡುವೆ ಮೊಬೈಲ್ ಫೋನ್ ತಯಾರಿಕೆಯಲ್ಲಿ ಶೇಕಡ 23ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರವನ್ನು (ಸಿಎಜಿಆರ್) ದಾಖಲಿಸಿರುವ ಭಾರತವು, ಈಗ ವಿಶ್ವದಲ್ಲಿ ಎರಡನೆಯ ಅತಿಹೆಚ್ಚು ಸಂಖ್ಯೆಯಲ್ಲಿ ಮೊಬೈಲ್ ಫೋನ್‌ಗಳನ್ನು ತಯಾರಿಸುತ್ತಿರುವ ದೇಶವಾಗಿದೆ ಎಂದು ಕೌಂಟರ್‌ಪಾಯಿಂಟ್ ರಿಸರ್ಚ್ ಸಂಸ್ಥೆ ಹೇಳಿದೆ. ಮೊದಲ ಸ್ಥಾನದಲ್ಲಿ ಚೀನಾ ಇದೆ.

2014ರಲ್ಲಿ ದೇಶಿ ಮಾರುಕಟ್ಟೆಯಲ್ಲಿ ಭಾರತದಲ್ಲಿ ತಯಾರಾದ ಮೊಬೈಲ್ ಫೋನ್‌ಗಳ ಪಾಲು ಶೇ 19ರಷ್ಟು ಇತ್ತು. ಇದು ಈಗ ಶೇ 98ಕ್ಕೆ ತಲುಪಿದೆ ಎಂದು ಕೌಂಟರ್‌ಪಾಯಿಂಟ್ ವರದಿ ಹೇಳಿದೆ.

ಜಗತ್ತಿನಲ್ಲಿ ಮೊಬೈಲ್ ಫೋನ್ ತಯಾರಿಕೆಯಲ್ಲಿ ಭಾರತವು ಎರಡನೆಯ ಸ್ಥಾನದಲ್ಲಿ ಇದೆ ಎಂದು ಕೇಂದ್ರ ಸರ್ಕಾರ ಈಚೆಗೆ ಹೇಳಿತ್ತು. ಭಾರತದಲ್ಲಿ ಮೊಬೈಲ್‌ಗೆ ಬೇಡಿಕೆ ಹೆಚ್ಚುತ್ತಿರುವುದು, ಡಿಜಿಟಲ್ ಸಾಕ್ಷರತೆ ಹೆಚ್ಚಾಗುತ್ತಿರುವುದು ಮತ್ತು ಸ್ಥಳೀಯವಾಗಿ ತಯಾರಿಕೆ ಹೆಚ್ಚಿಸಲು ಸರ್ಕಾರ ನೀಡುತ್ತಿರುವ ಉತ್ತೇಜನ ಕ್ರಮಗಳು ಭಾರತವು ಎರಡನೆಯ ಸ್ಥಾನಕ್ಕೆ ಬರಲು ಕಾರಣ ಎಂದು ವರದಿ ಹೇಳಿದೆ.

ವಾರ್ಷಿಕ 2 ಲಕ್ಷ ಇ.ವಿ: ಮಹೀಂದ್ರ

ಕೇಪ್‌ಟೌನ್ (ಪಿಟಿಐ): ಮಹಾರಾಷ್ಟ್ರದ ಚಕಣ್‌ನಲ್ಲಿನ ಘಟಕದಲ್ಲಿ ವಿದ್ಯುತ್ ಚಾಲಿತ (ಇ.ವಿ) ವಾಹನಗಳ ಉತ್ಪಾದನೆಯು 2027ರಿಂದ 2029ರ ನಡುವೆ ಗರಿಷ್ಠ ಮಟ್ಟವನ್ನು ತಲುಪಲಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿ ಅಂದಾಜು ಮಾಡಿದೆ. ಆಗ ಈ ಘಟಕವು ವಾರ್ಷಿಕ 2 ಲಕ್ಷ ವಾಹನಗಳನ್ನು ಉತ್ಪಾದಿಸಲಿದೆ ಎಂದು ಕಂಪನಿ ಅಂದಾಜು ಮಾಡಿದೆ.

ಪುಣೆ ಸಮೀಪದ ಚಕಣ್‌ನಲ್ಲಿ ₹10 ಸಾವಿರ ಕೋಟಿ ವೆಚ್ಚದಲ್ಲಿ ಇ.ವಿ. ಉತ್ಪಾದನಾ ಘಟಕ ಆರಂಭಿಸಲು ಕಂಪನಿಗೆ ಜನವರಿಯಲ್ಲಿ ಅನುಮತಿ ಸಿಕ್ಕಿದೆ.

'ಬಾರ್ನ್ ಎಲೆಕ್ಟ್ರಿಕ್ ಶ್ರೇಣಿಯ ಮೊದಲ ವಾಹನವು ಮುಂದಿನ ವರ್ಷದ ಅಂತ್ಯಕ್ಕೂ ಮೊದಲು ಮಾರುಕಟ್ಟೆ ಪ್ರವೇಶಿಸುವ ನಿರೀಕ್ಷೆ ಇದೆ. ಇದಕ್ಕಿಂತ 4–5 ತಿಂಗಳು ಮೊದಲು ಚಕಣ್‌ನಲ್ಲಿ ಉತ್ಪಾದನೆ ಆರಂಭವಾಗಲಿದೆ' ಎಂದು ಕಂಪನಿಯ ಆಟೊಮೋಟಿವ್ ವಿಭಾಗದ ಅಧ್ಯಕ್ಷ ವಿಜಯ್ ನಕ್ರಾ ಅವರು ಹೇಳಿದ್ದಾರೆ.

ಕಂಪನಿಯು ಈಗ ಪ್ರಯಾಣಿಕ ವಾಹನ ವಿಭಾಗದಲ್ಲಿ ಎಕ್ಸ್‌ಯುವಿ400 ಇ.ವಿ.ಯನ್ನು ಮಾರಾಟ ಮಾಡುತ್ತಿದೆ. ಇ.ವಿ. ತ್ರಿಚಕ್ರ ವಾಹನಗಳ ವಿಭಾಗದಲ್ಲಿ ಕಂಪನಿಯು ಮುಂಚೂಣಿ ಸ್ಥಾನದಲ್ಲಿದ್ದು, ಭಾರತದಲ್ಲಿ ಶೇ 70ಕ್ಕಿಂತ ಹೆಚ್ಚಿನ ಮಾರುಕಟ್ಟೆ ಪಾಲು ಹೊಂದಿದೆ.

ಕಂಪನಿಯು ಒಟ್ಟು 5 ಇ.ವಿ. ಎಸ್‌ಯುವಿ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಉದ್ದೇಶ ಹೊಂದಿದೆ. 2030ಕ್ಕೆ ಕಂಪನಿಯು ಮಾರಾಟ ಮಾಡುವ ವಾಹನಗಳಲ್ಲಿ ಶೇ 30ರಷ್ಟು, ಇ.ವಿ. ವಾಹನಗಳಾಗಿರಲಿವೆ ಎಂದು ಕಂಪನಿ ಅಂದಾಜಿಸಿದೆ.

ಶಾಂತಿಸಾಗರದ ನೀರಲ್ಲಿ ಕಾಲರಾ ಅಂಶ ಇಲ್ಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕಲುಷಿತ ನೀರು ಸೇವನೆಯಿಂದಾಗಿ ಚಿತ್ರದುರ್ಗದ ಕವಾಡಿಗರಹಟ್ಟಿಯಲ್ಲಿ ನಡೆದಿರುವ ದುರ್ಘಟನೆಗೆ ಕಾರಣವಾದ ಸೂಕ್ಷ್ಮಾಣು ವಿಬ್ರಿಯೊ ಕಾಲರಾ ಬ್ಯಾಕ್ಟೀರಿಯಾ ಶಾಂತಿಸಾಗರದ (ಸೂಳೆಕೆರೆ) ನೀರಿನಲ್ಲಿ ಕಂಡುಬಂದಿಲ್ಲ.

ಚನ್ನಗಿರಿ ತಾಲ್ಲೂಕಿನಲ್ಲಿರುವ ಶಾಂತಿಸಾಗರದಿಂದ ಈಚೆಗೆ ಕಲುಷಿತ ನೀರು ಪೂರೈಕೆಯಾದ ಹಿನ್ನೆಲೆಯಲ್ಲಿ 6 ಜಾಕ್‌ವೆಲ್‌ಗಳಿಂದ ನೀರಿನ ಮಾದರಿ ಸಂಗ್ರಹಿಸಿ ಶಿವಮೊಗ್ಗದ ವೈದ್ಯಕೀಯ ಕಾಲೇಜಿನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ನೀರಿನಲ್ಲಿ ಸೂಕ್ಷ್ಮಾಣು ಇರುವುದಾಗಿ ವರದಿ ತಿಳಿಸಿತ್ತು.

ಸೂಕ್ಷ್ಮಾಣುವಿನ ವಿವರ ಪತ್ತೆಗಾಗಿ 2ನೇ ಹಂತದ ಪರೀಕ್ಷೆ ನಡೆಸಲಾಗಿದ್ದು, 5 ಜಾಕ್‌ವೆಲ್‌ಗಳ ಮಾದರಿಯಲ್ಲಿ ಯಾವುದೇ ಸೂಕ್ಷ್ಮಾಣು ಪತ್ತೆಯಾಗಿಲ್ಲ. ಒಂದರಲ್ಲಿ (3ನೇ ಜಾಕ್‌ವೆಲ್) 'ಹಿರೊಮೊನಸ್ ಸೊಬ್ರಿರಿಯಾ' ಬ್ಯಾಕ್ಟೀರಿಯಾ ಪತ್ತೆಯಾಗಿದೆ.

'ಈ ಬ್ಯಾಕ್ಟೀರಿಯಾ ವಾಂತಿ-ಭೇದಿಗೆ ಕಾರಣವಾಗಬಲ್ಲದು. ಕ್ಲೋರಿನೇಷನ್ ಆಗಿದ್ದರಿಂದ ಯಾವುದೇ ರೀತಿಯ ಸಮಸ್ಯೆಯಾಗಿಲ್ಲ. ಚಿತ್ರದುರ್ಗ ಘಟನೆಗೆ ಶಾಂತಿಸಾಗರದ ನೀರಲ್ಲಿ ಕಂಡು ಬಂದ ಸೂಕ್ಷ್ಮಾಣು ಕಾರಣವಲ್ಲ. ಕವಾಡಿಗರಹಟ್ಟಿಯಲ್ಲಿ ಪೂರೈಕೆಯಾದ ನೀರಿನ ಮಾದರಿಯಲ್ಲಿ ಪತ್ತೆಯಾದ ಸೂಕ್ಷ್ಮಾಣು ಇಲ್ಲಿ ಪತ್ತೆಯಾಗಿಲ್ಲ' ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

7ನೇ ವರ್ಷದ ಚಿರಸ್ಮರಣೆ



ಶ್ರೀ. ಎ. ಕೃಷ್ಣಪ್ಪನವರು
ನಿಧನ: 17–08–2016
ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷವಾಯಿತು. ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ. ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ.
ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ ಶ್ರೀಮತಿ. ಶಾಂತಮ್ಮ, ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು ಮತ್ತು ಬಂಧುಮಿತ್ರರು.

8ನೇ ವರ್ಷದ ಚಿರಸ್ಮರಣೆ



ಶ್ರೀಮತಿ ಲಕ್ಷ್ಮಮ್ಮ
(ದಿ॥ ಶ್ರೀ ಸಿದ್ಧಗಂಗಯ್ಯನವರ ಧರ್ಮಪತ್ನಿ)
ಜನನ: 20.04.1953 • ನಿಧನ: 17.08.2016
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-44500
ಹಳತು	46000-48000
ಕುಮಟಾ	
ಚಿಪ್ಪು	31569-35019
ಕೋಕ	20169-33599
ಫ್ಯಾಕ್ಟರಿ	14509-23299
ಹಳೆಚಾಲಿ	39999-42629
ಹೊಸಚಾಲಿ	38509-41309
ಸಾಗರ	
ಬಿಳಿಗೋಟು	30811-33609
ಚಾಲಿ	37400-38601
ಕೋಕ	32009-33899
ರಾಶಿ	46899-49309
ಸಿಪ್ಪೆಗೋಟು	18299-21759
ಶಿವಮೊಗ್ಗ	
ಬೆಟ್ಟೆ	48199-51300
ಸಿದ್ದಾಪುರ	
ಬಿಳಿಗೋಟು	31800-35999
ಚಾಲಿ	36599-41800
ಕೋಕ	31299-34899
ಕೆಂಪುಗೋಟು	34600-34799
ರಾಶಿ	43249-49299
ತಟ್ಟಿಬೆಟ್ಟೆ	38109-44689
ಶಿರಸಿ	
ಬೆಟ್ಟೆ	41723-44899
ಬಿಳಿಗೋಟು	27409-36109
ಚಾಲಿ	37299-43199
ಕೆಂಪುಗೋಟು	35999-37699
ರಾಶಿ	47199-49899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13500	13500	149.25 ಸೆಂಟ್ಸ್
ಎಸಿ	---	6700	6800	
ಆರ್‌ಪಿ	---	10100	10100	ಲಂಡನ್
ಆರ್‌ಸಿ	---	244	5925	2603 ಡಾಲರ್ಸ್

'ಕಲ್ಯಾಣ'ಕ್ಕೆ ಬರಲು ಶಿಕ್ಷಕರ ಹಿಂದೇಟು

ಒಂದನೇ ಪುಟದಿಂದ...

ಪ್ರೌಢಶಾಲೆಗಳಲ್ಲಿ ಸಹ ಮಂಜೂರಾದ 12,696 ಹುದ್ದೆಗಳಲ್ಲಿ 3,523 ಹುದ್ದೆಗಳು ನೇಮಕಾತಿಗಾಗಿ ಕಾಯುತ್ತಿವೆ. ಇದರ ನಡುವೆ 2,504 ಶಿಕ್ಷಕರು ವರ್ಗಾವಣೆ ಆಗಿದ್ದಾರೆ.

'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಶಿಕ್ಷಕರ ಮರುಹಂಚಿಕೆ ಮಾಡುವುದಾಗಿ ಹೇಳಿದೆ. ರಾಜ್ಯದಲ್ಲಿ 27 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡಿದೆ. ಕಲಬುರಗಿ ವಿಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಅನ್ಯ ವಿಭಾಗಗಳಿಗೆ ಹೋಗಿದ್ದು, ಅವರ ಸ್ಥಾನದಲ್ಲಿದ್ದ, ಹೆಚ್ಚುವರಿಯಾಗಿರುವ ಅತಿಥಿ ಶಿಕ್ಷಕರ ಸಂಖ್ಯೆ ಕಲಬುರಗಿ ವಿಭಾಗಕ್ಕೆ ಹಂಚಿಕೆಯಾಗಲಿದೆ' ಎಂದು ಡಿಡಿಪಿಐ ಸಕ್ರಪ್ಪಗೌಡ ಬಿರಾದಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಹೆಚ್ಚುವರಿ ಶಿಕ್ಷಕರನ್ನು ಕೊಡುವಂತೆ ಶಿಕ್ಷಣ ಇಲಾಖೆಯ ಆಯುಕ್ತಾಲಯದಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ(ಕೆಕೆಆರ್‌ಡಿಬಿ) ಪ್ರಸ್ತಾವ ಸಲ್ಲಿಸಲಾಗಿದೆ. ಕೆಕೆಆರ್‌ಡಿಬಿಯು ಜಿಲ್ಲಾವಾರು ಮಾಹಿತಿ ಕಲೆ ಹಾಕಿ ಅತಿಥಿ ಶಿಕ್ಷಕರನ್ನು ಕೊಡಲಿದೆ. ಕೊರತೆ ಎದುರಾಗುವ ಸ್ಥಳಗಳಿಗೆ ಅತಿಥಿ ಶಿಕ್ಷಕರನ್ನು ನಿಯೋಜಿಸಿಕೊಂಡು ಬೋಧನೆಯನ್ನು ಸರಿದೂಗಿಸಲಾಗುವುದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

5 ಜಿಲ್ಲೆಗಳಲ್ಲಿ ಎರಡಂಕಿಯೂ ದಾಟಿಲ್ಲ!

ರಾಯಚೂರು (5,335), ಯಾದಗಿರಿ (3,917), ಕಲಬುರಗಿ(3,463), ಬಳ್ಳಾರಿ(2,450) ಮತ್ತು ಬೀದರ್(1,469) ಅಧಿಕ ಶಿಕ್ಷಕರ ಕೊರತೆ ಇರುವ ಜಿಲ್ಲೆಗಳು. ಈ ಐದು ಜಿಲ್ಲೆಗಳ ಪೈಕಿ ಬೀದರ್ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಮೂರಂಕಿಯಷ್ಟು ಶಿಕ್ಷಕರು ವರ್ಗವಾಗಿದ್ದು, ಎರಡಂಕಿಯಷ್ಟೂ ಶಿಕ್ಷಕರು ಬಂದಿಲ್ಲ.

ಬಳ್ಳಾರಿ(172) ನಾಲ್ವರು, ಬೀದರ್ (21) ಎಂಟು, ಕಲಬುರಗಿ(330) ಒಂಬತ್ತು, ರಾಯಚೂರಿ (981) ನಾಲ್ಕು ಹಾಗೂ ಯಾದಗಿರಿಯಲ್ಲಿ(459) ಐದು ಶಿಕ್ಷಕರು ಹೊರ ವಿಭಾಗಗಳಿಂದ ಬಂದಿದ್ದಾರೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಅಧಿಕಾರಕ್ಕೆ ಮುನ್ನವೇ ಕಾರ್ಯಾದೇಶ!

ಒಂದನೇ ಪುಟದಿಂದ...

ಸಂಸ್ಥೆಯ ರೋಗಿಗಳಿಗೆ ಪ್ರತಿ ಪೆಟ್‌ಸ್ಕ್ಯಾನ್‌ಗೆ ₹ 7,200 ಹಾಗೂ ಹೊರಗಡೆಯ ರೋಗಿಗಳಿಗೆ ₹ 9,200 ನಿಗದಿಪಡಿಸಲಾಗಿತ್ತು. ಡಾ.ವಿ.ಲೋಕೇಶ್ ಅವರು ನಿರ್ದೇಶಕರಾಗಿ ನೇಮಕವಾದ ಬಳಿಕ ಹಳೆಯ ಕಾರ್ಯಾದೇಶ ರದ್ದುಪಡಿಸಿ, ಕೆಲವೊಂದು ಬದಲಾವಣೆಯೊಂದಿಗೆ ಹೊಸದಾಗಿ ಕಾರ್ಯಾದೇಶ ಹೊರಡಿಸಿದ್ದಾರೆ ಎಂಬ ಆರೋಪಿಸಲಾಗಿದೆ. 2022ರ ಆ.18ರ ಕಾರ್ಯಾದೇಶದಲ್ಲಿ ಇರುವ ಸಹಿ ತಮ್ಮದಲ್ಲವೆಂದು ಡಾ.ಸಿ. ರಾಮಚಂದ್ರ ಸ್ಪಷ್ಟಪಡಿಸಿದ್ದಾರೆ.

3 ಲಕ್ಷಕ್ಕೂ ಅಧಿಕ ಮಂದಿಗೆ ಚಿಕಿತ್ಸೆ: ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸಂಸ್ಥೆಯಲ್ಲಿನ 'ಪೆಟ್‌ಸ್ಕ್ಯಾನ್' ಘಟಕದಲ್ಲಿ ಪರೀಕ್ಷೆಗೆ ಒಳಗಾಗುವ ಪ್ರತಿ ರೋಗಿಯೂ ನಿಗದಿತ ಕೌಂಟರ್‌ನಲ್ಲಿ ಟೋಕನ್ ಪಡೆದು, ಪೆಟ್‌ಸ್ಕ್ಯಾನ್‌ಗೆ ಒಳಪಡಬೇಕೆಂಬ ನಿಯಮ ಟೆಂಡರ್‌ನಲ್ಲಿದೆ. ವಿತರಿಸಲಾದ ಟೋಕನ್ ಅನುಸಾರ ಸಂಸ್ಥೆಯು ಪೆಟ್‌ಸ್ಕ್ಯಾನ್ ಸೇವೆ ಒದಗಿಸುವವರಿಗೆ ಹಣ ಪಾವತಿಸಬೇಕಿದೆ. ಸಂಸ್ಥೆಯ ಹಾಗೂ ಹೊರಗಿನ ರೋಗಿಗಳು ನೇರವಾಗಿ ಪೆಟ್ ಸ್ಕ್ಯಾನ್‌ಗೆ ಒಳಪಡುವಂತಿಲ್ಲ. ಆದರೆ, ಈಗ ಈ ನಿಯಮ ಪಾಲನೆಯಾಗುತ್ತಿಲ್ಲ ಎಂದು ಅಲ್ಲಿನ ಸಿಬ್ಬಂದಿ ದೂರಿದ್ದಾರೆ.

'ಪೆಟ್‌ಸ್ಕ್ಯಾನ್‌ಗೆ ಸಂಬಂಧಿಸಿದ ಟೆಂಡರ್ ಪಾರದರ್ಶಕವಾಗಿ ನಡೆದಿಲ್ಲ. ಈ ಹಿಂದೆ ಸಿದ್ಧಪಡಿಸಿದ ಕರಡನ್ನು ತಿದ್ದುಪಡಿ ಮಾಡಲಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ನೇರವಾಗಿ ಪೆಟ್‌ಸ್ಕ್ಯಾನ್ ಮಾಡಿಸಿಕೊಳ್ಳಲು ಅವಕಾಶ ನೀಡಲಾಗುತ್ತಿದ್ದು, ಹೆಚ್ಚಿನ ಹಣ ಪಡೆಯಲಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಂಸ್ಥೆಯ ಸಿಬ್ಬಂದಿಯೊಬ್ಬರು ತಿಳಿಸಿದರು.

ಅನಗತ್ಯ ಗೊಂದಲ ಸೃಷ್ಟಿ: ಲೋಕೇಶ್

'ಸಂಸ್ಥೆಯ ಹಿಂದಿನ ನಿರ್ದೇಶಕರು ಟೆಂಡರ್‌ಗೆ ಕಾರ್ಯಾದೇಶ ಹೊರಡಿಸಿದ್ದರು. ಇದಕ್ಕೆ 2022ರ ಅಕ್ಟೋಬರ್ ತಿಂಗಳಲ್ಲಿ ಅಣು ಶಕ್ತಿ ನಿಯಂತ್ರಣ ಮಂಡಳಿ (ಎಇಆರ್‌ಬಿ) ಅನುಮೋದನೆ ನೀಡಿತ್ತು. ಆದ್ದರಿಂದ ಟೆಂಡರ್ ಪ್ರತಿಗೆ ಸಹಿ ಹಾಕಲಾಯಿತು. ಅದರ ಮೇಲೆ ಎಇಆರ್‌ಬಿ ಅನುಮೋದನೆ ಎಂದು ಸಹ ಬರೆಯಲಾಗಿದೆ. ಅನಗತ್ಯವಾಗಿ ಗೊಂದಲ ಸೃಷ್ಟಿಸಲಾಗುತ್ತಿದೆ' ಎಂದು ಡಾ.ವಿ.ಲೋಕೇಶ್ ಹೇಳಿದರು.

'ಪೆಟ್‌ಸ್ಕ್ಯಾನ್‌ಗೆ ಟೆಂಡರ್‌ನಲ್ಲಿ ನಿಗದಿಪಡಿಸಿದ ಹಣವನ್ನು ಮಾತ್ರ ಪಡೆಯಾಗುತ್ತಿದೆ. ಯಾವುದೇ ರೀತಿಯ ಹೆಚ್ಚುವರಿ ಹಣವನ್ನು ಪಡೆಯಲಾಗುತ್ತಿಲ್ಲ. ದರವನ್ನು ಮೊದಲೇ ನಿಗದಿಪಡಿಸಲಾಗಿತ್ತು' ಎಂದು ತಿಳಿಸಿದರು.



ಆಡಿ ಅಮಾವಾಸೆಯ ಪ್ರಯುಕ್ತ ತಮಿಳುನಾಡಿನ ರಾಮೇಶ್ವರದಲ್ಲಿ ಬುಧವಾರ ಭಕ್ತರು ಸ್ನಾನ ಮಾಡಿದರು –ಪಿಟಿಐ ಚಿತ್ರ

ನೇಪಾಳದಿಂದ 5 ಟನ್ ಟೊಮೆಟೊ

ನವದೆಹಲಿ (ಪಿಟಿಐ): ನೇಪಾಳದಿಂದ 5 ಟನ್ ಟೊಮೆಟೊ ಆಮದು ಮಾಡಿಕೊಳ್ಳಲಾಗುತ್ತಿದ್ದು, ಅದನ್ನು ಉತ್ತರ ಪ್ರದೇಶದಲ್ಲಿ ಕೆ.ಜಿ.ಗೆ ₹50ರಂತೆ ಗುರುವಾರದಿಂದ ಮಾರಾಟ ಮಾಡಲಾಗುವುದು ಎಂದು ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಬುಧವಾರ ತಿಳಿಸಿದೆ.

ನೇಪಾಳದಿಂದ ಒಟ್ಟು 10 ಟನ್ ಟೊಮೆಟೊ ತರಿಸಿಕೊಳ್ಳಲು ನಿರ್ಧರಿಸಲಾಗಿದೆ. ಅದರಲ್ಲಿ 3–4 ಟನ್‌ನಷ್ಟು ಟೊಮೆಟೊವನ್ನು ಮಂಗಳವಾರ ಉತ್ತರ ಪ್ರದೇಶದಲ್ಲಿ ವಿತರಣೆ ಮಾಡಲಾಗಿದೆ. ಈಗ 5 ಟನ್‌ನಷ್ಟು ಆಮದಾಗುತ್ತಿದ್ದು, ಗುರುವಾರ ಮಾರಾಟ ಮಾಡಲಾಗುವುದು ಎಂದು ಎನ್‌ಸಿಸಿಎಫ್‌ನ ವ್ಯವಸ್ಥಾಪಕ ನಿರ್ದೇಶಕಿ ಆ್ಯನ್ನಿ ಜೋಸೆಫ್ ಚಂದ್ರಾ ತಿಳಿಸಿದ್ದಾರೆ.

'ಕಾಂಗ್ರೆಸ್‌ಗೆ ಹೋಗುವ ಬದಲು ರಾಜಕೀಯ ನಿವೃತ್ತಿ'

ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ: ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಬಿಜೆಪಿ ಬಿಟ್ಟು ಹೋಗುವುದಿಲ್ಲ. ಕಾಂಗ್ರೆಸ್‌ಗೆ ಹೋಗುವುದರ ಬದಲು ರಾಜಕೀಯ ನಿವೃತ್ತಿ ತೆಗೆದುಕೊಳ್ಳಲು ಸಿದ್ಧ' ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದ್ದಾರೆ.

'ಬಿಜೆಪಿಗೆ ಈ ಹಿಂದೆ ಕಾಂಗ್ರೆಸ್‌ನಿಂದ ಬಂದವರಲ್ಲಿ ಯಾರು ಮರಳಿ ಹೋಗುತ್ತಾರೋ ಗೊತ್ತಿಲ್ಲ. ನಾನಂತೂ ಹೋಗಲ್ಲ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಕಾಂಗ್ರೆಸ್ ಹೋಗುವ ಅವಶ್ಯ ನನಗೆ ಇಲ್ಲ. ಅಧಿಕಾರಕ್ಕಾಗಿ ನಾನು ಪಕ್ಷ ಬಿಟ್ಟು ಹೋಗಲ್ಲ. ನನ್ನ ಮುಂದಿನ ರಾಜಕೀಯ ಜೀವನ ಏನಿದ್ದರೂ ಬಿಜೆಪಿಯಲ್ಲೇ. ಬಿಜೆಪಿ ಬಗ್ಗೆ ನಂಬಿಕೆ ಮತ್ತು ಗೌರವ ಇದೆ. ಪಕ್ಷ ನನ್ನನ್ನು ಗೌರವದಿಂದ ನೋಡಿಕೊಳ್ಳುತ್ತಿದೆ. ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅತ್ಯಂತ ಗೌರವದಿಂದ ಮಾತನಾಡಿಸುತ್ತಾರೆ' ಎಂದು ಹೇಳಿದರು.

'ಡಿ.ಕೆ.ಶಿವಕುಮಾರ್ ಮನೆಗೆ ಯಾರೂ ಹಿಂಬಾಗಿಲಿನಿಂದ ಹೋಗಿಲ್ಲ, ಬುರ್ಕಾ ಹಾಕಿಕೊಂಡೂ ಹೋಗಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಡಿ.ಕೆ.ಶಿವಕುಮಾರ್ ತಮ್ಮ ರಾಜಕೀಯ ಗುರು ಎಂದು ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಹೇಳಿಕೊಂಡಿರುವುದು ಅವರ ವೈಯಕ್ತಿಕ ಅಭಿಪ್ರಾಯ. ನಾನು ಮತ್ತು ಡಿ.ಕೆ. ಸುರೇಶ್ 40 ವರ್ಷಗಳಿಂದ ಸ್ನೇಹಿತರು. ನನ್ನ ರಾಜಕೀಯ ಗುರು ಬಿ.ಕೆ.ಹರಿಪ್ರಸಾದ್. ಆದರೆ ಅದು ರಾಜಕೀಯ ಕಾರಣಕ್ಕೆ ಅಲ್ಲ. ನಮ್ಮ ಊರಿನ ಸಂಬಂಧ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಜತೆ ವ್ಯಕ್ತಿಗತ ದ್ವೇಷವಿಲ್ಲ' ಎಂದೂ ಮುನಿರತ್ನ ಹೇಳಿದರು.

ಬಿಜೆಪಿ ಬಿಟ್ಟು ಯಾರೂ ಹೋಗಲ್ಲ:ಸಿ.ಟಿ.ರವಿ

'ಬಿಜೆಪಿ ಬಿಟ್ಟು ಯಾರೂ ಹೋಗುವುದಿಲ್ಲ. ಈ ಬಗ್ಗೆ ವದಂತಿ ಹರಡಿಸಲಾಗುತ್ತಿದೆ. ಹೀಗಾಗಿ ನಾನು ಯಾರನ್ನೂ ಅನುಮಾನದಿಂದ ನೋಡುವುದಿಲ್ಲ' ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ತಮ್ಮ ರಾಜಕೀಯ ಗುರು ಎಂದು ಎಸ್.ಟಿ.ಸೋಮಶೇಖರ್ ಹೇಳಿರುವ ಬಗ್ಗೆ ಚರ್ಚೆ ನಡೆಯುತ್ತಿದೆ. ಯಾವ ರೀತಿ ಗುರು ಎಂಬುದನ್ನು ಹೇಳಿಲ್ಲ. ಅವರ ಹೇಳಿಕೆಯಲ್ಲಿ ತಪ್ಪೇನಿಲ್ಲ. ಒಂದೋ ಇವರು ಗುರುವಿನ ಮಾತು ಮೀರಿರಬೇಕು. ಇಲ್ಲವೇ ಗುರುವೇ ಇವರಿಗೆ ಬೆಂಬಲ ಕೊಟ್ಟಿರಬಹುದು ಎಂದು ಹೇಳಿದರು.

'ಡಿ.ಕೆ.ಶಿವಕುಮಾರ್ ಈಗ ಉಪಮುಖ್ಯಮಂತ್ರಿ. ಮುಂದೆ ಮುಖ್ಯಮಂತ್ರಿ ಆಗುವವರು. ಆದರೆ, ಇನ್ನೂ 'ಆ ದಿನಗಳ' ಗುಂಗಿನಲ್ಲೇ ಇದ್ದಾರೆ. ಎಲ್ಲರಿಗೂ ಸಲ್ಲುವ ವ್ಯಕ್ತಿಯಾಗಿ ರೂಪುಗೊಳ್ಳಬೇಕು. ಎಸ್.ಎಂ.ಕೃಷ್ಣ ಅವರಂತೇ ಎಲ್ಲರೂ ಒಪ್ಪುವಂತ ರಾಜಕಾರಣಿಯಾಗಬೇಕು. ನಾನು ಡಿ.ಕೆ. ಶಿವಕುಮಾರ್ ಅವರಷ್ಟು ದೊಡ್ಡವನಲ್ಲ, ಶ್ರೀಮಂತನಲ್ಲ, ಆರ್ಥಿಕವಾಗಿ ಶಕ್ತಿಶಾಲಿಯೂ ಅಲ್ಲ. ಹಿತೈಷಿಯಾಗಿ ಹೇಳುತ್ತಿದ್ದೇನೆ' ಎಂದು ರವಿ ಹೇಳಿದರು.

'ಎಲ್ಲರ ವಿಶ್ವಾಸದೊಂದಿಗೆ ಜಿಲ್ಲೆ ವಿಭಜನೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಭೌಗೋಳಿಕವಾಗಿ ತುಂಬಾ ದೊಡ್ಡದಾದ ಬೆಳಗಾವಿ ಜಿಲ್ಲೆಯನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವಿಭಜಿಸಬೇಕು ಎಂಬ ಒತ್ತಡ ಇದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೆ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಗೋಕಾಕ ಮತ್ತು ಚಿಕ್ಕೋಡಿ ಕೇಂದ್ರಿತವಾಗಿ ಮತ್ತೆ ಎರಡು ಜಿಲ್ಲೆಗಳನ್ನು ರಚಿಸಬೇಕು ಎಂಬುದು ಜನರ ಬೇಡಿಕೆ. ನನ್ನ ಆಗ್ರಹವೂ ಇದೇ ಆಗಿದೆ. ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ' ಎಂದು ಅವರು ನಗರದಲ್ಲಿ ಬುಧವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

'ಬೆಳಗಾವಿ ತಾಲ್ಲೂಕು ವ್ಯಾಪ್ತಿ ದೊಡ್ಡದಾಗಿದೆ. ಹೀಗಾಗಿ ಬೆಳಗಾವಿ ಉತ್ತರ, ದಕ್ಷಿಣ ಅಥವಾ ಗ್ರಾಮೀಣ ಕ್ಷೇತ್ರಗಳ ಪೈಕಿ ಎಲ್ಲಾದರೂ ಹೊಸ ತಾಲ್ಲೂಕು ಕೇಂದ್ರ ಮಾಡಲಾಗುವುದು' ಎಂದರು.

ಭಾರತ– ಐರ್ಲೆಂಡ್ ಟಿ20 ಸರಣಿಯ ಮೊದಲ ಪಂದ್ಯ ನಾಳೆ

ನೆಟ್ಸ್‌ನಲ್ಲಿ ಬೂಮ್ರಾ ಯಾರ್ಕರ್

ಡಬ್ಲಿನ್, ಐರ್ಲೆಂಡ್ (ಪಿಟಿಐ): ಸುಮಾರು 11 ತಿಂಗಳುಗಳ ನಂತರ ಜಸ್‌ಪ್ರೀತ್ ಬೂಮ್ರಾ ಭಾರತ ತಂಡದ ನೆಟ್ಸ್‌ಗೆ ಮರಳಿದರು.

ಬುಧವಾರ ಇಲ್ಲಿಯ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿದ ಬೂಮ್ರಾ ತಮ್ಮ ದೈಹಿಕ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಿದರು. 2022ರ ಸೆಪ್ಟೆಂಬರ್ 25ರಂದು ಹೈದರಾಬಾದ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾದ ಎದುರಿನ ಟಿ20 ಪಂದ್ಯದಲ್ಲಿ ಆಡಿದ್ದ ಅವರು ನಂತರ ಕಣಕ್ಕಿಳಿದಿರಲಿಲ್ಲ.

ಬೆನ್ನಿಗೆ ಆದ ಗಾಯದ ಶಸ್ತ್ರಚಿಕಿತ್ಸೆಯಿಂದಾಗಿ ದೀರ್ಘ ಕಾಲ ವಿಶ್ರಾಂತಿ ಮತ್ತು ಪುನಶ್ಚೇತನ ಪ್ರಕ್ರಿಯೆಯಲ್ಲಿ ಅವರಿದ್ದರು. ಇದೀಗ ಐರ್ಲೆಂಡ್‌ನಲ್ಲಿ ಶುಕ್ರವಾರದಿಂದ ನಡೆಯಲಿರುವ ಟಿ20 ಸರಣಿಯಲ್ಲಿ ತಂಡವನ್ನು ಮುನ್ನಡೆಸುವರು.

29 ವರ್ಷದ ಬೂಮ್ರಾ ಮುಂಬರುವ ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗಳಲ್ಲಿ ಆಡಲು ಸಮರ್ಥರಾಗುವರೇ ಎಂಬ ಕುತೂಹಲ ಈಗ ಇದೆ. ಆದರಿಂದಾಗಿ ಈ ಟೂರ್ನಿಯು ಮಹತ್ವದ್ದಾಗಿದೆ. ಅವರು ತಂಡಕ್ಕೆ ಮರಳುವುದರಿಂದ ಬೌಲಿಂಗ್ ವಿಭಾಗವು ಬಲಿಷ್ಠವಾಗುವ ನಿರೀಕ್ಷೆ ಇದೆ.


ಐರ್ಲೆಂಡ್‌ನಲ್ಲಿ ಅಭ್ಯಾಸ ಮಾಡಿದ ಭಾರತ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ, ಸಹ ಆಟಗಾರರು ಹಾಗೂ ನೆರವು ಸಿಬ್ಬಂದಿ –ಟ್ವಿಟರ್ ಚಿತ್ರ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಬೂಮ್ರಾ ಅಭ್ಯಾಸದ ವಿಡಿಯೊ ತುಣುಕುಗಳನ್ನು ಪ್ರಕಟಿಸಿದೆ. ಅವರು ಬಲಗೈ ಬ್ಯಾಟರ್‌ಗೆ ಉತ್ತಮ ಬೌನ್ಸರ್ ಪ್ರಯೋಗಿಸಿದರು. ಎಡಗೈ ಬ್ಯಾಟರ್‌ಗೆ ತಮ್ಮ ನೆಚ್ಚಿನ ಯಾರ್ಕರ್ ಎಸೆತವನ್ನೂ ಪ್ರಯೋಗಿಸುವಲ್ಲಿ ಯಶಸ್ವಿಯಾದರು.

ಇದೇ ತಂಡದಲ್ಲಿ ಕನ್ನಡಿಗ, ವೇಗಿ ಪ್ರಸಿದ್ಧಕೃಷ್ಣ ಕೂಡ ಇದ್ದಾರೆ. ಅವರು ಕೂಡ ದೀರ್ಘ ಸಮಯದಿಂದ ಕಣದಿಂದ ಹೊರಗಿದ್ದರು. ಬೆನ್ನಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಪಡೆದ ನಂತರ ಕಣಕ್ಕೆ ಮರಳಿದ್ದಾರೆ.

ಸಂಜುಗೆ ಜಿತೇಶ್ ಸ್ಪರ್ಧೆ: ಉದಯೋನ್ಮುಖ ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ಬೂಮ್ರಾ ಬಳಗದಲ್ಲಿದ್ದಾರೆ. ಅನುಭವಿ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರೂ ಇದ್ದಾರೆ. ಇವರಿಬ್ಬರ ಸಾಮರ್ಥ್ಯ ಪರೀಕ್ಷೆಗೆ ಈ ಟೂರ್ನಿ ವೇದಿಕೆಯಾಗಲಿದೆ.

ಕೇರಳದ ಸಂಜು ಈಚೆಗೆ ಆಡಿದ ಮೂರು ಟಿ20 ಪಂದ್ಯಗಳಲ್ಲಿ (12, 7 ಮತ್ತು 13 ರನ್) ಗಮನ ಸೆಳೆಯುವಲ್ಲಿ ವಿಫಲರಾಗಿದ್ದರು. ಇದರಿಂದಾಗಿ ಜಿತೇಶ್ ಅವರಿಗೆ ಐರ್ಲೆಂಡ್‌ನಲ್ಲಿ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿದೆ.

ಮಹಾರಾಷ್ಟ್ರದ ಅಮರಾವತಿಯ 29 ವರ್ಷದ ಕ್ರಿಕೆಟಿಗ ಶರ್ಮಾ ಏಷ್ಯನ್ ಗೇಮ್ಸ್‌ನಲ್ಲಿ ಆಡುವ ತಂಡದಲ್ಲಿಯೂ ಇದ್ದಾರೆ. ತಂಡದಲ್ಲಿ ಪ್ರಭಸಿಮ್ರನ್ ಸಿಂಗ್ ಅವರೂ ಇದ್ದಾರೆ. ಆದರೆ ಶರ್ಮಾ ಅವರಿಗೆ ಆದ್ಯತೆ ದೊರೆಯುವುದು ಖಚಿತ. ಅದರಿಂದಾಗಿ ಪೂರ್ವಭಾವಿ ಸಿದ್ಧತೆಗಾಗಿ ಐರ್ಲೆಂಡ್‌ನಲ್ಲಿ ಅವರಿಗೆ ಹೆಚ್ಚು ಪ್ರಾಶಸ್ತ್ಯ ಸಿಗುವ ನಿರೀಕ್ಷೆ ಇದೆ.

ಮುಖ್ಯಾಂಶಗಳು
- 11 ತಿಂಗಳುಗಳ ನಂತರ ಮತ್ತೆ ಕಣಕ್ಕೆ ಇಳಿದ ಬೂಮ್ರಾ
- ಭಾರತದ ಬೌಲಿಂಗ್ ವಿಭಾಗ ಬಲಿಷ್ಠವಾಗುವ ನಿರೀಕ್ಷೆ
- ತಂಡದಲ್ಲಿ ಸ್ಥಾನ ಪಡೆದಿರುವ ಕನ್ನಡಿಗ, ವೇಗಿ ಪ್ರಸಿದ್ಧಕೃಷ್ಣ

ಕೆಎಸ್‌ಸಿಎ ಲೀಗ್: ವರುಣ್ 336 ರನ್



ಮೈಸೂರು: ನ್ಯಾಷನಲ್ ಕ್ರಿಕೆಟ್ ಕ್ಲಬ್ ಆಟಗಾರ ವರುಣ್ ಪಟೇಲ್ ಲೋಕೇಶ, ಬುಧವಾರ ಇಲ್ಲಿನ ಎಸ್‌ಜೆಸಿಇ ಕ್ರಿಕೆಟ್ ಮೈದಾನದಲ್ಲಿ ನಡೆದ ಕೆಎಸ್‌ಸಿಎ ಮೈಸೂರು ವಲಯ 16 ವರ್ಷದ ಒಳಗಿನವರ ಲೀಗ್ ಟೂರ್ನಿಯಲ್ಲಿ 336 ರನ್ ಗಳಿಸಿ ದಾಖಲೆ ಬರೆದರು.

ತಂಡದ ಆರಂಭಿಕ ಬ್ಯಾಟರ್ ವರುಣ್ 179 ಎಸೆತಗಳಲ್ಲಿ ಈ ದಾಖಲೆಯ ಮೊತ್ತ ಪೇರಿಸಿದರು. ಅದರಲ್ಲಿ 51 ಬೌಂಡರಿ ಹಾಗೂ 6 ಸಿಕ್ಸರ್ ದಾಖಲಿಸಿ ಅಜೇಯರಾಗಿ ಉಳಿದರು. ಕ್ರೀಸ್‌ನ ಮತ್ತೊಂದು ತುದಿಯಲ್ಲಿ ಇವರಿಗೆ ಸಾಥ್ ನೀಡಿದ ಎಂ.ಎಸ್. ರಾಹುಲ್ 101 ಎಸೆತಗಳಲ್ಲಿ 156 ರನ್ ಸಿಡಿಸಿ ಅಜೇಯರಾಗಿ ಉಳಿದರು. ಪರಿಣಾಮವಾಗಿ ನ್ಯಾಷನಲ್ ಕ್ಲಬ್ ತಂಡವು ನಿಗದಿತ 50 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 550 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಗುರಿ ಬೆನ್ನು ಹತ್ತಿದ ಮೈಸೂರು ಅಂಡರ್ ರೈಟರ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 27.4 ಓವರ್‌ಗಳಲ್ಲಿ ಕೇವಲ 74 ರನ್‌ಗಳಿಗೆ ಆಲೌಟ್ ಆಯಿತು.

ಫೈನಲ್‌ಗೆ ಇಂಗ್ಲೆಂಡ್ ಲಗ್ಗೆ

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಆಸ್ಟ್ರೇಲಿಯಾ ಕನಸು ಭಗ್ನ

ಸಿಡ್ನಿ (ಎಎಫ್‌ಪಿ): ಇಂಗ್ಲೆಂಡ್ ತಂಡದ ಲಾರೆನ್ ಹೆಂಪ್ ಮತ್ತು ಆಲಿಸಿಯಾ ರುಸೊ ಅವರು ಕೊನೆಗಳಿಗೆಯಲ್ಲಿ ತೋರಿದ ಅಮೋಘ ಪ್ರದರ್ಶನದಿಂದ, ಆತಿಥೇಯ ಆಸ್ಟ್ರೇಲಿಯಾ ಕನಸು ನುಚ್ಚುನೂರಾಯಿತು. ಬುಧವಾರ ನಡೆದ ಮಹಿಳಾ ವಿಶ್ವಕಪ್ ಸೆಮಿಫೈನಲ್‌ನಲ್ಲಿ ನಿರ್ದಯ ಪ್ರದರ್ಶನ ನೀಡಿದ ಇಂಗ್ಲೆಂಡ್ ತಂಡ 3–1 ಗೋಲುಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿತು.

ಇಂಗ್ಲೆಂಡ್ ಭಾನುವಾರ ನಡೆಯುವ ಫೈನಲ್‌ನಲ್ಲಿ ಸ್ಪೇನ್ ವಿರುದ್ಧ ಆಡಲಿದೆ.

ಮ್ಯಾಂಚೆಸ್ಟರ್ ಯುನೈಟೆಡ್ ತಂಡಕ್ಕೆ ಆಡುವ ಇಲಾ ಟೂನ್, ವಿರಾಮಕ್ಕೆ 9 ನಿಮಿಷಗಳಿರುವಾಗ ಇಂಗ್ಲೆಂಡ್ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟರು. ಅವರು ಬಲವಾಗಿ ಒದ್ದ ಚೆಂಡು ಶರವೇಗದಲ್ಲಿ ಗೋಲಿನೊಳಕ್ಕೆ ಸೇರಿತು.

ಆದರೆ, ಗಾಯದಿಂದ ಚೇತರಿಸಿಕೊಂಡು ಮೊದಲ ಸಲ ಕಾಂಗರೂ ಪಡೆಗೆ ಮರಳಿದ ಸ್ಟಾರ್ ಆಟಗಾರ್ತಿ ಸ್ಯಾಮ್ ಕೆರ್, ಉತ್ತರಾರ್ಧದಲ್ಲಿ ಗಳಿಸಿದ ಅಮೋಘ ಗೋಲಿನಿಂದ ಪಂದ್ಯಕ್ಕೆ ಕಳೆಯೇರಿತು. 63ನೇ ನಿಮಿಷ, ಎದುರಾಳಿ ತಂಡದ ರಕ್ಷಣಾ ಆಟಗಾರ್ತಿಯರನ್ನು ವಂಚಿಸಿ ಅವರು 30 ಯಾರ್ಡ್ ದೂರದಿಂದ ಒದ್ದ ಚೆಂಡು ಗುರಿಸೇರಿತು.

ಆದರೆ ತವರು ತಂಡವನ್ನು ಹುರಿದುಂಬಿಸುತ್ತಿದ್ದ ಪ್ರೇಕ್ಷಕರ ಸಂತಸ ಎಂಟು ನಿಮಿಷಗಳಲ್ಲೇ ಕರಗಿತು. ಹೆಂಪ್ ಗಳಿಸಿದ ಗೋಲಿನಿಂದ ಇಂಗ್ಲೆಂಡ್ ಮತ್ತೆ ಮುನ್ನಡೆಯಿತು. ಬಾಕ್ಸ್ ತುದಿಯಿಂದ ಅವರು ಒದ್ದ ಚೆಂಡು ಗೋಲಿನ ಮೂಲೆ ಸೇರಿತು. ಪಂದ್ಯ ಮುಗಿಯಲು ನಾಲ್ಕು ನಿಮಿಷಗಳಿರುವಾಗ ರುಸೊ, ಇಂಗ್ಲೆಂಡ್ ಪಾಳೆಯದಲ್ಲಿ ಸಂತಸದ ಅಲೆಗಳನ್ನೆಬ್ಬಿಸಿದರು.


ಗೋಲು ಗಳಿಸಿದ ಸಂಭ್ರಮದಲ್ಲಿ ಇಂಗ್ಲೆಂಡ್‌ನ ಲಾರೆನ್ ಹೆಂಪ್ – ಎಎಫ್‌ಪಿ ಚಿತ್ರ

‘ನಾವು ಫೈನಲ್ ತಲುಪಿದ್ದೇವೆ. ನಂಬಲು ಕಷ್ಟವಾಬುತ್ತಿದೆ. ನಾವೇ ಟೂರ್ನಿ ಗೆದ್ದ ಭಾವನೆ ಮೂಡಿದೆ. ಆದರೆ ನಾವಿನ್ನೂ (ವಿಶ್ವಕಪ್) ಗೆದ್ದಿಲ್ಲ. ಪಂದ್ಯವನ್ನು ಗೆದ್ದೆವಷ್ಟೇ’ ಎಂದು ಇಂಗ್ಲೆಂಡ್ ಕೋಚ್ ಸರಿನಾ ವೀಗ್ಮನ್ ಪ್ರತಿಕ್ರಿಯಿಸಿದರು.

ಇಂಗ್ಲೆಂಡ್‌ಗೆ ಇನ್ನು ಸ್ಪೇನ್ ಸವಾಲು ಎದುರಿಸಬೇಕಾಗಿದೆ. ಸ್ಪೇನ್ ತಂಡ ಮಂಗಳವಾರ ನಡೆದ ಸೆಮಿಫೈನಲ್‌ನಲ್ಲಿ ಅಪಾಯಕಾರಿ ಸ್ವೀಡನ್ ತಂಡವನ್ನು 2–1 ಗೋಲುಗಳಿಂದ ಸೋಲಿಸಿತ್ತು. ಹೀಗಾಗಿ ಈ ಬಾರಿ ಗೆಲ್ಲುವ ತಂಡ ಮೊದಲ ಬಾರಿ ಟ್ರೋಫಿ ಗೆದ್ದಂತೆ ಆಗಲಿದೆ.

ಇಂಗ್ಲೆಂಡ್ ಈ ಹಿಂದೆ ಎರಡು ಬಾರಿ– 2015 ಮತ್ತು 2019ರಲ್ಲಿ ಫೈನಲ್ ತಲುಪಿತ್ತು. ಎರಡೂ ಸಂದರ್ಭಗಳಲ್ಲಿ 2–1 ರಿಂದ ಸೋಲುಂಡಿತ್ತು.

ಆಸ್ಟ್ರೇಲಿಯಾ ಸೋಲನುಭವಿಸಿದರೂ ವಿಶ್ವಕಪ್‌ನಲ್ಲಿ ತನ್ನ ಶ್ರೇಷ್ಠ ಪ್ರದರ್ಶನವನ್ನು ಇಲ್ಲಿ ದಾಖಲಿಸಿತು. ಅದು ಮೂರನೇ ಸ್ಥಾನಕ್ಕಾಗಿ ನಡೆಯುವ ಪಂದ್ಯದಲ್ಲಿ ಶನಿವಾರ ಸ್ವೀಡನ್ ವಿರುದ್ಧ ಆಡಲಿದೆ.

ಸಂಕ್ಷಿಪ್ತ ಸುದ್ದಿ

ಚಿಕ್ಕಮಗಳೂರು ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ರಿಯಲ್ ಚಿಕ್ಕಮಗಳೂರು ಎಫ್.ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–1ರಿಂದ ಯಂಗ್ ಚಾಲೆಂಜರ್ಸ್ ತಂಡದವರನ್ನು ಮಣಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ರಿಯಲ್ ತಂಡದ ಅಲೋಕ್ ಸಿಂಗ್ ಚೌಹಾಣ್ (45 + 2ನೇ ಹಾಗೂ 90ನೇ ನಿ.) ಎರಡು ಗೋಲು ಗಳಿಸಿ ಮಿಂಚಿದರು. ಟಿ.ವಿ. ಪ್ರಫುಲ್ ಕುಮಾರ್ (63ನೇ), ಹರಿದಯಾ ವಿನಯ್ ಜೈನ್ (67ನೇ), ಎಸ್. ಸಚ್ಚಿದಾನಂದ (84ನೇ) ತಲಾ ಒಂದು ಗೋಲು ಗಳಿಸಿದರು. ಚಾಲೆಂಜರ್ಸ್ ಪರ ಶರತ್ ಕುಮಾರ್ (45 + 3ನೇ) ಏಕೈಕ ಗೋಲು ತಂದಿತ್ತರು. ಮತ್ತೊಂದು ಪಂದ್ಯದಲ್ಲಿ ಇಂಡಿಪೆಂಡೆಂಟ್ಸ್ ಎಫ್.ಸಿ ತಂಡವು 4–0ಯಿಂದ ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಪ್ರಸನ್ನ ಕುಮಾರ್ (41ನೇ), ಸರವಣಕುಮಾರ್ (60ನೇ), ವಿ.ಸುರೇಂದ್ರ ಪ್ರಸಾದ್ (63ನೇ) ಮತ್ತು ನಾಗೇಂದ್ರ ಪ್ರಸಾದ್ ವಿನ್ಸೆಂಟ್ (69ನೇ) ತಲಾ ಒಂದು ಗೋಲು ಗಳಿಸಿದರು.

ವೀಸಾ ರದ್ದು: ಜೇನಾ ಸ್ಪರ್ಧೆ ಅನುಮಾನ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ ಕಿಶೋರ್ ಕುಮಾರ್ ಜೇನಾ ಅವರ ಒಂದು ತಿಂಗಳ ವೀಸಾವನ್ನು ಹಂಗರಿ ಬುಧವಾರ ರದ್ದುಗೊಳಿಸಿದೆ. ಹೀಗಾಗಿ ಅವರು ಆ ದೇಶದ ರಾಜಧಾನಿ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಸಾಧ್ಯತೆ ಕ್ಷೀಣವಾಗಿದೆ.

ಕಳೆದ ತಿಂಗಳು ಶ್ರೀಲಂಕಾದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 84.38 ಮೀ. ದೂರಕ್ಕೆ ಜಾವೆಲಿನ್ ಎಸೆದಿದ್ದ ಜೇನಾ, ವಿಶ್ವ ರ‍್ಯಾಂಕಿಂಗ್ ಕೋಟಾದಡಿ ಈ ಚಾಂಪಿಯನ್‌ಷಿಪ್‌ಗೆ ಆಯ್ಕೆ ಆಗಿದ್ದರು.

31ರಿಂದ ಟೇಬಲ್ ಟೆನಿಸ್ ಟೂರ್ನಿ

ಬೆಂಗಳೂರು: ಬೆಳಗಾವಿಯ ಸಂಗಮ್ ಬೈಲೂರು ಟಿಟಿ ಅಕಾಡೆಮಿಯು 2023–24ನೇ ಋತುವಿನ 3ನೇ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯನ್ನು ಆ.31ರಿಂದ ಸೆ.3ರವರೆಗೆ ಬೆಳಗಾವಿ ಕ್ಲಬ್‌ನಲ್ಲಿ ಆಯೋಜಿಸಲಾಗಿದೆ.

11, 13, 15, 17, 19 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗ, ಪುರುಷರು, ಮಹಿಳೆಯರು ಮತ್ತು ನಾನ್ ಮೆಡಲಿಸ್ಟ್ ಸೆಕ್ಷನ್‌ನಲ್ಲಿ ಸಿಂಗಲ್ಸ್ ಸ್ಪರ್ಧೆಗಳು ನಡೆಯಲಿವೆ. ಆ.25ರೊಳಗೆ ಆನ್‌ಲೈನ್ (ಲಿಂಗ್:https://karnatakatt.web.app/ home) ಮೂಲಕ ನೋಂದಣಿ ಮಾಡುವಂತೆ ಕೋರಲಾಗಿದೆ. ಮಾಹಿತಿಗೆ ಮೊ: 9844053526 .

ಚೆಸ್ ವಿಶ್ವಕಪ್: ಗುಕೇಶ್, ವಿದಿತ್ ನಿರ್ಗಮನ

ಸೆಮಿಫೈನಲ್‌ಗೆ ಕಾರ್ಲ್‌ಸನ್

ಬಾಕು (ಅಜರ್‌ಬೈಜಾನ್): ಭಾರತದ ಡಿ.ಗುಕೇಶ್ ಜೊತೆ ವಿಶ್ವ ಕಪ್ ಚೆಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನ ಎರಡನೇ ಪಂದ್ಯವನ್ನು ಬುಧವಾರ ‘ಡ್ರಾ’ ಮಾಡಿಕೊಳ್ಳುವಲ್ಲಿ ಯಶಸ್ವಿ ಆದ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು 1.5–0.5 ಅಂತರದ ಗೆಲುವಿನೊಡನೆ ಸೆಮಿಫೈನಲ್ ತಲುಪಿಸಿದರು.

ಮಂಗಳವಾರ ಕಪ್ಪುಕಾಯಿಗಳಲ್ಲಿ ಆಡಿದ ಕಾರ್ಲ್‌ಸನ್ ಮೊದಲ ಪಂದ್ಯ ಜಯಿಸಿದ್ದರು. ಭಾರತದ ವಿದಿತ್ ಸಂತೋಷ್ ಗುಜರಾತಿ ಕೂಡ ಹೊರಬಿದ್ದರು. ಸ್ಥಳೀಯ ಫೇವರೀಟ್ ನಿಜತ್ ಅಬಸೋವ್ ಅವರು 1.5–0.5 ಅಂತರದಿಂದ ವಿದಿತ್ ಅವರನ್ನು ಸೋಲಿಸಿದರು. ವಿಶ್ವ ಕ್ರಮಾಂಕದಲ್ಲಿ 97ನೇ ಸ್ಥಾನದಲ್ಲಿರುವ ಅಬಸೋವ್ ಈ ಟೂರ್ನಿಯಲ್ಲಿ ‘ಜೈಂಟ್ ಕಿಲ್ಲರ್’ ಎನಿಸಿದ್ದಾರೆ. ಅನಿಶ್ ಗಿರಿ (ನೆದರ್ಲೆಂಡ್ಸ್), ಪೀಟರ್ ಸ್ವಿಡ್ಲರ್ ನಂತರ ಈಗ ವಿದಿತ್ ಅವರನ್ನೂ ಅಚ್ಚರಿಗೊಳಿಸಿದ್ದಾರೆ.


ಆರ್.ಪ್ರಗ್ನಾನಂದ

ಅಬಸೋವ್ ಮುಂದಿನ ಸುತ್ತಿನಲ್ಲಿ ಕಾರ್ಲ್‌ಸನ್ ಅವರನ್ನು ಎದುರಿಸಲಿದ್ದಾರೆ. ಕಾರ್ಲ್‌ಸನ್ ಈ ಟೂರ್ನಿಯನ್ನು ಒಮ್ಮೆಯೂ ಗೆದ್ದಿಲ್ಲ.

ಪ್ರಜ್ಞಾನಂದ ಆರ್. ಅವರು ಭಾರತೀಯರೇ ಇದ್ದ ಇನ್ನೊಂದು ಕ್ವಾರ್ಟರ್‌ಫೈನಲ್‌ನ ಎರಡನೇ ಪಂದ್ಯದಲ್ಲಿ ಅರ್ಜುನ್ ಎರಿಗೇಶಿ ಅವರನ್ನು ಸೋಲಿಸಿದರು. ಈಗ ಸ್ಕೋರ್ 1–1 ಆಗಿದ್ದು, ಗುರುವಾರ ಇವರಿಬ್ಬರ ನಡುವೆ ರ‍್ಯಾಪಿಡ್ ಪಂದ್ಯಗಳು ನಡೆಯಲಿವೆ.

ಕುಸ್ತಿ: ಮೋಹಿತ್ ವಿಶ್ವ ಚಾಂಪಿಯನ್

ಅಮ್ಮಾನ್ (ಜೋರ್ಡಾನ್), (ಪಿಟಿಐ): ರಷ್ಯಾದ ಎಲ್ದರ್ ಅಖ್ಮಾದುನಿನೋವ್ ಅವರನ್ನು 61 ಕೆ.ಜಿ. ವಿಭಾಗದಲ್ಲಿ ಮಣಿಸಿದ ಮೋಹಿತ್ ಕುಮಾರ್ 2018ರ ನಂತರ ವಿಶ್ವ ಜೂನಿಯರ್ ಚಾಂಪಿಯನ್ ಆದ ಮೊದಲ ಭಾರತೀಯ ಕುಸ್ತಿಪಟು ಎನಿಸಿದರು.

ಬುಧವಾರ ನಡೆದ ಈ ಸೆಣಸಾಟದ ಒಂದು ಹಂತದಲ್ಲಿ ಮೋಹಿತ್ 0–6 ಹಿನ್ನಡೆಯಲ್ಲಿದ್ದರು. ಆದರೆ, ಆರಂಭದ ವೇಗವನ್ನು ಕಳೆದುಕೊಂಡ ರಷ್ಯಾದ ಸ್ಪರ್ಧಿ ನಂತರ ಚೂರು ಬಳಲಿದಂತೆ ಕಂಡಿತು. ರಕ್ಷಣೆಯಲ್ಲಿ ಅವರ ಲೋಪಗಳ ಪೂರ್ಣಲಾಭ ಎತ್ತಿದ ಮೋಹಿತ್ ಸತತ 9 ಪಾಯಿಂಟ್ ಕಲೆಹಾಕಿ ವಿಜಯಿಯಾದರು.

ಈಗ ಸೀನಿಯರ್ ವಿಭಾಗಕ್ಕೆ ಬಡ್ತಿ ಪಡೆದಿರುವ ದೀಪಕ್ ಪೂನಿಯಾ 2018ರಲ್ಲಿ ವಿಶ್ವ ಜೂನಿಯರ್ ಚಾಂಪಿಯನ್ ಆಗಿದ್ದರು.


ಮೋಹಿತ್ ಕುಮಾರ್

ಇದೇ ವೇಳೆ ಮಹಿಳೆಯರ ವಿಭಾಗದಲ್ಲಿ ಪ್ರಿಯಾ ಅವರು 76 ಕೆ.ಜಿ. ವಿಭಾಗದಲ್ಲಿ ಫೈನಲ್ ತಲುಪಿದ್ದಾರೆ. ಅವರು ಸೆಮಿಫೈನಲ್‌ನಲ್ಲಿ ತಾಂತ್ರಿಕ ಕೌಶಲದ ಆಧಾರದ ಮೇಲೆ ಅಮೆರಿಕದ ಕೆನಡಿ ಅಲೆಕ್ಸಿಸ್ ಬ್ಲೇಡ್ಸ್ ಅವರನ್ನು ಸೋಲಿಸಿದರು.

ಜೈದೀಪ್ 74 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಅವರು ಇದಕ್ಕಾಗಿ ಕಿರ್ಗಿಸ್ತಾನದ ಝುಕ್‌ಶಿಲಿಕ್ ರಸ್ಲೊನವಿಚ್ ಅವರನ್ನು ಸೋಲಿಸಿದರು. ಭಾರತದ ಫ್ರೀಸ್ಟೈಲ್ ಸ್ಪರ್ಧಿಗಳು ಇದುವರೆಗೆ ಐದು ಪದಕಗಳನ್ನು ಗೆದ್ದಂತಾಗಿದೆ.

ಡುರಾಂಡ್: ನಾಕೌಟ್ ಪ್ರವೇಶಿಸಿದ ಗೋವಾ

ಗುವಾಹಟಿ (ಪಿಟಿಐ): ಎಫ್.ಸಿ ಗೋವಾ ತಂಡವು ಬುಧವಾರ ಡುರಾಂಟ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 3–0ಯಿಂದ ಡೌನ್‌ಟೌನ್ ಹೀರೋಸ್ ಎಫ್.ಸಿ ತಂಡವನ್ನು ಮಣಿಸಿ ನಾಕೌಟ್‌ಗೆ ಸ್ಥಾನವನ್ನು ಖಚಿತಪಡಿಸಿತು.

‘ಡಿ’ ಗುಂಪಿನ ಪಂದ್ಯದಲ್ಲಿ ಮುಹಮ್ಮದ್ ನೆಮಿಲ್ 19ನೇ ನಿಮಿಷದಲ್ಲಿ ಗೋಲು ತಂದಿತ್ತು, ಗೋವಾಕ್ಕೆ ಮುನ್ನಡೆ ಒದಗಿಸಿದರು. ಕಾರ್ಲೋಸ್ ಮಾರ್ಟಿನೆಜ್ (38ನೇ) ಮತ್ತು ದೇವೇಂದ್ರ ಮುರ್ಗೋಕರ್ (97 + 7ನೇ) ತಲಾ ಒಂದು ಗೋಲು ಗಳಿಸಿ ತಂಡದ ಜಯದ ಅಂತರ ಹೆಚ್ಚಿಸಿದರು.

ಮತ್ತೊಂದು ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ತಂಡವು 1–0ಯಿಂದ ಪಂಜಾಬ್ ಎಫ್‌ಸಿ ತಂಡವನ್ನು ಮಣಿಸಿ, ನಾಕೌಟ್ ಪ್ರವೇಶ ಪಡೆಯಿತು.

ಮನ್ವಂತ್ ಆಲ್‌ರೌಂಡ್ ಆಟ: ಹುಬ್ಬಳ್ಳಿ ಹ್ಯಾಟ್ರಿಕ್

ಮಹಾರಾಜ ಟ್ರೋಫಿ: ಬ್ಲಾಸ್ಟರ್ಸ್ ನಾಯಕ ಮಯಂಕ್ ಅಗರವಾಲ್ ಅರ್ಧಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡರ್ ಮನ್ವಂತ್ ಕುಮಾರ್ ಆಟದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಪಂದ್ಯದಲ್ಲಿ ಭರ್ಜರಿ ಜಯಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 5 ವಿಕೆಟ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು.

ಮೈಸೂರಿನ ಮನ್ವಂತ್ ಕುಮಾರ್ (15ಕ್ಕೆ4, 28 ರನ್) ಬಲಗೈ ಮಧ್ಯಮ ವೇಗದ ಬೌಲಿಂಗ್ ಮತ್ತು ಎಡಗೈ ಬ್ಯಾಟಿಂಗ್ ಮೂಲಕ ತಂಡದ ಗೆಲುವಿನ ರೂವಾರಿಯಾದರು.

ಟಾಸ್ ಗೆದ್ದ ಹುಬ್ಬಳ್ಳಿ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. 19 ವರ್ಷದ ಮನ್ವಂತ್ ಕುಮಾರ್ ಹಾಗೂ ಪ್ರವೀಣ ದುಬೆ (22ಕ್ಕೆ2) ಅವರ ಬೌಲಿಂಗ್ ಬೆಂಗಳೂರು ತಂಡವು 18.4 ಓವರ್‌ಗಳಲ್ಲಿ 105 ರನ್‌ಗಳ ಸಾಧಾರಣ ಮೊತ್ತಕ್ಕೆ ಎಲ್ಲ ವಿಕೆಟ್ ಕಳೆದುಕೊಂಡಿತು. ನಾಯಕ ಮಯಂಕ್ ಅಗರವಾಲ್ (50; 34ಎ, 4X6, 6X1) ಅರ್ಧಶತಕ ಗಳಿಸಿದ್ದರಿಂದ ನೂರರ ಗಡಿ ದಾಟಲು ಸಾಧ್ಯವಾಯಿತು. ಗುರಿ ಬೆನ್ನಟ್ಟಿದ ತಂಡವು 13.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 111 ರನ್ ಗಳಿಸಿ ಜಯಿಸಿತು.


ಹುಬ್ಬಳ್ಳಿ ಟೈಗರ್ಸ್ ತಂಡದ ಮನ್ವಂತ್ ಕುಮಾರ್ ವಿಕೆಟ್ ಗಳಿಸಿ ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 18.4 ಓವರ್‌ಗಳಲ್ಲಿ 105 (ಮಯಂಕ್ ಅಗರವಾಲ್ 50, ಸೂರಜ್ ಅಹುಜಾ 14, ಮನ್ವಂತ್ ಕುಮಾರ್ ಎಲ್ 15ಕ್ಕೆ4, ಪ್ರವೀಣ ದುಬೆ 22ಕ್ಕೆ2) **ಹುಬ್ಬಳ್ಳಿ ಟೈಗರ್ಸ್:** 13.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 111 (ಲವನೀತ್ ಸಿಸೊಡಿಯಾ 33, ಮನೀಷ್ ಪಾಂಡೆ ಔಟಾಗದೆ 23, ಮನ್ವಂತ್ ಕುಮಾರ್ 28, ಸರ್ಫರಾಜ್ ಅಶ್ರಫ್ 22ಕ್ಕೆ2) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್‌ಗೆ 5 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ಮನ್ವಂತ್ ಕುಮಾರ್ ಎಲ್.

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 198 (ಆರ್. ಸಮರ್ಥ್ 48, ಕರುಣ್ ನಾಯರ್ 57, ಮನೋಜ್ ಬಾಂಢಗೆ ಔಟಾಗದೆ 32, ಶಿವಕುಮಾರ್ ರಕ್ಷಿತ್ 21, ಅಭಿಲಾಷ್ ಶೆಟ್ಟಿ 49ಕ್ಕೆ3, ಡಿ. ಅವಿನಾಶ್ 45ಕ್ಕೆ1, ಅಮಿತ್ ವರ್ಮಾ 24ಕ್ಕೆ1) **ಗುಲ್ಬರ್ಗ ಮಿಸ್ಟಿಕ್ಸ್:** 19 ಓವರ್‌ಗಳಲ್ಲಿ 144 (ಎಲ್.ಆರ್. ಚೇತನ್ 44, ಮಿಚೆಲ್ ಹ್ಯಾಡ್ಲಿ ನರೋನಾ 20, ಮನೋಜ್ ಬಾಂಢಗೆ 19ಕ್ಕೆ4) **ಫಲಿತಾಂಶ:** ಮೈಸೂರು ವಾರಿಯರ್ಸ್‌ಗೆ 54 ರನ್ ಜಯ. **ಪಂದ್ಯಶ್ರೇಷ್ಠ:** ಮನೋಜ್ ಬಾಂಢಗೆ.

ಇಂದಿನ ಪಂದ್ಯಗಳು
ಗುಲ್ಬರ್ಗ ಮಿಸ್ಟಿಕ್ಸ್–ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ 1ರಿಂದ)
ಮಂಗಳೂರು ಡ್ರಾಗನ್ಸ್–ಹುಬ್ಬಳ್ಳಿ ಟೈಗರ್ಸ್ (ಸಂಜೆ 5.30ರಿಂದ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

ಮಿಂಚಿದ ಮನೋಜ್; ಮೈಸೂರಿಗೆ ಜಯ

ರಾಯಚೂರು ಹುಡುಗ ಮನೋಜ್ ಬಾಂಢಗೆ (19ಕ್ಕೆ4 ಹಾಗೂ ಅಜೇಯ 32) ಆಲ್‌ರೌಂಡ್ ಆಟದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಮೊದಲ ಜಯದ ಸವಿಯುಂಡಿತು.

ಟೂರ್ನಿಯ ಮೊದಲೆರಡೂ ಪಂದ್ಯಗಳಲ್ಲ ಸೋತಿದ್ದ ಮೈಸೂರು ತಂಡವು 54 ರನ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಗೆದ್ದಿತು. ಟಾಸ್ ಗೆದ್ದ ಗುಲ್ಬರ್ಗ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್. ಸಮರ್ಥ್ (48; 38ಎ, 4X4, 6X2), ನಾಯಕ ಕರುಣ್ ನಾಯರ್ (57; 39ಎ, 4X5, 6X2) ಹಾಗೂ ಮನೋಜ್ ಅವರ ಬ್ಯಾಟಿಂಗ್‌ನಿಂದ ಮೈಸೂರು ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 198 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಗುಲ್ಬರ್ಗ ತಂಡಕ್ಕೆ ಮನೋಜ್ ತಮ್ಮ ಪರಿಣಾಮಕಾರಿ ದಾಳಿಯಿಂದ ಸೋಲಿನ ಬಿಸಿ ಮುಟ್ಟಿಸಿದರು.

ಏಕದಿನ ಕ್ರಿಕೆಟ್: ನಿವೃತ್ತಿ ತೊರೆದ ಸ್ಟೋಕ್ಸ್

ಲಂಡನ್ (ಎಎಫ್‌ಪಿ): ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಯತ್ನದಲ್ಲಿ ಇಂಗ್ಲೆಂಡ್ ತಂಡ ಇರುವಂತೆಯೇ, ಆಲ್ ರೌಂಡರ್ ಬೆನ್ ಸ್ಟೋಕ್ಸ್ ಅವರು ಏಕದಿನ ಕ್ರಿಕೆಟ್‌ಗೆ ಘೋಷಿಸಿದ್ದ ನಿವೃತ್ತಿಯಿಂದ ಹಿಂದೆ ಸರಿದಿದ್ದಾರೆ.

ವಿವಿಧ ಮಾದರಿಗಳ ಅತಿಯಾದ ಕಾರ್ಯಭಾರ ಮತ್ತು ಎಡ ಮೊಣಕಾಲಿನ ನೋವಿನಿಂದಾಗಿ ಸ್ಟೋಕ್ಸ್ ಅವರು 13 ತಿಂಗಳ ಹಿಂದೆ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಅವರು ಸದ್ಯ ಟೆಸ್ಟ್ ತಂಡದ ನಾಯಕರಾಗಿದ್ದಾರೆ.

ಸ್ವದೇಶದಲ್ಲಿ ಇತ್ತೀಚೆಗೆ ನಡೆದ ಆ್ಯಷಸ್ ಸರಣಿಯ ಕೊನೆಯ 3 ಟೆಸ್ಟ್‌ಗಳಲ್ಲಿ ಸ್ಟೋಕ್ಸ್ ಬೌಲಿಂಗ್ ಮಾಡಿರಲಿಲ್ಲ.

ನ್ಯೂಜಿಲೆಂಡ್ ವಿರುದ್ಧ ಮುಂದಿನ ತಿಂಗಳು ನಡೆಯಲಿರುವ ಏಕದಿನ ಪಂದ್ಯಗಳ ಸರಣಿಗಾಗಿ ಇಂಗ್ಲೆಂಡ್ ಆಯ್ಕೆಗಾರರು ಬುಧವಾರ ಪ್ರಕಟಿಸಿರುವ 15 ಸದಸ್ಯರ ತಂಡದಲ್ಲಿ 32 ವರ್ಷದ ಸ್ಟೋಕ್ಸ್ ಸ್ಥಾನ ಪಡೆದಿದ್ದಾರೆ. ಹೀಗಾಗಿ ಅಕ್ಟೋಬರ್– ನವೆಂಬರ್‌ನಲ್ಲಿ ನಡೆಯುವ ವಿಶ್ವಕಪ್ ಟೂರ್ನಿಯಲ್ಲಿ ಅವರು ಪರಿಣತ ಬ್ಯಾಟ್ಸ್‌ಮನ್ ಆಗಿ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 2019ರ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಗೆಲುವಿನ ರೂವಾರಿಗಳಲ್ಲಿ ಸ್ಟೋಕ್ಸ್ ಒಬ್ಬರಾಗಿದ್ದರು.


ಬೆನ್ ಸ್ಟೋಕ್ಸ್

ಸರ್ರೆ ತಂಡದ ವೇಗದ ಬೌಲರ್ ಗಸ್ ಅಟ್ಕಿನ್ಸನ್ ಅವರು ತಂಡದಲ್ಲಿ ಅವಕಾಶ ಪಡೆದಿರುವ ಹೊಸಮುಖ.

ಇಂಗ್ಲೆಂಡ್ ತನ್ನ ಮೊದಲ ಏಕದಿನ ಪಂದ್ಯವನ್ನು ಕಿವೀಸ್ ವಿರುದ್ಧ ಸೆ. 8ರಂದು ಕಾರ್ಡಿಫ್‌ನಲ್ಲಿ ಆಡಲಿದೆ. ಸೆ. 10,13 ಮತ್ತು 15ರಂದು ಉಳಿದ 3 ಪಂದ್ಯಗಳು ನಡೆಯಲಿವೆ. ಐರ್ಲೆಂಡ್ ವಿರುದ್ಧ ಸರಣಿಗೆ ಮುಂದೆ ಪ್ರತ್ಯೇಕ ತಂಡವನ್ನು ಪ್ರಕಟಿಸಲು ನಿರ್ಧರಿಸಲಾಗಿದೆ.

ಈಜು: ವಿದಿತ್, ತನಿಷಿಗೆ ದಾಖಲೆ ಚಿನ್ನ

ಬೆಂಗಳೂರು: ಕರ್ನಾಟಕದ ವಿದಿತ್ ಎಸ್. ಶಂಕರ್ ಮತ್ತು ತನಿಷಿ ಗುಪ್ತಾ ಅವರು ಭುವನೇಶ್ವರದ ಕಳಿಂಗಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನೂತನವಾಗಿ ನಿರ್ಮಿಸಲಾದ ಅಕ್ವಾಟಿಕ್ ಈಜು ಕೇಂದ್ರದಲ್ಲಿ ಬುಧವಾರ ಆರಂಭವಾದ ಸಬ್ ಜೂನಿಯರ್ ಮತ್ತು ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ನೂತನ ದಾಖಲೆ ಬರೆದರು.

ಬಾಲಕರ ಮೊದಲ ಗುಂಪಿನ 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿದಿತ್ ಶಂಕರ್ 29.40 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲನೇ ಸ್ಥಾನ ಗಳಿಸಿದರು. ನೂತನ ಕೂಟ ದಾಖಲೆ ಬರೆದರು. ಬಾಲಕಿಯರ 200 ಮೀ ವೈಯಕ್ತಿಕ ಮೆಡ್ಲೆಯಲ್ಲಿ ತನೀಷಿ ಗುಪ್ತಾ ದಾಖಲೆ ಬರೆದರು.

ಬಾಲಕರು: ಗುಂಪು 1: 50 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್ ಶಂಕರ್ (ಕರ್ನಾಟಕ, ನೂತನ ದಾಖಲೆ 29.40ಸೆ)–1, ರಾಣಾ ಪ್ರತಾಪ್ (ಜಾರ್ಖಂಡ್)–2, ಕೆವಿನ ಜಿನು (ಕೇರಳ)–3. 400 ಮೀ ಫ್ರೀಸ್ಟೈಲ್: ಯುಗ್ ಚೆಲಾನಿ (ರಾಜಸ್ಥಾನ; 4ನಿ, 04.45ಸೆ) –1, ರೋನಕ್ ನಿತಿನ್ ಸಾವಂತ್ (ಮಹಾರಾಷ್ಟ್ರ)–2, ಶಾಶ್ವತ್ ರಾಯ್ (ಬಂಗಾಳ)–3. 100 ಮೀ ಬಟರ್‌ಫ್ಲೈ: ಜ್ಞಾನಂಜಯ್ ಜೆ ಹಜಾರಿಕಾ (ಅಸ್ಸಾಂ; 55.99ಸೆ, ನೂತನ ದಾಖಲೆ)–1, ಕಾರ್ತಿಕೇಯನ್ ನಾಯರ್ (ಕರ್ನಾಟಕ; 56.66ಸೆ) –2, ಪರಾಂಬ್ರತಾ ಬಿಸ್ವಾಸ್ (ಬಂಗಾಳ)–3


ವಿದಿತ್ ಎಸ್. ಶಂಕರ್

ಗುಂಪು 2: 400 ಮೀ ಫ್ರೀಸ್ಟೈಲ್: ಯುವರಾಜ್ ಸಿಂಗ್ (ದೆಹಲಿ; 4ನಿ, 14.29ಸೆ)–1, ಪೃಥ್ವಿರಾಜ್ ಮೆನನ್ (ಕರ್ನಾಟಕ; 4ನಿ, 19.23ಸೆ)–2, ಅಕ್ಷಯ್ ಠಾಕೂರಿಯಾ (ಕರ್ನಾಟಕ; 4ನಿ, 22.12ಸೆ)–3. 100 ಮೀ ಬಟರ್‌ಫ್ಲೈ: ಇಶಾನ್ ಮೆಹ್ರಾ (ಕರ್ನಾಟಕ; 59.14ಸೆ)–1, ಹರಿಜಾರ್ತಿಕ್ ವೇಲು (ಕರ್ನಾಟಕ; 1ನಿ, 01.24ಸೆ)–2, ಮನಶ್ ಪ್ರತಿಮ್ (ಅಸ್ಸಾಂ; 1ನಿ,01.35ಸೆ)–3

ಗುಂಪು 3: 200 ಮೀ ಫ್ರೀಸ್ಟೈಲ್: ಜಸ್ ಸಿಂಗ್ (ಕರ್ನಾಟಕ; 2ನಿ,22.24) –1, ವಿಹಾಂಗ್ ಆಶಿಶ್‌ಕುಮಾರ್ (ಗುಜರಾತ್)–2, ಕಬೀರ್ ಆರ್ಯಮನ್ (ಮಹಾರಾಷ್ಟ್ರ)–3. 100 ಮೀ ಬ್ಯಾಕ್ ಸ್ಟ್ರೋಕ್: ಕೃಶಿವ್ ದೋಶಿ (ಮಧ್ಯಪ್ರದೇಶ; 1ನಿ, 13. 34)–1, ಎಸ್.ಪಿ. ವಿಹಾನ್ (ಗೋವಾ)–2, ಎ.ಪಿ. ಆರ್ಯ (ತಮಿಳುನಾಡು)–3.

ಬಾಲಕಿಯರು: ಗುಂಪು 1: 200 ಮೀ ಐಎಂ: ಮಾನವಿ ವರ್ಮಾ (ಕರ್ನಾಟಕ; 2ನಿ,22.86)–1, ರಾಘವಿ ರಾಮನುಜನ್ (ಮಹಾರಾಷ್ಟ್ರ)–2, ಶುಭ್ರಾಂಶಿನಿ ಪ್ರಿಯದರ್ಶಿನಿ (ಅಸ್ಸಾಂ)–3. 100 ಮೀ ಬ್ಯಾಕ್‌ಸ್ಟ್ರೋಕ್ ವೈಯಕ್ತಿಕ ಮೆಡ್ಲೆ: ರಿಧಿಮಾ ವೀರೇಂದ್ರ (ಕರ್ನಾಟಕ; 1ನಿ, 05.85ಸೆ)–1, ಶಾಲಿನಿ ಆರ್.ದೀಕ್ಷಿತ್ (ಕರ್ನಾಟಕ; 1ನಿ.06.51)–2 , ಸಂಜನಾ ಮಂಗೇಶ್ (ಗೋವಾ)–3.

ಗುಂಪು 2: 200 ಮೀ ವೈಯಕ್ತಿಕ ಮೆಡ್ಲೆ : ತನಿಷಿ ಗುಪ್ತಾ (ಕರ್ನಾಟಕ; 2ನಿ.24.83. ನೂತನ ದಾಖಲೆ)–1, ನೈಶಾ (ಕರ್ನಾಟಕ; 2ನಿ, 29.84ಸೆ)–2, ಸಾನ್ವಿ ದೇಶವಾಲ್ (ಮಹಾರಾಷ್ಟ್ರ)–3. 100 ಮೀ ಬ್ಯಾಕ್‌ಸ್ಟ್ರೋಕ್: ನೈಶಾ (ಕರ್ನಾಟಕ; 1ನಿ, 08.10ಸೆ)–1, ತನಿಷಿ ಗುಪ್ತಾ (ಕರ್ನಾಟಕ; 1ನಿ, 08.72ಸೆ)–2, ಶ್ರೀ ನಿತ್ಯಾ (ತೆಲಂಗಾಣ)–3

ಶೂಟಿಂಗ್ ಚಾಂಪಿಯನ್‌ಷಿಪ್: ಭಾರತಕ್ಕೆ ಪದಕಗಳ ನಿರೀಕ್ಷೆ

ಬಾಕು (ಅಜರ್‌ಬೈಜಾನ್), (ಪಿಟಿಐ): ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್ ಗುರುವಾರ ಇಲ್ಲಿ ಆರಂಭವಾಗಲಿದ್ದು, ಭಾರತದ ಪುರುಷರ ಮತ್ತು ಮಹಿಳಾ ತಂಡಗಳು, 10 ಮೀ. ಏರ್‌ಪಿಸ್ತೂಲ್ ವಿಭಾಗದಲ್ಲಿ ಪದಕಕ್ಕೆ ಗುರಿಯಿಡಲಿದ್ದಾರೆ. ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯಲೂ ಈ ಚಾಂಪಿಯನ್‌ಷಿಪ್ ಅವಕಾಶ ಒದಗಿಸಿದೆ.

ಸರಬ್ಜೋತ್ ಸಿಂಗ್, ಶಿವ ನರ್ವಾಲ್ ಮತ್ತು ಅರ್ಜುನ್ ಸಿಂಗ್ ಚೀಮಾ ಪುರುಷರ ತಂಡದಲ್ಲಿದ್ದಾರೆ. ಮಹಿಳಾ ತಂಡದಲ್ಲಿ ದಿವ್ಯಾ ಟಿ.ಎಸ್, ಇಶಾ ಸಿಂಗ್, ಪಲಕ್ ಇದ್ದಾರೆ. ಒಟ್ಟಾರೆ ಈ ಕೂಟದಲ್ಲಿ 53 ಸದಸ್ಯರ ಭಾರತ ತಂಡ ಭಾಗವಹಿಸಲಿದೆ. 101 ತಂಡಗಳು ಭಾಗವಹಿಸುತ್ತಿದ್ದು, ಭಾರತ ತಂಡವೇ ಅತಿ ಹೆಚ್ಚು ಸ್ಪರ್ಧಿಗಳನ್ನು ಒಳಗೊಂಡಿದೆ. ಜರ್ಮನಿ ಎರಡನೇ ಅತಿ ದೊಡ್ಡ ತಂಡ ಕಳಿಸಿದ್ದು 40 ಮಂದಿ ಭಾಗವಹಿಸುತ್ತಿದ್ದಾರೆ.

ಭಾರತದ ಮೂವರು ಶೂಟರ್‌ಗಳು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಅವರೆಂದರೆ– ರುದ್ರಾಂಕ್ಷ್ ಪಾಟೀಲ್ (ಪುರುಷರ 10 ಮೀ. ಏರ್ ರೈಫಲ್), ಸ್ವಪ್ನಿಲ್ ಕುಸಾಲೆ (ಪುರುಷರ 50 ಮೀ. ರೈಫಲ್ 3–ಪೊಸಿಷನ್) ಮತ್ತು ಭವನೀಶ್ ಮೆಂಡಿರಟ್ಟ (ಪುರುಷರ ಟ್ರ್ಯಾಪ್ ವಿಭಾಗ). ಆಗಸ್ಟ್ 24ರವರೆಗೆ ನಡೆಯುವ ಈ ಚಾಂಪಿಯನ್‌ಷಿಪ್‌ನಲ್ಲಿ 15 ಫೈನಲ್‌ಗಳು ನಡೆಯಲಿವೆ. ಒಲಿಂಪಿಕ್ಸ್‌ಗೆ ನಾಲ್ಕು ಕೋಟಾ ಈ ಚಾಂಪಿಯನ್‌ಷಿಪ್‌ನಿಂದ ಇರಲಿದೆ. ಹಾಲಿ, ಮಾಜಿ ಒಲಿಂಪಿಕ್ ಚಾಂಪಿಯನ್ನರ ಜೊತೆ ವಿಶ್ವ ಚಾಂಪಿಯನ್ ಶೂಟರ್‌ಗಳು ಕಣದಲ್ಲಿದ್ದಾರೆ.

‘ಜಿ20–ಭಾರತದ ನೇತೃತ್ವದಲ್ಲಿ ದಕ್ಷಿಣ ರಾಷ್ಟ್ರಗಳಿಗೆ ಧ್ವನಿ’

ಲಂಡನ್ (ಪಿಟಿಐ): ‘ಜಿ20 ಗುಂಪಿನ ಅಧ್ಯಕ್ಷತೆ ವಹಿಸಿರುವ ಭಾರತವು ಜಾಗತಿಕ ಮಟ್ಟದಲ್ಲಿ ದಕ್ಷಿಣ ರಾಷ್ಟ್ರಗಳಿಗೆ ಧ್ವನಿ ನೀಡಲು ಸಹಾಯಕ ವಾಗಿದೆ’ ಎಂದು ಬ್ರಿಟನ್‌ನಲ್ಲಿರುವ ಭಾರತೀಯ ಹೈಕಮಿಷನರ್ ವಿಕ್ರಂ ದೊರೈಸ್ವಾಮಿ ಹೇಳಿದ್ದಾರೆ.


ವಿಕ್ರಂ ದೊರೈಸ್ವಾಮಿ

ಲಂಡನ್‌ನಲ್ಲಿ ಮಂಗಳವಾರ ಭಾರತದ 77ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ನೀಡಿದ ಸಂದರ್ಶನವೊಂದರಲ್ಲಿ ಅವರು, ಭಾರತದ ಪ್ರತಿ ಭಾಗದಲ್ಲೂ ಜಿ20 ಸಭೆಗಳನ್ನು ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಕ್ರಮವನ್ನು ಪ್ರಶಂಸಿಸಿದ್ದಾರೆ.

‘ಜಾಗತಿಕ ಮಟ್ಟದಲ್ಲಿ ಎಲ್ಲಾ ದೇಶಗಳನ್ನು ಒಳಗೊಳ್ಳಲು ಹಾಗೂ ಉತ್ತಮ ಅವಕಾಶಗಳನ್ನು ಸೃಷ್ಟಿಸಲು ಜಿ20 ಪ್ರಧಾನ ವೇದಿಕೆಯಾಗಿದೆ. ಅದು ಡಿಜಿಟಲ್ ಅಭಿವೃದ್ಧಿಯ ಕಾರ್ಯಸೂಚಿಯಾಗಿರಲೀ ಅಥವಾ ಬಡತನ ನಿವಾರಣೆಯ ವಿಷಯವೇ ಇರಲಿ... ಎಲ್ಲ ವಿಚಾರದಲ್ಲೂ ಭಾರತವು ಕಾರ್ಯತತ್ಪರವಾಗಿದೆ. ‘ವಸುದೈವ ಕುಟುಂಬಕಂ’ ಅಂದರೆ ಇಡೀ ವಿಶ್ವವೇ ಒಂದು ಕುಟುಂಬ ಎಂಬ ಪರಿಭಾಷೆಯಲ್ಲಿ ಜಿ20 ಕಾರ್ಯಸೂಚಿಯನ್ನು ಒಳಗೊಂಡು ಮುನ್ನಡೆಸುವ ಗುರಿಯನ್ನು ಪ್ರಧಾನಿ ಮೋದಿ ಅವರು ಹೊಂದಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

ಸೆ. 9 ಮತ್ತು 10ರಂದು ನವದೆಹಲಿಯಲ್ಲಿ ಜಿ20 ವಿಶ್ವನಾಯಕರ ಶೃಂಗಸಭೆಯು ನಡೆಯಲಿದೆ.

‘ತೋಷಖಾನ’: 22ಕ್ಕೆ ಇಮ್ರಾನ್ ವಿಚಾರಣೆ

ಇಸ್ಲಾಮಾಬಾದ್ (ಪಿಟಿಐ): ತೋಷಖಾನ ಭ್ರಷ್ಟಾಚಾರ ಪ್ರಕರಣದಲ್ಲಿ ಅಪರಾಧಿ ಎಂದು ಘೋಷಿಸಿ ಸೆಷನ್ಸ್ ನ್ಯಾಯಾಲಯವೊಂದು ಹೊರಡಿಸಿರುವ ಆದೇಶದ ವಿರುದ್ಧ ಪಾಕಿಸ್ತಾನ ಪದಚ್ಯುತ ಪ್ರಧಾನಿ ಇಮ್ರಾನ್ ಖಾನ್ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಇಸ್ಲಾಮಾಬಾದ್ ಹೈಕೋರ್ಟ್ ಆಗಸ್ಟ್ 22ರಂದು ನಡೆಸಲಿದೆ.



ಸೆಷನ್ಸ್ ನ್ಯಾಯಾಲಯವು ಉದ್ದೇಶಪೂರ್ವಕವಾಗಿ ಇಮ್ರಾನ್ ಖಾನ್ ಅವರನ್ನು ದೋಷಿ ಎಂದು ಘೋಷಿಸಿದೆ.

ಪಾಕಿಸ್ತಾನ ಚುನಾವಣಾ ಆಯೋಗದ ಪರ ವಕೀಲರ ಅಂತಿಮ ವಾದಕ್ಕೆ ಪ್ರತಿವಾದ ಹೂಡಲು ಇಮ್ರಾನ್ ಪರ ವಕೀಲರಿಗೆ ನ್ಯಾಯಾಲಯ ಅವಕಾಶ ನೀಡಲಿಲ್ಲ ಎಂದು ಮೇಲ್ಮನವಿಯಲ್ಲಿ ಹೇಳಲಾಗಿದೆ.

ಇಮ್ರಾನ್ ಅವರಿಗೆ ಸೆಷನ್ಸ್ ನ್ಯಾಯಾಲಯವು ಆಗಸ್ಟ್ 5ರಂದು ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ₹1 ಲಕ್ಷ (ಪಾಕಿಸ್ತಾನಿ ಕರೆನ್ಸಿ) ದಂಡ ವಿಧಿಸಿದೆ. ಈ ಬೆನ್ನಲ್ಲೇ ಚುನಾವಣಾ ಆಯೋಗವು ಅವರನ್ನು ಐದು ವರ್ಷಗಳ ಅವಧಿಗೆ ಅನರ್ಹಗೊಳಿಸಿ ಆದೇಶ ಹೊರಡಿಸಿದೆ.

ಪಾಕ್: ಧರ್ಮನಿಂದನೆ ಆರೋಪ, ಹಲವು ಚರ್ಚ್‌ಗಳ ಧ್ವಂಸ

ಲಾಹೋರ್ (ಪಿಟಿಐ): ಧರ್ಮನಿಂದನೆ ಆರೋಪದ ಮೇಲೆ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಬುಧವಾರ ಹಲವು ಚರ್ಚ್‌ಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫೈಸಲಾಬಾದ್‌ನ ಜರನ್ವಾಲಾ ಜಿಲ್ಲೆಯ ಇಸಾ ನಗರಿ ಪ್ರದೇಶದಲ್ಲಿರುವ ಸಾಲ್ವೇಶನ್ ಆರ್ಮಿ ಚರ್ಚ್, ಯುನೈಟೆಡ್ ಪ್ರೆಸ್ಬಿಟೇರಿಯನ್ ಚರ್ಚ್, ಅಲೈಡ್ ಫೌಂಡೇಶನ್ ಚರ್ಚ್ ಮತ್ತು ಶೆಹ್ರೂನ್ವಾಲಾ ಚರ್ಚ್ ಅನ್ನು ಲೂಟಿ ಮಾಡಲಾಗಿದೆ ಎಂದು ಜರನ್ವಾಲಾ ತಹಸಿಲನ್ ಪಾದ್ರಿ ಇಮ್ರಾನ್ ಭಟ್ಟಿ ಹೇಳಿದ್ದಾರೆ ಎಂದು ಡಾನ್ ಡಾಟ್ ಕಾಂ ವರದಿ ಮಾಡಿದೆ.

ಧರ್ಮನಿಂದನೆ ಆರೋಪ ಹೊತ್ತಿರುವ ಕೆಲಸದ ವ್ಯಕ್ತಿಯ ಮನೆಯನ್ನು ಸಹ ನೆಲಸಮಗೊಳಿಸಲಾಗಿದೆ ಎಂದು ಭಟ್ಟಿ ಹೇಳಿದ್ದಾರೆ.

‘ಚರ್ಚ್‌ಗಳ ಕೆಲ ಭಾಗಗಳನ್ನು ಧ್ವಂಸ ಗೊಳಿಸಿದ್ದಾರೆ’ ಎಂದು ಪಂಜಾಬ್ ಪೊಲೀಸ್ ಮುಖ್ಯಸ್ಥ ಉಸ್ಮಾನ್ ಅನ್ವರ್ ಹೇಳಿಕೆ ಉಲ್ಲೇಖಿಸಿ ಡಾನ್ ಡಾಟ್ ಕಾಂ ತಿಳಿಸಿದೆ. ಚರ್ಚ್ ಆಫ್ ಪಾಕಿಸ್ತಾನದ ಅಧ್ಯಕ್ಷ ಬಿಷಪ್ ಆಜಾದ್ ಮಾರ್ಷಲ್, ‘ಪವಿತ್ರ ಕುರಾನ್ ಉಲ್ಲಂಘಿಸಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿ, ಬೈಬಲ್‌ಗಳನ್ನು ಅಪವಿತ್ರಗೊಳಿಸಲಾಗಿದೆ. ಕ್ರೈಸ್ತರಿಗೆ ಚಿತ್ರಹಿಂಸೆ ಮತ್ತು ಕಿರುಕುಳ ನೀಡಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಹವಾಯಿ ಕಾಳ್ಗಿಚ್ಚು 106ಕ್ಕೇರಿದ ಸಾವಿನ ಸಂಖ್ಯೆ

ಲಹೈನಾ (ಹವಾಯಿ) (ಎಪಿ): ಅಮೆರಿಕದ ಹವಾಯಿ ದ್ವೀಪದ ಮಾಯಿಯಲ್ಲಿ ಭೀಕರ ಕಾಳ್ಗಿಚ್ಚು ಹರಡಿ ಹಲವು ಪ್ರದೇಶಗಳು ನಾಶವಾಗಿವೆ. ಅನೇಕರು ಜೀವ ಕಳೆದುಕೊಂಡಿದ್ದಾರೆ. ಸಾವಿನ ಸಂಖ್ಯೆ 106ಕ್ಕೇರಿದೆ.

ಐತಿಹಾಸಿಕ ಪಟ್ಟಣ ಲಹೈನಾವನ್ನು ಸುಟ್ಟುಹಾಕಿದ ಕಾಳ್ಗಿಚ್ಚಿನಲ್ಲಿ ಸಾವನ್ನಪ್ಪಿದ ಇಬ್ಬರ ಹೆಸರನ್ನು ಮಾಯಿ ಕೌಂಟಿ ಬಿಡುಗಡೆ ಮಾಡಿದೆ.

13,000ಕ್ಕೂ ಹೆಚ್ಚು ಕಟ್ಟಡಗಳು ಭಸ್ಮವಾಗಿವೆ. ಸಾವಿರಾರು ಜನರು ನಿರ್ವಸತಿಗರಾಗಿ, ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಮೃತಪಟ್ಟವರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದೆ. ಅಮೆರಿಕ ಆರೋಗ್ಯ ಮತ್ತು ಮಾನವ ಸೇವೆಗಳ ಇಲಾಖೆಯ ವಿಧಿವಿಜ್ಞಾನ ತಜ್ಞರು ಮತ್ತು ಶ್ವಾನದಳದ ನೆರವಿನಿಂದ ಶವಗಳ ಗುರುತು ಪತ್ತೆ ಹಚ್ಚಲಾಗುತ್ತಿದೆ.